ಅಧ್ಯಾಯ 9

# ಹೊಸ ಲೋಕಕ್ಕಾಗಿ ದೇವರ ಶಾಸನಗಳು ಮತ್ತು ಒಡಂಬಡಿಕೆ

ನಾವೆಯಿಂದ ಹೊರಗೆ ಬಂದ ಬಳಿಕ, ನೋಹನು ಎರಡನೆಯ ಆದಾಮನಂತೆ ಕಳುಹಿಸಲ್ಪಟ್ಟನು. ಲೋಕವು ಪಾಪದಿಂದ ಕಲುಷಿತಗೊಂಡು ನಾಶಗೊಳಿಸಲ್ಪಟ್ಟಿತ್ತು, ಆದರೆ ನೋಹನ ಕುಟುಂಬವು ಇನ್ನೂ ದೇವರ ಸ್ವರೂಪವನ್ನು ಹೊಂದಿದ್ದರು. ದೇವರು ಸಕಲ ಜೀವರಾಶಿಗಳಿಗೆ ನಾವೆಯಲ್ಲಿ ಸಂರಕ್ಷಿಸಲ್ಪಟ್ಟ ನೋಹ ಮತ್ತು ಇತರರ ಮೂಲಕ ಒಂದು ಹೊಸ ಆರಂಭವನ್ನು ಪ್ರತಿಷ್ಠಾಪಿಸಿದನು.

## ಹೊಸ ಲೋಕಕ್ಕಾಗಿ ದೈವಿಕ ಏರ್ಪಾಡುಗಳು (9:1-7)

**1 ದೇವರು ನೋಹನನ್ನೂ ಅವನ ಮಕ್ಕಳನ್ನೂ ಆಶೀರ್ವದಿಸಿ ಅವರಿಗೆ -
ಬಹುಸಂತಾನವುಳ್ಳವರಾಗಿ ಹೆಚ್ಚಿರಿ; ಭೂಲೋಕದಲ್ಲೆಲ್ಲಾ ತುಂಬಿಕೊಳ್ಳಿರಿ. 2 ಭೂಮಿಯ
ಮೇಲಿರುವ ಎಲ್ಲಾ ಮೃಗಗಳೂ ಆಕಾಶದ ಎಲ್ಲಾ ಪಕ್ಷಿಗಳೂ ನೆಲದ ಮೇಲೆ ಹರಿದಾಡುವ ಎಲ್ಲಾ
ಕ್ರಿಮಿಗಳೂ ಸಮುದ್ರದ ಮೀನುಗಳೂ ನಿಮಗೆ ಬೆದರಿ ಅಂಜಿಕೊಳ್ಳುವವು; ನಾನು ಅವುಗಳನ್ನೆಲ್ಲಾ
ನಿಮ್ಮ ಸ್ವಾಧೀನಕ್ಕೆ ಕೊಟ್ಟಿದ್ದೇನೆ. 3 ಭೂಮಿಯ ಮೇಲೆ ತಿರುಗುವ ಎಲ್ಲಾ ಜೀವಜಂತುಗಳೂ
ನಿಮಗೆ ಆಹಾರವಾಗಿರುವವು. ನಾನು ನಿಮ್ಮ ಆಹಾರಕ್ಕೆ ಪೈರುಗಳನ್ನು ಕೊಟ್ಟಂತೆ ಇವುಗಳನ್ನೂ
ಕೊಟ್ಟಿದ್ದೇನೆ. 4 ಆದರೆ ರಕ್ತದಿಂದ ಕೂಡಿರುವ ಮಾಂಸವನ್ನು ನೀವು ತಿನ್ನಬಾರದು;
ರಕ್ತವು ಜೀವವಷ್ಟೆ. 5 ಇದಲ್ಲದೆ ನಿಮ್ಮ ರಕ್ತವನ್ನು ಸುರಿಸಿ ಜೀವತೆಗೆಯುವವರಿಗೆ
ಮುಯ್ಯಿತೀರಿಸುವೆನು. ಮೃಗವಾಗಿದ್ದರೆ ಅದಕ್ಕೂ ಮನುಷ್ಯನಾಗಿದ್ದರೆ, ಹತವಾದವನು ಅವನ
ಸಹೋದರನಾಗಿರುವದರಿಂದ, ಅವನಿಗೂ ಮುಯ್ಯಿ ತೀರಿಸುವೆನೆಂದು ತಿಳಿದುಕೊಳ್ಳಿರಿ.
6 ನರಹತ್ಯವು ಸಹೋದರ ಹತ್ಯವಲ್ಲವೇ. ದೇವರು ಮನುಷ್ಯರನ್ನು ತನ್ನ ಸ್ವರೂಪದಲ್ಲಿಯೇ
ಉಂಟುಮಾಡಿದನಾದ್ದರಿಂದ ಯಾರು ಮನುಷ್ಯನ ರಕ್ತವನ್ನು ಸುರಿಸುತ್ತಾರೋ ಅವರ ರಕ್ತವನ್ನು
ಮನುಷ್ಯರೇ ಸುರಿಸುವರು. 7 ನೀವು ಅಭಿವೃದ್ಧಿಯಾಗಿ ಹೆಚ್ಚಿರಿ; ಭೂಮಿಯ ಮೇಲೆ ನಿಮಗೆ ಬಹು
ಸಂತಾನವಾಗಲಿ ಎಂದು ಹೇಳಿದನು.**

**ವಚನ 1. ದೇವರು** 1:28ರಲ್ಲಿನ ಮೂಲ ಆಶೀರ್ವಾದವನ್ನು ಪುನರುಜ್ಜೀವಗೊಳಿಸುವ ಮೂಲಕ **ನೋಹನನ್ನೂ ಅವನ ಮಕ್ಕಳನ್ನೂ ಆಶೀರ್ವದಿಸಿ** ಹೇಳಿದನು. ಇಲ್ಲಿ ಆಜ್ಞೆಯು ಮೊಟಕುಗೊಳಿಸಲ್ಪಟ್ಟಿದೆಯಾದರೂ, ಮಾತುಗಳಂತೂ ಪದಶಃ ಇರುತ್ತವೆ: **ಬಹುಸಂತಾನವುಳ್ಳವರಾಗಿ ಹೆಚ್ಚಿರಿ; ಭೂಲೋಕದಲ್ಲೆಲ್ಲಾ ತುಂಬಿಕೊಳ್ಳಿರಿ** (ನೋಡಿರಿ 8:17). ಈ

ವಿಭಾಗದ ಮುಕ್ತಾಯದ ವೇಳೆ ಇದೇ ರೀತಿಯ ಆಶೀರ್ವಾದವು ಕೊಡಲ್ಪಟ್ಟಿದೆ, ಆದರೆ ಅದು ವಿವರಿಸಲ್ಪಟ್ಟ ಮಾತುಗಳಲ್ಲಿ ಕಾಣಿಸಿಕೊಳ್ಳುತ್ತದೆ (9:7). ಸಂತಾನೋತ್ಪತ್ತಿಯ ಆರಂಭಿಕ ಜವಾಬ್ದಾರಿಯು ನೆನಪಿಸಲ್ಪಟ್ಟಿದೆ; ಲೋಕವು ಮತ್ತೊಂದಾವರ್ತಿ ಜನರಿಂದ ತುಂಬಿಸಲ್ಪಡುವುದು ಅಗತ್ಯವಿತ್ತು.

**ವಚನಗಳು 2, 3.** ಪ್ರಾಣಿ ಜಗತ್ತಿನ ಮೇಲೆ ಮಾನವನ ದೊರೆತನದ ಬಗ್ಗೆ ಪುನರುಚ್ಚಾರ ಮಾಡಿದ ಬಳಿಕ, ದೇವರು ಪ್ರಾಣಿಗಳನ್ನು ಕೊಂದು ತಿನ್ನುವ ವಿಷಯದಲ್ಲಿ ಅಪ್ಪಣೆಗಳನ್ನು ನೀಡಿದನು. ಮನುಷ್ಯನು ಕಡ್ಡಾಯವಾಗಿ ಸಸ್ಯಹಾರಿಯಾಗಿದ್ದನೋ, ಅಥವಾ ಪ್ರಳಯಕ್ಕೆ ಮುನ್ನ ಯೆಹೋವನಿಗೆ ಯಜ್ಞಗಳಾಗಿ ಸಮರ್ಪಿಸಲ್ಪಟ್ಟ ಪ್ರಾಣಿಗಳ ಸ್ವಲ್ಪ ಮಾಂಸವನ್ನು ಸೇವಿಸುತ್ತಿದ್ದನೋ? ಇದಕ್ಕೆ ಉತ್ತರವನ್ನು ಯಾವದೇ ಖಚಿತತೆಯೊಂದಿಗೆ ದೃಢನಿರ್ಣಯ ಮಾಡುವದಕ್ಕೆ ಸಾಧ್ಯವಿಲ್ಲ (1:29, 30ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಎರಡನೆಯದ್ದು ಪ್ರಳಯಪೂರ್ವದ ಲೋಕದಲ್ಲಿ ಸೂಚ್ಯಾರ್ಥವಾಗಿರಬಹುದಾಗಿದೆ, ಆದರೆ ಇದೇ ಮೊದಲ ಬಾರಿಗೆ ದೇವರು ಏದೆನ್ ತೋಟದಲ್ಲಿ **ಪೈರುಗಳನ್ನು** ಕೊಟ್ಟಿದ್ದಂತೆಯೇ (1:29), **ತಿರುಗುವ ಎಲ್ಲಾ ಜೀವಜಂತುಗಳೂ ನಿಮಗೆ ಆಹಾರವಾಗಿರುವವು** ಎಂದು ಸ್ಪಷ್ಟವಾಗಿ ಮಾನವರಿಗೆ ತಿಳಿಸಿದ್ದನು.

**ಎಲ್ಲಾ ಮೃಗಗಳೂ ಆಕಾಶದ ಎಲ್ಲಾ ಪಕ್ಷಿಗಳೂ ನೆಲದ ಮೇಲೆ ಹರಿದಾಡುವ ಎಲ್ಲಾ ಕ್ರಿಮಿಗಳೂ ಸಮುದ್ರದ ಮೀನುಗಳೂ** ಇವುಗಳಲ್ಲಿ ಕೆಲವೊಂದನ್ನು ಆಹಾರಕ್ಕಾಗಿ ಕೊಲ್ಲುವಂತೆ ಅಧಿಕಾರವು ಮನುಷ್ಯರಿಗೆ ಕೊಡಲ್ಪಟ್ಟಿತ್ತಾದ್ದರಿಂದ, ಪ್ರಾಣಿ ಜಗತ್ತಿನಲ್ಲಿ ಒಂದು ಮೂಲಭೂತವಾದ ಬದಲಾವಣೆಯು ಸಂಭವಿಸಿದಂತೆ ಕಾಣಿಸುತ್ತದೆ. ಆದಿಯಿಂದಲೂ, ಮಾನವನು ತನಗಿಂತ ಕಡಿಮೆಯಾದ ಸಕಲ ಜೀವರಾಶಿಗಳ ಮೇಲೆ ಧೊರೆತನವನ್ನು ಹೊಂದಿರಬೇಕಾಗಿತ್ತು (1:26-28), ಆದಾಗ್ಯೂ ಈ ವಾಕ್ಯಭಾಗವು ಅದಕ್ಕಿಂತ ಬಲವಾದ ಸಂಗತಿಯೊಂದನ್ನು ಸೂಚಿಸುತ್ತದೆ. ಈ ಕಾಲ ಮೊದಲ್ಗೊಂಡು, ಅಲ್ಪ ಜೀವರಾಶಿಗಳು ಮಾನವರ ಎದುರಿನಲ್ಲಿ ಒತ್ತಡ ಮತ್ತು ಎಚ್ಚರಿಕೆಯಿಂದ ಇರುವದಷ್ಟೆ ಆಗಿರಲಿಲ್ಲ, ಆದರೆ ಅವುಗಳು ಮಾನವರನ್ನು ಕಂಡು **ಬೆದರಿ ಅಂಜಿಕೊಳ್ಳುವವು**. ಪ್ರಾಣಿಗಳು ತೋಟದಲ್ಲಿ ಆದಾಮನ ಸಂಗಡ (2:19, 20) ಮತ್ತು ನಾವೆಯೊಳಗೆ ನೋಹನ ಸಂಗಡ (7:8, 9) ಇಟ್ಟುಕೊಂಡಿದ್ದ ಸಂಬಂಧಕ್ಕಿಂತಲೂ ಈ ಹೊಸ ಸಂಬಂಧವು ವ್ಯತ್ಯಾಸವಾಗಿ ಕಾಣಿಸುತ್ತದೆ.

ಈಗಿರುವ ವಾಕ್ಯಭಾಗದಿಂದ ಉದ್ಭವವಾಗುವ ಮತ್ತೊಂದು ಗೊಂದಲವನ್ನುಂಟು ಮಾಡುವ ವಿವಾದಂಶವು ಏನೆಂದರೆ ದೇವರು ಪ್ರಳಯದ ನಂತರದಲ್ಲಿ ಮಾನವರಿಗೆ ಅಕ್ಷರಶಃ "ಎಲ್ಲಾ ಜೀವಜಂತುಗಳನ್ನು" ಆಹಾರವಾಗಿ ಕೊಟ್ಟನೋ ಅಥವಾ ಇಲ್ಲವೋ ಎಂಬುದೆ. ಆತನು ಈ ಎಲ್ಲಾ ಜನರಿಗೆ ಶುದ್ಧ ಪ್ರಾಣಿಗಳನ್ನು, ಪಕ್ಷಿಗಳನ್ನು, ಮತ್ತು ಕ್ರಿಮಿಗಳನ್ನು ಮಾತ್ರವೇ ಅಲ್ಲ, ಆದರೆ ಅನಂತರದಲ್ಲಿ ಮೋಶೆಯ ಧರ್ಮಶಾಸ್ತ್ರದೊಳಗೆ "ಅಶುದ್ಧ" ಎಂದು ಪರಿಗಣಿಸಲ್ಪಟ್ಟವುಗಳನ್ನು ಸಹ ಸೇವಿಸುವಂತೆ ಅನುಮತಿಸಿದನೋ (ಯಾಜಕಕಾಂಡ 11:1-47)? ಶುದ್ಧ ಪ್ರಾಣಿಗಳನ್ನು ಅಶುದ್ಧ ಪ್ರಾಣಿಗಳಿಂದ ಬೇರ್ಪಡಿಸಲಾಗಿತ್ತಾದ್ದರಿಂದ (7:2, 8; 8:20), ಬಹುಶಃ ಇಲ್ಲಿಯೂ ಆ ವ್ಯತ್ಯಾಸತೆಯನ್ನು ಊಹಿಸಿಕೊಳ್ಳಬಹುದಾಗಿದೆ. ಹಾಗಿದ್ದರೂ, ಮಾನವರು ಅಶುದ್ಧವಾದವುಗಳಲ್ಲದೆ ಶುದ್ಧ ಪ್ರಾಣಿಗಳನ್ನು ಮಾತ್ರವೇ ಸೇವಿಸಬೇಕೆಂಬುದು ದೇವರ ಬಯಕೆಯಾಗಿದ್ದಲ್ಲಿ ಇಲ್ಲಿ ಆತನು "ಎಲ್ಲಾ ಜೀವಜಂತುಗಳನ್ನು" ಸೇರ್ಪಡೆಗೊಳಿಸಿದ್ದು ವಿಚಿತ್ರವೇನಿಸುತ್ತದೆ.

ಈ ತರ್ಕದೊಂದಿಗೆ ಸಾಮಂಜಸ್ಯತೆಯಿರಬೇಕಾದರೆ, ಶುದ್ಧ ಮತ್ತು ಅಶುದ್ಧ ಪ್ರಾಣಿಗಳ

ಕುರಿತಾದ ಹೊಸ ಒಡಂಬಡಿಕೆಯ ಹೇಳಿಕೆಯನ್ನು ನಾವು ಇದೇ ರೀತಿಯಲ್ಲಿಯೇ ಕಾಣತಕ್ಕದ್ದು. ಯೇಸುವು "ತಿನ್ನುವ ಪದಾರ್ಥಗಳೆಲ್ಲಾ ಶುದ್ಧವೆಂದು" ಹೇಳಿದನೆಂಬುದಾಗಿ ಮಾರ್ಕನು ತಿಳಿಸಿದನು (ಮಾರ್ಕ 7:19) ಮತ್ತು ಪೌಲನು "ಆತನು ಉಂಟುಮಾಡಿದ್ದೆಲ್ಲವೂ ಒಳ್ಳೇದೇ; ದೇವರ ಸ್ತೋತ್ರಮಾಡಿ ತೆಗೆದುಕೊಳ್ಳುವ ಪಕ್ಷಕ್ಕೆ ಯಾವದನ್ನೂ ನಿಷಿದ್ಧವೆಂದು ಹೇಳತಕ್ಕದ್ದಲ್ಲ" ಎಂಬುದಾಗಿ ಹೇಳಿದನು (1 ತಿಮೊಥೆ 4:4) ಎಂಬುದರ ಹೊರತಾಗಿಯೂ, ಇಂದು ಶುದ್ಧ ಮತ್ತು ಅಶುದ್ಧ ಪ್ರಾಣಿಗಳ ನಡುವಿನ ವ್ಯತ್ಯಾಸವು ಅನ್ವಯವಾಗುತ್ತದೆಂಬ ನಿರ್ಧಾರಕ್ಕೆ ನಾವು ಬರತಕ್ಕದ್ದೋ? ಸ್ಪಷ್ಟವಾಗಿಯೂ ಅಗತ್ಯವಿಲ್ಲ, ಅದೇ ರೀತಿಯೇ ಪ್ರಳಯದ ನಂತರ ದೇವರು ಆಹಾರದ ವಿಷಯದಲ್ಲಿ ಯಾವದೇ ನಿಷೇಧಗಳನ್ನು ಹೇರದಿರುವದರ ಕುರಿತಾಗಿ ಆ ನಿರ್ಣಯಕ್ಕೆ ಬರುವದು ಅವಶ್ಯವಿಲ್ಲ ಎನ್ನಿಸುತ್ತದೆ. ಧರ್ಮಶಾಸ್ತ್ರಕ್ಕೆ ಮುನ್ನ, ಸ್ಪಷ್ಟವಾಗಿರುವಂತೆ ಶುದ್ಧ ಮತ್ತು ಅಶುದ್ಧ ಪ್ರಾಣಿಗಳ ವಿಷಯವಾದ ನಿಷೇಧವು ಕೇವಲ ಯಜ್ಞಕ್ಕಾಗಿ ಅರ್ಪಿಸುವ ಪ್ರಾಣಿಗಳಿಗೆ ಅನ್ವಯಿಸಲ್ಪಟ್ಟಿತ್ತೇ, ಹೊರತು ಆಹಾರಕ್ಕೆ ಅಲ್ಲ.

**ವಚನ 4.** ಬೈಬಲಿನಲ್ಲಿ ಇದೇ ಮೊದಲ ಬಾರಿಗೆ ದೇವರು ಮಾನವನಿಗೆ **ರಕ್ತದಿಂದ ಕೂಡಿರುವ ಮಾಂಸವನ್ನು ನೀವು ತಿನ್ನಬಾರದು; ರಕ್ತವು ಜೀವವಷ್ಟೆ** ಎಂದು ನಿಷೇಧವನ್ನು ಹೇರಿದನು. ಅನಂತರದಲ್ಲಿ ರಕ್ತದ ಸೇವನೆಯ ವಿಷಯವಾಗಿ ಇಸ್ರಾಯೇಲ್ಯರಿಗೆ ಹಲವಾರು ಸ್ಪಷ್ಟವಾದ ಆಜ್ಞೆಗಳನ್ನು ನೀಡಲಾಯಿತು (ಯಾಜಕಕಾಂಡ 3:17; 7:26, 27; 17:10-14; ಧರ್ಮೋಪದೇಶಕಾಂಡ 12:15, 16, 20-24), ಮತ್ತು ಅಪೊಸ್ತಲರ ಕೃತ್ಯಗಳು 15:29ರಲ್ಲಿ ಅನ್ಯಜನಾಂಗದ ಕ್ರೈಸ್ತರಿಗೆ ಅದೇ ಅಪ್ಪಣೆಯು ಕೊಡಲ್ಪಟ್ಟಿರುತ್ತದೆ. ಜೀವವನ್ನು ಕೊಡುವಾತನು ದೇವರೊಬ್ಬನೇ ಆಗಿರುವನಾದ್ದರಿಂದ, ಪ್ರಳಯದ ನಂತರದಲ್ಲಿ ಬದುಕುಳಿದ ಜನರು ಎಲ್ಲಾ ಜೀವಿಗಳ ಮೇಲೆ ಯೆಹೋವನು ಇಟ್ಟಿದ್ದ ಜೀವದ ಶಕ್ತಿಯನ್ನು ಗೌರವಿಸುವದಕ್ಕೆ ಹೊಣೆಯಾಗಿದ್ದರು. ಈ ಸನ್ನಿವೇಶದಲ್ಲಿ, ರಕ್ತವು ಸ್ವತಃ ಜೀವಕ್ಕೆ ಸಮವೆಂದು ಹೇಳಲಾಗಿರುತ್ತದೆ; ಈ ಕಾರಣಕ್ಕಾಗಿ, ಅದನ್ನು ತಿನ್ನುವುದು ಅಥವಾ ಕುಡಿಯುವುದು ನಿಷೇಧಿಸಲ್ಪಟ್ಟಿತ್ತು.

ಇದಕ್ಕೆ ಸಮಾನಾರ್ಥವುಳ್ಳ ನಿಷೇಧಾಜ್ಞೆಯು ಇಡೀ ಪ್ರಾಚೀನ ಮಧ್ಯಪ್ರಾಚ್ಯದಲ್ಲಿ ಎಲ್ಲಿಯೂ ಕಂಡು ಬರುವದಿಲ್ಲ. ಧರ್ಮಶಾಸ್ತ್ರದ ವಿಶಿಷ್ಟತೆಯು ಸೂಚಿಸುವದೇನೆಂದರೆ ಅದು ಯಾವದೇ ನಾಗರೀಕತೆ ಪೂರ್ವದ ನಿಷಿದ್ಧತೆಯ ಫಲಿತವಾಗಿ ಹುಟ್ಟಿಕೊಂಡದ್ದಲ್ಲ, ಆದರೆ ಅದೊಂದು ದೈವಿಕ ಆದೇಶವಾಗಿತ್ತು ಎಂಬುದೆ.[1] ಇದು ಇಸ್ರಾಯೇಲ್ಯರಂಥ ಕೇವಲ ಆಯ್ದ ಕೆಲವೊಂದು ಜನರಿಗೆ ಮಾತ್ರವೇ ಅನ್ವಯವಾಗುವಂತಹ ಶಾಸನವಾಗಿರಲಿಲ್ಲ; ಇದು ಎಲ್ಲಾ ಜನರನ್ನೊಳಗೊಂಡಿತ್ತು ಯಾಕೆಂದರೆ ಎಲ್ಲರೂ ನೋಹನ ವಂಶದಿಂದ ಬಂದವರಾಗಿದ್ದರಷ್ಟೆ. ಪ್ರಾಚೀನ ಕಾಲದಲ್ಲಿ ಕೆಲವು ಅನ್ಯಧರ್ಮಿಯರು ರಕ್ತಪಿಪಾಸುಗಳಾದ ಪ್ರಕಾರವಾಗಿ, ಮಾನವರು ರಕ್ತಪಿಪಾಸುಗಳಾಗುವುದು ದೇವರಿಗೆ ಇಷ್ಟವಿರಲಿಲ್ಲ.[2] ರಕ್ತವನ್ನು ತಿನ್ನುವುದು ಅಥವಾ ಸೇವಿಸುವುದೆಂದರೆ ದೇವರಿಗೆ ಅಗೌರವ ತೋರಿದಂತಾಗುತ್ತಿತ್ತು, ಆತನೇ ಸಜಲ ಜೀವಿಗಳಿಗೆ ಜೀವವನ್ನು ಕೊಟ್ಟವನಷ್ಟೆ. ಪ್ರಾಣಿಗಳ ಆಹಾರವನ್ನು ಸೇವಿಸುವದಕ್ಕೆ ಮಾನವರಿಗೆ ಅನುಮತಿಯು ಕೊಡಲ್ಪಟ್ಟಿತ್ತಾದರೂ, ಈ ಜೀವಿಗಳನ್ನು ಸಮರ್ಪಕವಾಗಿ ಕಾಳಜಿ ಮಾಡಬೇಕಾಗಿತ್ತು ಮತ್ತು ಅವುಗಳನ್ನು ಮನಬಂದಂತೆ ದುರುಪಯೋಗಪಡಿಸಿಕೊಳ್ಳಬಾರದಿತ್ತು. ಮಾನವನು ಪ್ರಾಣಿಗಳ ಜಗತ್ತಿನ ಮೇಲೆ ಧೊರೆತನ ಹೊಂದಿರಬೇಕೆಂಬುದು ದೇವರ ಬಯಕೆಯಾಗಿತ್ತು (ಕೀರ್ತನೆ 8:3-8), ಆದರೆ ಆತನು ದೇವರ ಸೃಷ್ಟಿಯ ಮೇಲಿರುವ ನಂಬಿಗಸ್ತ ಮನೆವಾರ್ತೆಯವನಂತೆ ಆಳ್ವಿಕೆ ಮಾಡಬೇಕಾಗಿತ್ತು. ದೇವರೊಬ್ಬನಿಗೆ ಮಾತ್ರವೇ ಸಾರ್ವಭೌಮತೆ ಇರುತ್ತದೆ.

**ವಚನ 5.** ಮುಂದಿನ ಹೇಳಿಕೆಯು ಮಾನವ ಜೀವಕ್ಕೆ ಸಂಬಂಧ ಪಟ್ಟಂತೆ ಮತ್ತೊಂದು ದೈವಿಕ ನಿರ್ದೇಶನದೊಂದಿಗೆ ಆರಂಭಗೊಳ್ಳುತ್ತದೆ: ದೇವರು ಹೀಗೆ ಹೇಳಿದನು, **ಇದಲ್ಲದೆ ನಿಮ್ಮ ರಕ್ತವನ್ನು ಸುರಿಸಿ ಜೀವತೆಗೆಯುವವರಿಗೆ ಮುಯ್ಯಿತೀರಿಸುವೆನು. ಮೃಗವಾಗಿದ್ದರೆ ಅದಕ್ಕೂ ಮನುಷ್ಯನಾಗಿದ್ದರೆ, ... ಅವನಿಗೂ ಮುಯ್ಯಿ ತೀರಿಸುವೆನೆಂದು ತಿಳಿದುಕೊಳ್ಳಿರಿ.** ಪ್ರಾಣಿಗಳು ನೈತಿಕ ಜೀವಿಗಳಲ್ಲವಾದ್ದರಿಂದ ದೇವರು "ಮಾನವ" ಮತ್ತು "ಮೃಗ" ಇಬ್ಬರ ವಿರುದ್ಧವಾಗಿಯೂ ಮರಣ ದಂಡನೆಯನ್ನು ಘೋಷಿಸಿದ್ದು ವಿಚಿತ್ರವೆಂದು ತೋರಬಹುದಾಗಿದೆ. ಹೇಗೂ, ಪ್ರಳಯಪೂರ್ವದ ಜಗತ್ತು ಎಷ್ಟೋ ಹಿಂಸೆಯಿಂದ ತುಂಬಿಕೊಂಡಿತ್ತಾದ್ದರಿಂದ (6:11), ಅದರಲ್ಲಿ ಅರ್ಥವೇ ಇಲ್ಲದ ಕೊಲೆಗಳು ಸಹ ಸೇರಿದ್ದರಿಂದ, ಅಂಥ ವಿಧವಾದ ವರ್ತನೆಯನ್ನು ತಾನು ಸಹಿಸಿಕೊಳ್ಳುವದಿಲ್ಲ ಎಂಬುದು ನೋಹ ಮತ್ತು ಆತನ ವಂಶದವರ ಮನಸ್ಸಿನಲ್ಲಿ ಛಾಪು ಒತ್ತಲ್ಪಡಬೇಕೆಂದು ದೇವರ ಬಯಕೆಯಾಗಿತ್ತು. ಮಾನವ ಜೀವವು ಎಷ್ಟೊಂದು ಪವಿತ್ರವಾದದ್ದೆಂದರೆ ಅದಕ್ಕೆ ಮನುಷ್ಯ ಮತ್ತು ಮೃಗಗಳಿಬ್ಬರೂ ಲೆಕ್ಕವನ್ನು ಕೊಡಬೇಕಾಗುತ್ತದೆ.

ವಾಕ್ಯಭಾಗವು ಮೂರು ಸಾರಿ "ಮುಯ್ಯಿ ತೀರಿಸುವೆನು" ಎಂದು ಹೇಳುತ್ತದೆ, ಮತ್ತು ಉತ್ತಮ ಪುರುಷ ಸರ್ವನಾಮದ ಕರ್ತೃವು ದೇವರೇ ಆಗಿದ್ದಾನೆ. ಇವುಗಳಲ್ಲಿ ಮೊದಲನೆಯ ಸಂದರ್ಭದಲ್ಲಿ, ದೇವರು ಹೀಗೆ ಹೇಳಿದನು, "ರಕ್ತವನ್ನು ಸುರಿಸಿ ಜೀವತೆಗೆಯುವವರಿಗೆ ಮುಯ್ಯಿತೀರಿಸುವೆನು." ಈ ಹೇಳಿಕೆಗಳ ಅರ್ಥವು ಏನೆಂದರೆ ದೇವರು "ಜೀವ ತೆಗೆದವನಿಂದ ಜೀವ"ವನ್ನು ತೆಗೆಯುವ ಮೂಲಕ "ಮುಯ್ಯಿ ತೀರಿಸುವನು" (דָּרַשׁ, *ದಾರಶ್)* ಎಂದಾಗಿದೆ.[3] ಈ ತತ್ವದ ಪ್ರಕಾರವಾಗಿ, ವ್ಯಕ್ತಿಯೊಬ್ಬನ ಕೊಲೆಯನ್ನು ಮಾಡುವುದು ಮಾನವನನ್ನು ತನ್ನ ಸ್ವಂತ ಸ್ವರೂಪದಲ್ಲಿ ನಿರ್ಮಿಸಿದ ಸ್ವತಃ ಯೆಹೋವನ ವಿರುದ್ಧ ಕೃತ್ಯವಾಗಿರುತ್ತದೆ (1:26, 27; 5:1, 2; 9:6).

ಪ್ರಾಣಿಗಳೂ ಮಾನವರೂ ಜವಾಬ್ದಾರಿಯುತ ಪ್ರತಿನಿಧಿಗಳಾಗಿ ಈ ದೈವಿಕ ನಿರ್ಬಂಧಕ್ಕೊಳಪಟ್ಟಿದ್ದಾರೆ ಎಂಬುದು ಅನಂತರದಲ್ಲಿ ಮೋಶೆಯ ಧರ್ಮಶಾಸ್ತ್ರದೊಳಗೆ ಪುನರಾವರ್ತಿಸಲ್ಪಟ್ಟಿರುತ್ತದೆ. ಧರ್ಮಶಾಸ್ತ್ರವು "ಹಾಯುವ ಸ್ವಭಾವದ" ಎತ್ತನ್ನು ಒಂದು ಉದಾಹರಣೆಯಾಗಿ ನೀಡುತ್ತದೆ: ಎತ್ತಿನ ಪ್ರವೃತ್ತಿಯ ಕುರಿತು ಅದರ ಯಜಮಾನನು ತಿಳಿದಿರುವದಾದರೆ, ಆತನು ಅದನ್ನು ಕಟ್ಟಿ ಹಾಕತಕ್ಕದ್ದು. ಆತನು ಹಾಗೆ ಮಾಡಲು ವಿಫಲನಾಗಿ ಆ ಎತ್ತು ಒಬ್ಬ ವ್ಯಕ್ತಿಯನ್ನು ಕೊಲ್ಲುವದಾದರೆ, ಎತ್ತು ಮತ್ತು ಅದರ ಯಜಮಾನ ಇಬ್ಬರಿಗೂ ಮರಣ ಶಿಕ್ಷೆಯನ್ನು ವಿಧಿಸತಕ್ಕದ್ದು (ವಿಮೋಚನಕಾಂಡ 21:29).

**ಅವನ ಸಹೋದರನಾಗಿರುವದರಿಂದ** ಎಂಬ ಪದಗುಚ್ಛ ಅರ್ಥವೇನಾಗಿರುತ್ತದೆ? ಬಳಸಲ್ಪಟ್ಟಿರುವ ಭಾಷೆಯು ಪ್ರಥಮ ಕೊಲೆಯನ್ನು ಜ್ಞಾಪಕಗೊಳಿಸುತ್ತಿರಬಹುದಾಗಿದೆ, ಆ ವೇಳೆ ಕಾಯಿನನು ತನ್ನ ತಮ್ಮನಾದ ಹೇಬೆಲನನ್ನು ಕೊಂದಿದ್ದನು (4:8), ಮಾತ್ರವಲ್ಲದೆ ಇದು ನಾವೆಲ್ಲರೂ ಮಾನವ ಕುಟುಂಬ ಭಾಗವಾಗಿದ್ದೇವೆ ಎಂಬ ವಿಚಾರವನ್ನೊಳಗೊಂಡಿರಬಹುದು.[4] ಎರಡನೆಯ ಸಾಧ್ಯತೆಯ ವಿಷಯವಾಗಿ, ಕೆಲವು ಆವೃತ್ತಿಗಳು ಪ್ರತಿಯೊಬ್ಬನ "ಸಹೋದರನಾಗಿರುವದರಿಂದ" ಎಂಬುದನ್ನು "ಜೊತೆಯ ಮನುಷ್ಯನು" (NIV; ESV) ಎಂದಾಗಿರುತ್ತದೆಂದು ಅರ್ಥಮಾಡಿಕೊಳ್ಳುತ್ತವೆ. NLT ತರ್ಜುಮೆಯು "ಒಬ್ಬ ಜೊತೆಯ ಮನುಷ್ಯನನ್ನು ಕೊಲ್ಲುವವನು ಸಾಯತಕ್ಕದ್ದು" ಎಂದು ಅನುವಾದಿಸುತ್ತದೆ. ಇನ್ನೊಂದು ವ್ಯಾಖ್ಯಾನವು ಏನೆಂದರೆ "ಪ್ರತಿಯೊಬ್ಬನ ಸಹೋದರನಾಗಿರುವದರಿಂದ" ಎಂಬುದು ಕೊಲೆಗೆ ಪ್ರತೀಕಾರವನ್ನು ಸಲ್ಲಿಸುವವನನ್ನು ಸೂಚಿಸುವ ಆರಂಭಿಕ ಉಲ್ಲೇಖವಾಗಿರಬಹುದು, ಆತನೇ

ಕೊಲೆಗಾರನನ್ನು ಕೊಲ್ಲುವ ಮೂಲಕ ತನ್ನ ಸಹೋದರನ ಹತ್ಯೆಗಾಗಿ ಮುಯ್ಯಿ ತೀರಿಸುವನು (ನೋಡಿರಿ ಅರಣ್ಯಕಾಂಡ 35:9-34; ಧರ್ಮೋಪದೇಶಕಾಂಡ 19:1-13).

**ವಚನ 6.** ಈ ವಚನವು ದಂಡನೆಯನ್ನು ಅಪರಾಧಕ್ಕೆ ತಕ್ಕುದಾಗಿರುವಂತೆ ಮಾಡುವ ಯೋಚನೆಯನ್ನು ಮುಂದುವರೆಸಿ ಹೀಗೆ ಹೇಳುತ್ತದೆ, **ಯಾರು ಮನುಷ್ಯನ ರಕ್ತವನ್ನು ಸುರಿಸುತ್ತಾರೋ ಅವರ ರಕ್ತವನ್ನು ಮನುಷ್ಯರೇ ಸುರಿಸುವರು.** "ರಕ್ತವನ್ನು ಸುರಿಸುವ" ಕುರಿತಾದ ಮಾತು ಆದಿಕಾಂಡ 37:22ರಲ್ಲಿ ಪೂರ್ವಯೋಜಿತ ಕೊಲೆಯ ವಿಷಯದಲ್ಲಿ ಬಳಸಲ್ಪಟ್ಟಿದೆ, ಅಲ್ಲಿ ರೂಬೇನನು ಯೋಸೇಫನನ್ನು ಕೊಲ್ಲಬಾರದೆಂದು ತನ್ನ ಸಹೋದರರಲ್ಲಿ ಬೇಡಿಕೊಳ್ಳುತ್ತಾನೆ (ನೋಡಿರಿ 1 ಅರಸು 2:31; ಯೆಹೆಜ್ಕೇಲ 22:4). ಕೊಲೆಯು ಬೈಬಲಿನಲ್ಲಿ ಎಂತಹ ಒಂದು ಘೋರ ಅಪರಾಧವೆಂದು ಬಣ್ಣಿಸಲ್ಪಟ್ಟಿರುತ್ತದೆಂದರೆ ಕೊಲೆಗಾರನಿಗೆ ಮರಣ ದಂಡನೆಯನ್ನು ವಿಧಿಸಬೇಕೆಂಬುದು ದೈವಿಕ ಆಜ್ಞೆಯಾಗಿತ್ತು. ಈ ಹೇಳಿಕೆಯು ಹಲವಾರು ಪ್ರಶ್ನೆಗಳನ್ನು ಎಬ್ಬಿಸುತ್ತದೆ: ಕೊಲೆಗಾರನು ಒಬ್ಬ ಮನುಷ್ಯನಿಂದ ಮರಣ ಶಿಕ್ಷೆಗೆ ಗುರಿಯಾಗಬೇಕೆನ್ನುವದಾದರೆ, ಆತನನ್ನು ಕೊಲೆ ಮಾಡುವವನು ಸಹ ಹತ್ಯೆಯ ಅಪರಾಧಕ್ಕೊಳಗಾಗುವದಿಲ್ಲವೋ? ಆಕ್ಷೇಪಣೆಗಳಿಗೆ ಅವಕಾಶವೇ ಇಲ್ಲದಂತೆ, ಉತ್ತರವು "ಇಲ್ಲ" ಎಂದಾಗಿರುತ್ತದೆ. ಮರಣದಂಡನೆಯು ಒಂದು ಕೊಲೆಯಾಗುವದಿಲ್ಲ, ಅದು ಕಾನೂನನ್ನು ಕೈಯಲ್ಲಿತ್ತುಕೊಂಡು ವೈಯಕ್ತಿಕ ಪ್ರತೀಕಾರದ ವಿಷಯವಾಗಿ ಮುಯ್ಯಿ ತೀರಿಸುವದಾದರೆ ಮಾತ್ರವೇ ಅದು ಕೊಲೆಯಾಗುತ್ತದೆ.

ಕೊಲೆಗಾರನ ಮೇಲೆ ಪ್ರತಿದಂಡನೆಯನ್ನುಂಟು ಮಾಡುವುದು ಒಂದು ವೈಯಕ್ತಿಕ ವಿಷಯವಾಗಬೇಕೆಂಬ ಉದ್ದೇಶವನ್ನು ಹೊಂದಿರಲಿಲ್ಲ. ಬದಲಾಗಿ, ದೇವರು ಅದನ್ನು ಸಮಾಜದ ಒಂದು ಹೊಣೆಯನ್ನಾಗಿ ಮಾಡಿದನು. ಮೂಲಪಿತೃಗಳ ಇತಿಹಾಸದ ಕಾಲದಲ್ಲಿ ಅದನ್ನು ಹೇಗೆ ಜಾರಿಗೆ ತರಬೇಕಾಗಿತ್ತು ಎಂಬುದರ ಕುರಿತು ನಮಗೆ ಹೇಳಲಾಗಿಲ್ಲ, ಆದರೆ ಮೋಶೆಯ ಧರ್ಮಶಾಸ್ತ್ರದಡಿಯಲ್ಲಿ ಪ್ರತಿಷ್ಠಾಪಿಸಲ್ಪಟ್ಟ ಕಾನೂನಾತ್ಮಕ ಕಾರ್ಯವಿಧಾನದ ವಿಷಯವಾಗಿಯಂತೂ ನಮಗೆ ತಿಳಿದಿರುತ್ತದೆ. ಒಂದು ಆಕಸ್ಮಿಕವಾಗಿ ನಡೆದ ಕೊಲೆಯ ಪ್ರಕರಣಗಳಲ್ಲಿ "ರಕ್ತವನ್ನು ಸುರಿಸಿ ಜೀವತೆಗೆಯುವವರಿಗೆ ಮುಯ್ಯಿ ತೀರಿಸುವವನ" (ಹತ್ತಿರದ ಸಂಬಂಧಿ) ಕೈಗಳಲ್ಲಿ ತಪ್ಪಿಸಿಕೊಂಡು ಧರ್ಮಶಾಸ್ತ್ರವು ಭದ್ರತೆಯನ್ನು ಒದಗಿಸಿತ್ತು. ಅಂಥ ಪ್ರಕರಣವನ್ನು "ಆಶ್ರಯಸ್ಥಳ"ದಲ್ಲಿನ ಹಿರಿಯರು ಆಲಿಸತಕ್ಕದ್ದಾಗಿತ್ತು; ಮತ್ತು ಕೊಲೆಯ ಆರೋಪದ ವ್ಯಕ್ತಿಯು ಪೂರ್ವಯೋಜನೆಯಂತೆ ಕೊಲೆ ಮಾಡಿದ್ದಾನೆಂದು ಪರಿಗಣಿಸಲ್ಪಟ್ಟರೆ, ಆತನಿಗೆ ಮರಣ ದಂಡನೆಯನ್ನು ವಿಧಿಸಬೇಕಾಗಿತ್ತು (ವಿಮೋಚನಕಾಂಡ 21:12-14; ಅರಣ್ಯಕಾಂಡ 35:9-34; ಧರ್ಮೋಪದೇಶಕಾಂಡ 19:1-13). ಕ್ರಿಸ್ತನ ಧರ್ಮಶಾಸ್ತ್ರದಡಿಯಲ್ಲಿ ಸಹ ಅದೇ ತತ್ವವು ಅನ್ವಯವಾಗುತ್ತದೆ. ಪೌಲನು ರೋಮಾಪುರದವರಿಗೆ ಬರೆದ ತನ್ನ ಪತ್ರಿಕೆಯಲ್ಲಿ ನಾಗರೀಕ ಸರ್ಕಾರಗಳು "ಕೆಟ್ಟತನವನ್ನು ನಡಿಸುವವನ" ವಿರುದ್ಧವಾಗಿ ದಂಡನೆಯ ಕತ್ತಿಯನ್ನು ಪ್ರಯೋಗಿಸುವ ಅಧಿಕಾರ ಹೊಂದಿರುತ್ತವೆ ಎಂಬುದನ್ನು ಒಪ್ಪಿಕೊಳ್ಳುತ್ತಾನೆ (ರೋಮಾ 13:4). ಸ್ವತಃ ತನ್ನ ವಿಷಯವಾಗಿ ಸಹ, ಪೌಲನು "ಮರಣದಂಡನೆಗೆ ಕಾರಣವಾದ ಯಾವದನ್ನಾದರೂ ನಡಿಸಿದ್ದಾದರೆ" ಮರಣದಂಡನೆಯನ್ನು ಘೋಷಿಸುವದಕ್ಕೆ ಕೈಸರನಿಗೆ ಅಧಿಕಾರವಿರುತ್ತದೆಂಬುದನ್ನು ಎತ್ತಿ ಹಿಡಿಯುತ್ತಾನೆ (ಅಪೊಸ್ತಲರ ಕೃತ್ಯಗಳು 25:11).

ಇನ್ನೊಂದು ಪ್ರಶ್ನೆಯು ಉದ್ಭವವಾಗುತ್ತದೆ: ಕೊಲೆಗಾರನಿಗೆ ಮರಣ ದಂಡನೆಯನ್ನು ವಿಧಿಸಬೇಕೆಂಬ ಬೇಡಿಕೆಯನ್ನು ದೇವರು ಏಕೆ ಇಟ್ಟನು? ಒಂದು ಮೇಲ್ನೋಟದ

ಪ್ರತ್ಯುತ್ತರವೆಂದರೆ ಮಾನವ ಜೀವಿತವು ದೇವರ ಸೃಷ್ಟಿಯ ಭಾಗವಾಗಿ ಬಂದಿರುವದರಿಂದಾಗಿ ಅದು ಪವಿತ್ರವಾದದ್ದು ಎಂದಾಗಿರಬಹುದು. ಖಂಡಿತವಾಗಿಯೂ, ಮಾನವನು ಆಕಸ್ಮಿಕವಾಗಿ ಮನಸ್ಸಾಕ್ಷಿಯನ್ನು ಪಡೆದುಕೊಳ್ಳಲಿಲ್ಲ ಎಂಬುದು ಸತ್ಯವಾದದ್ದಾದರೂ, ಆ ವಿಷಯದ ಮೇಲಿನ ಯೋಚನೆಯು ಸಾಕಷ್ಟು ದೂರಕ್ಕೆ ಸಾಗಲಾರದು. ಕೊಲೆಯನ್ನು ಒಂದು ಕಾನೂನಿನ ವಿರುದ್ಧದ ಕೃತ್ಯವೆಂಬುದಾಗಿ ಘೋಷಿಸುವದಕ್ಕೆ ಇರುವ ಆಳವಾದ ಕಾರಣವು ಏನೆಂದರೆ ಮಾನವನ ಜೀವಿತವು ಗುಣಾತ್ಮಕವಾಗಿ ಭೂಮಿಯ ಮೇಲಿರುವ ಮಿಕ್ಕ ಎಲ್ಲಾ ಜೀವಗಳಿಗಿಂತಲೂ ವ್ಯತ್ಯಾಸವಾಗಿರುತ್ತದೆ ಎಂಬುದೆ. ಒಬ್ಬ ವ್ಯಕ್ತಿಯು ಕೊಲೆ ಮಾಡಿ ಅಪರಾಧಕ್ಕೊಳಗಾದರೆ ಆತನು ಸ್ವತಃ ತನ್ನ ಜೀವವನ್ನು ಕಳೆದುಕೊಳ್ಳತಕ್ಕದ್ದು ಪರಿಹಾರವನ್ನು ಸೂಚಿಸಿದನು ಯಾಕೆಂದರೆ ಮಾನವ ಜೀವಿಗಳು ಮಾತ್ರವೇ ಈ ಭೂಮಿಯ ಮೇಲೆ **ದೇವರ ಸ್ವರೂಪವನ್ನು** ಹೊಂದಿರುವವರಾಗಿದ್ದಾರೆ. ಜನರು **ಮನುಷ್ಯ**ನಲ್ಲಿರುವ ದೇವರ ಸ್ವರೂಪದ ಮೇಲಿನ ದೃಷ್ಟಿಯನ್ನು ಕಳೆದುಕೊಳ್ಳುವಾಗ, ಮಾನವರು ಪ್ರಾಣಿಗಳಂತೆ ನಡಿಸಿಕೊಳ್ಳಲ್ಪಡುತ್ತಾರೆ ಮತ್ತು ಜೀವವು ಅಗ್ಗವಾಗುತ್ತದೆ. ತತ್ಪರಿಣಾಮವಾಗಿ, ಈ ಮನೋಭಾವವು ಸಕಲ ವಿಧವಾದ ಹೇಯ ಕೃತ್ಯಗಳಿಗೂ ಸಮೂಹ ಹತ್ಯೆಗಳಿಗೂ ದಾರಿ ಮಾಡುತ್ತದೆ, ಯಾಕೆಂದರೆ ಅದು ಮಾನವ ವ್ಯಕ್ತಿತ್ವವನ್ನಾಗಲಿ ಅಥವಾ ಮಾನವನಿಗೆ ಅವನ ಘನತೆಯನ್ನು ನೀಡಿದಂಥ ದೇವರನ್ನಾಗಲಿ ಗೌರವಿಸುವದಕ್ಕಿರುವ ಯಾವದೇ ತಳಹದಿಯನ್ನು ಕಿತ್ತು ಹಾಕುವದಾಗಿದೆ.

ಈ ತಿಳುವಳಿಕೆಯಲ್ಲಿ ಸಹ ಒಂದು ವಿರೋಧಾಭಾಸವು ಉದ್ಭವವಾಗುತ್ತದೆ. ಒಂದು ಕಡೆಯಲ್ಲಿ ನೋಡುವದಾದರೆ, ದೇವರು ಸೃಷ್ಟಿಕರ್ತನು ಮತ್ತು ಜೀವವನ್ನು ಕೊಡುವದಕ್ಕೆ ಶಕ್ತನಾದ ಏಕೈಕ ವ್ಯಕ್ತಿಯು ಆಗಿರುವದರಿಂದ, ಆ ಜೀವವನ್ನು ತೆಗೆಯುವ ಅಧಿಕಾರವು ಆತನೊಬ್ಬನಿಗೆ ಮಾತ್ರವೇ ಇರುವುದು ಸಹ ಸ್ವಾಭಾವಿಕವೇ ಆಗಿರುತ್ತದೆ. ಇನ್ನೊಂದು ಕಡೆಯಲ್ಲಿ ನೋಡುವಾಗ, ಕೊಲೆಗಾರರಿಗೆ ಮರಣ ದಂಡನೆಯನ್ನು ವಿಧಿಸುವಂತೆ ಯೆಹೋವನು ಮನುಷ್ಯನಿಗೆ ಆಜ್ಞಾಪಣೆಯನ್ನು ನೀಡಿದಾಗ, ಆ ಅಧಿಕಾರವನ್ನು ಆತನು ಅವನಿಗೆ ನಿಯೋಗಿಸುತ್ತಾನೆ. ಆಗ ಆ ವ್ಯಕ್ತಿಯು ದುಷ್ಕಾರ್ಯ ನಡಿಸುವವರಿಗೆ ದಂಡನೆಯನ್ನು ಜಾರಿಗೊಳಿಸುವದಕ್ಕೆ ದೇವರ ಸಾಧನವಾಗಿ ಮಾರ್ಪಡುತ್ತಾನೆ; ಆದ್ದರಿಂದ, ಆತನ ಮೇಲೆ ಯಾವದೇ ಅಪರಾಧದ ದೋಷವನ್ನು ಹೊರಿಸಕೂಡದಾಗಿದೆ.

**ವಚನ 7.** ಈ ಸಾಮಗ್ರಿಯ ಮೊದಲ ವಿಭಾಗವು 9:1ರಲ್ಲಿನ ಆಜ್ಞೆಯನ್ನು ಪುನರಾವರ್ತಿಸುವದರೊಂದಿಗೆ ಅಂತ್ಯಗೊಳ್ಳುತ್ತದೆ, ಜೊತೆಗೆ ಕೆಲವೊಂದು ಹೆಚ್ಚುವರಿ ಬುದ್ಧಿವಾದದ ಮಾತುಗಳನ್ನು ಸೇರಿಸುತ್ತದೆ: ದೇವರು ಹೀಗೆ ಹೇಳಿದನು, **ನೀವು ಅಭಿವೃದ್ಧಿಯಾಗಿ ಹೆಚ್ಚಿರಿ; ಭೂಮಿಯ ಮೇಲೆ ನಿಮಗೆ ಬಹು ಸಂತಾನವಾಗಲಿ.** ಪ್ರಳಯದಲ್ಲಿ ಬದುಕುಳಿದವರ ಜೀವನ ಶೈಲಿಯು ನೆಫೀಲಿಯರ ದಿನಗಳಲ್ಲಿದ್ದವರು ನಡಿಸುತ್ತಿದ್ದ ಹಿಂಸಾಚಾರಕ್ಕೆ (6:4) ಕಣ್ಣಿಗೆ ಕಟ್ಟಿದಂತೆ ವಿರುದ್ಧವಾಗಿತ್ತು. ಜೀವವನ್ನು ನಾಶ ಮಾಡುತ್ತಿದ್ದ ಪ್ರಳಯಪೂರ್ವದ ಕೊಲೆಗಾರರಿಗಿಂತ ಭಿನ್ನವಾಗಿ, ನೋಹ ಮತ್ತು ಆತನ ಕುಟುಂಬದವರು, ಆದಿಯಲ್ಲಿ ಆದಾಮ ಮತ್ತು ಹವ್ವಳರು ಇದ್ದ ರೀತಿಯಲ್ಲಿಯೇ (1:28) ಜೀವದ ರವಾನೆದಾರರು ಮತ್ತು ಉತ್ತೇಜಕರು ಆಗಿರಬೇಕಾಗಿತ್ತು.

9:7ರಲ್ಲಿ ನೀಡಲಾಗಿರುವ ಆಜ್ಞೆಯು ಬಹುವಚನದ ಸರ್ವನಾಮದೊಂದಿಗೆ ಆರಂಭಗೊಳ್ಳುತ್ತದೆ, ಆದ್ದರಿಂದ ಆರಂಭಿಕ ಪದಗುಚ್ಛವು **ನೀವು** ಎಂದು ಅನುವಾದಿಸಲ್ಪಟ್ಟಿದೆ. ಇಲ್ಲಿ ಮುಖ್ಯವಾದ ಗಮನವು ನೋಹನ ಪುತ್ರರ ಮೇಲಿರುತ್ತದೆ ಯಾಕೆಂದರೆ ಜನಾಂಗಗಳನ್ನು ಹುಟ್ಟಿಸಿ ಭೂಮಿಯ ಮೇಲೆ ಪುನಃ ಜನರನ್ನು ಹೆಚ್ಚಿಸುವವರು ಅವರೇ ಆಗಿದ್ದರು, ಜನಾಂಗಗಳ

ಕೋಷ್ಟಕದಲ್ಲಿ ಇದೇ ಪ್ರಕಾರವಾಗಿಯೇ ಪ್ರಕಟಿಸಲ್ಪಟ್ಟಿರುತ್ತದೆ (10:1-32).

## ಒಂದು ದೈವಿಕ ಒಡಂಬಡಿಕೆ ಮತ್ತು ಗುರುತು (9:8-17)

### ಒಡಂಬಡಿಕೆ (9:8-11)

**8ಇದಲ್ಲದೆ ದೇವರು ನೋಹನಿಗೂ ಅವನ ಮಕ್ಕಳಿಗೂ - 9ಕೇಳಿರಿ, ನಾನು ನಿಮ್ಮನ್ನೂ ನಿಮ್ಮ ಸಂತತಿಯವರನ್ನೂ 10ನಿಮ್ಮ ಕೂಡ ನಾವೆಯಿಂದ ಹೊರಟುಬಂದ ಪಶುಪಕ್ಷಿಮೃಗಾದಿ ಸಕಲ ಭೂಜಂತುಗಳನ್ನೂ ಕುರಿತು ಸ್ಥಿರಪ್ರತಿಜ್ಞೆ ಮಾಡುತ್ತೇನೆ; 11ಆ ಪ್ರತಿಜ್ಞೆ ಯಾವದೆಂದರೆ - ಇನ್ನು ಮೇಲೆ ಎಲ್ಲಾ ಪ್ರಾಣಿಗಳು ಪ್ರಳಯದಿಂದ ನಾಶವಾಗುವದಿಲ್ಲ; ಇನ್ನು ಮುಂದೆ ಭೂಮಿಯನ್ನು ಹಾಳು ಮಾಡುವ ಪ್ರಳಯವು ಬರುವದೇ ಇಲ್ಲ ಎಂದು ಹೇಳಿದನು.**

**ವಚನ 8.** ನೋಹ ಮತ್ತು ಆತನ ಕುಟುಂಬದವರು ನಾವೆಯೊಳಗೆ ಪ್ರವೇಶಿಸುವದಕ್ಕೆ ಮುಂಚೆ, ದೇವರು ಅವರೊಂದಿಗೆ ಒಂದು ವಾಗ್ದಾನ ಸೂಚಕ ಒಡಂಬಡಿಕೆಯೊಂದನ್ನು ಮಾಡಿಕೊಂಡನು (6:18). ಆತನು ಅವರನ್ನು ಸನ್ನಿಹಿತವಾಗಿದ್ದ ಪ್ರಳಯದ ನೀರಿನಿಂದ ತಪ್ಪಿಸಿ ಕಾಪಾಡುವೆನೆಂಬ ವಾಗ್ದಾನವನ್ನು ನೀಡಿದ್ದನು. ಇದನ್ನು ಆತನು ಮಾಡಿ ಮುಗಿಸಿದ್ದನು, ಆದರೆ ಆತನ ವಾಗ್ದಾನದಲ್ಲಿ ಇನ್ನು ಬಹಳವಿತ್ತು.

**ನೋಹನಿಗೂ ಅವನ ಮಕ್ಕಳಿಗೂ** ಅವರು ಶುದ್ಧೀಕರಿಸಲ್ಪಟ್ಟ ಲೋಕದಲ್ಲಿರುವ ವೇಳೆ ತಮ್ಮ ಹೃದಯಗಳಿಗೆ ತೆಗೆದುಕೊಳ್ಳಬೇಕಾದ ಸವಲತ್ತುಗಳ ಮತ್ತು ನಿಷೇಧಗಳ ಕುರಿತು ತಿಳಿಸಿದ ಬಳಿಕ, **ದೇವರು** ಒಂದು ಹೊಸ ವಿಚಾರದ ಕಡೆಗೆ ತಿರುಗಿಕೊಳ್ಳುತ್ತಾನೆ. ಅವರಿಗೆ ಇನ್ನಷ್ಟು ಬುದ್ಧಿವಾದಗಳನ್ನು ಹೇಳುವದರಲ್ಲಿ, ಯೆಹೋವನು ತಾನು ಅವರ ಪರವಾಗಿ ತೆಗೆದುಕೊಳ್ಳಲಿದ್ದ ಕ್ರಮಗಳ ಬಗ್ಗೆ ಬಯಲುಗೊಳಿಸುತ್ತಾನೆ.

**ವಚನ 9.** ತಾನು ಶೀಘ್ರದಲ್ಲಿಯೇ ಅವರೊಂದಿಗೆ ಮತ್ತು ಅವರ **ಸಂತತಿಯವ**ರೊಂದಿಗೆ ಒಂದು **ಸ್ಥಿರಪ್ರತಿಜ್ಞೆಯನ್ನು ಮಾಡುತ್ತೇನೆ** (קוּם, *ಕ್ವಿಮ್*) ಅಥವಾ "ದೃಢಪಡಿಸುತ್ತೇನೆ" ಎಂದು ಘೋಷಿಸಿದನು. ಇಬ್ರಿಯ ಪದವಾದ *ಕ್ವಿಮ್* ಎಂಬುದು ಕಾರಣಾರ್ಥಕ ರೂಪದಲ್ಲಿದ್ದು ಅದು ಅಕ್ಷರಶಃ "ನಿಲ್ಲುವಂತೆ ಮಾಡು, ಸ್ಥಾಪಿಸು"[6] ಎಂದಾಗಿರುತ್ತದೆ. ಅದರರ್ಥವು ನಾವೆಯಲ್ಲಿದ್ದ ನಿವಾಸಿಗಳ ಸಂಗಡ ದೇವರು ಒಂದು ಹೊಸ ಸಂಬಂಧವನ್ನು (ಒಡಂಬಡಿಕೆ) "ಸ್ಥಾಪಿಸಲಿದ್ದನು" ಎಂದಾಗಿದೆ, ಅಥವಾ ಈ ಸನ್ನಿವೇಶದಲ್ಲಿ, ಈಗ ಆತನು 6:18ರಲ್ಲಿ ನೋಗನಿಗೆ ಮಾಡಿದ್ದ ಮೂಲ ಒಡಂಬಡಿಕೆಯ ವಾಗ್ದಾನದಲ್ಲಿ ಸೂಚ್ಯಾರ್ಥವಾಗಿ ಹೇಳಲ್ಪಟ್ಟದ್ದನ್ನು ಜಾರಿಗೆ ತರುವನು, ನೆರವೇರಿಸುವನು, ಅಥವಾ ಕಾರ್ಯರೂಪಕ್ಕೆ ತರುವನು ಎಂದಾಗಿರುವ ಸಾಧ್ಯತೆಯು ಅಧಿಕವಾಗಿದೆ.

**ವಚನಗಳು 10, 11.** ಈ ಒಡಂಬಡಿಕೆಯು **ನಾವೆಯಿಂದ ಹೊರಟುಬಂದ ಪಶುಪಕ್ಷಿಮೃಗಾದಿ ಸಕಲ ಭೂಜಂತುಗಳನ್ನೂ** ಒಳಗೊಂಡಿತ್ತು. ದೇವರ ವಾಗ್ದಾನವು ಪುನಃ **ಇನ್ನು ಮೇಲೆ ಎಲ್ಲಾ ಪ್ರಾಣಿಗಳು ಪ್ರಳಯದಿಂದ ನಾಶವಾಗುವದಿಲ್ಲ** ಎಂದಾಗಿತ್ತು.

ಇದು ಏಕ-ಪಕ್ಷದ ಒಡಂಬಡಿಕೆಯಾಗಿದೆ, ಇದರರ್ಥವು ಇದನ್ನು ನಡಿಸಿ ಕೊಡುವ ಹೊಣೆಗಾರಿಕೆಯು ಸಂಪೂರ್ಣವಾಗಿ ಯೆಹೋವನ ಮೇಲೆಯೇ ಇರುತ್ತದೆ ಎಂಬುದೆ. ಮನುಷ್ಯನು ಭವಿಷ್ಯದಲ್ಲಿ ಎಷ್ಟೇ ಪಾಪಭರಿತನಾದರೂ ಸರಿಯೇ (ನೋಡಿರಿ 8:21), ಭೂಮಿಯನ್ನು ಸಂಪೂರ್ಣವಾಗಿ ಧ್ವಂಸಗೊಳಿಸುವ ಪ್ರಳಯವನ್ನು ದೇವರು ಇನ್ನೆಂದಿಗೂ

ಕಳುಹಿಸುವದಿಲ್ಲ. ಹಾಗಾದರೆ, ಒಂದು ಅರ್ಥದಲ್ಲಿ, ಒಡಂಬಡಿಕೆಯು ಶರತ್ತುರಹಿತವಾದದ್ದು; ಮಾನವನು ಏನೇ ಮಾಡಿದರೂ ಸರಿಯೇ, ವಾಗ್ದಾನವು ಎಂದಿಗೂ ರದ್ದುಗೊಳಿಸಲ್ಪಡುವದಿಲ್ಲ. ಇನ್ನೊಂದು ಕಡೆಯಲ್ಲಿ ನೋಡುವಾಗ, ಮನುಷ್ಯನು ಭೂಮಿಯ ಮೇಲೆ ದೀರ್ಘಾಯುಷ್ಯದಿಂದ ಬದುಕಿ ಬಹಸಂತಾನವುಳ್ಳವನಾಗಿ ಹೆಚ್ಚಬೇಕಾದರೆ, ಬಿತ್ತನೆ, ಸುಗ್ಗಿಯ, ಮತ್ತು ಇತ್ಯಾದಿ ಕಾಲಗಳನ್ನು ಆನಂದಿಸಬೇಕಾದರೆ (8:22; 9:1, 7), ಆತನು ನಿಷೇಧಿಸಲ್ಪಟ್ಟಿರುವ ಕೃತ್ಯಗಳಿಂದ ದೂರವಿರತಕ್ಕದ್ದಾಗಿತ್ತು. ರಕ್ತವನ್ನು ಸೇವಿಸಿ ಕೊಲೆಗಳನ್ನು ಮಾಡುವವರು ದುಷ್ಟತ್ವವನ್ನು ಹೋಗಲಾಡಿಸಿ ಶುದ್ಧೀಕರಿಸಲ್ಪಟ್ಟಿರುವ ಲೋಕಕ್ಕೆ ಸೇರಿದವರಲ್ಲ ಎಂದಾಗುತ್ತದೆ (ನೋಡಿರಿ 9:4-6). ಭವಿಷ್ಯದಲ್ಲಿನ ಒಂದು ಕಾಲದಲ್ಲಿ ದೈವಿನ ನ್ಯಾಯತೀರ್ಪಾಗುವ ಸಾಧ್ಯತೆಯು ಈಗಲೂ ಇರುತ್ತದೆ, ಆದರೆ ಅಂಥ ನ್ಯಾಯತೀರ್ಪು ಒಂದು ವಿಶ್ವವ್ಯಾಪಿ ಪ್ರಳಯದ ರೂಪದಲ್ಲಿ ಎಂದಿಗೂ ಅನುಭವಿಸಲ್ಪಡುವದಿಲ್ಲ.

### ಗುರುತು (9:12-17)

**12ದೇವರು ಮತ್ತೂ ಹೇಳಿದ್ದೇನಂದರೆ - ನಾನು ನಿಮ್ಮನ್ನೂ ನಿಮ್ಮ ಸಂಗಡ ಇರುವ ಸಮಸ್ತ ಜೀವರಾಶಿಗಳನ್ನೂ ಕುರಿತು ಎಲ್ಲಾ ತಲತಲಾಂತರಗಳಲ್ಲಿಯೂ ಮಾಡುವ ಈ ಪ್ರತಿಜ್ಞೆಗೆ 13ಮೇಘಗಳಲ್ಲಿ ನಾನಿಟ್ಟಿರುವ ಮುಗಿಲುಬಿಲ್ಲೇ ಗುರುತಾಗಿರುವದು. ನನಗೂ ಭೂಪ್ರಾಣಿಗಳಿಗೂ ಆದ ಒಡಂಬಡಿಕೆಗೆ ಇದೇ ಗುರುತಾಗಿರಲಿ. 14ನಾನು ಭೂಲೋಕದ ಮೇಲೆ ಮೇಘಗಳನ್ನು ಕವಿಸುವಾಗ ಆ ಬಿಲ್ಲು ಮೇಘಗಳಲ್ಲಿ ಕಂಡು ಬರುವದು. 15ಆಗ ನಾನು ನಿಮ್ಮನ್ನೂ ಎಲ್ಲಾ ಜೀವರಾಶಿಗಳನ್ನೂ ಕುರಿತು ಮಾಡಿದ ಪ್ರತಿಜ್ಞೆಯನ್ನು ಜ್ಞಾಪಕಮಾಡಿಕೊಳ್ಳುವೆನು. ಇನ್ನು ಮುಂದೆ ನೀರು ಹೆಚ್ಚಿ ಎಲ್ಲಾ ಭೂಪ್ರಾಣಿಗಳನ್ನು ಹಾಳುಮಾಡುವ ಪ್ರಳಯವಾಗುವದಿಲ್ಲ. 16ಆ ಬಿಲ್ಲು ಮೇಘಗಳಲ್ಲಿ ಕಾಣಿಸುವಾಗ ನಾನು ಅದನ್ನು ನೋಡಿ ದೇವರಾದ ನನಗೂ ಭೂಮಿಯ ಮೇಲಿರುವ ಎಲ್ಲಾ ಜೀವಜಂತುಗಳಿಗೂ ಆದ ಶಾಶ್ವತವಾದ ಒಡಂಬಡಿಕೆಯನ್ನು ಜ್ಞಾಪಕಮಾಡಿಕೊಳ್ಳುವೆನು ಅಂದನು. 17ಮತ್ತು ದೇವರು ನೋಹನಿಗೆ - ನನಗೂ ಎಲ್ಲಾ ಭೂಜೀವಿಗಳಿಗೂ ಆದ ಒಡಂಬಡಿಕೆಗೆ ಇದೇ ಗುರುತು ಎಂದು ಹೇಳಿದನು.**

**ವಚನಗಳು 12, 13.** ನೋಹ ಮತ್ತು ಆತನ ಕುಟುಂಬದವರು ದುಷ್ಟತನವನ್ನು ಹೊಡೆದುಕೊಂಡು ಹೋಗುವಂತೆ ಪ್ರಳಯವನ್ನು ಕಳುಹಿಸುವದರಲ್ಲಿ ದೇವರ ಶಕ್ತಿಯನ್ನು ಕಂಡಿದ್ದರು ಮತ್ತು ಆ ವಿನಾಶಕರ ಘಟನೆಯಲ್ಲಿ ನಾಶವಾಗದಂತೆ ಉಳಿಸಲ್ಪಟ್ಟದ್ದರಿಂದ ಸ್ವತಃ ವೈಯಕ್ತಿಕವಾಗಿ ಆತನ ಅತ್ಯಾಶ್ಚರ್ಯವಾದ ಕೃಪೆಯ ಅನುಭವ ಮಾಡಿದ್ದರು. ಅವರಿಗಾದರೋ, ತಾನು ಇನ್ನು ಮೇಲೆ ಅಂತಹ ಕೃತ್ಯವನ್ನು ಪುನರಾವರ್ತಿಸುವದಿಲ್ಲ ಎಂದು ಯೆಹೋವನು ವಾಗ್ದಾನ ಮಾಡಿದ್ದು ಸಾಕಾಗಿತ್ತು. ಭವಿಷ್ಯದಲ್ಲಿನ **ತಲಾಂತರುಗಳವರು** ಭಿನ್ನವಾಗಿ ಪ್ರತಿಕ್ರಿಯಿಸುವ ಸಾಧ್ಯತೆಯಿದ್ದದರಿಂದ, ದೇವರು ಈ ಪ್ರತಿಜ್ಞೆಯನ್ನು ಒಂದು **ಗುರುತು** ಕೊಡುವ ಮೂಲಕ ಸ್ಥಿರಪಡಿಸಿದನು (9:17ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಆತನು **ಮೇಘಗಳಲ್ಲಿ ಮುಗಿಲುಬಿಲ್ಲು** ಇಡುವೆನೆಂದು ಹೇಳಿದನು.

**ವಚನಗಳು 14, 15. ಮುಗಿಲು ಬಿಲ್ಲು** (*ﬨשֶׁקֶת*, *ಕ್ವೆಶೆಥ್)* ಎಂಬುದು ಬಿಲ್ಲುಗಾರನ ಬಿಲ್ಲು ಮತ್ತು ಮುಗಿಲ ಬಿಲ್ಲು ಎರಡನ್ನೂ ಸೂಚಿಸುತ್ತದಾದ್ದರಿಂದ,[7] ಕೆಲವು ವೇದ ಪಂಡಿತರು ಇಲ್ಲಿ ದೇವರು ಒಬ್ಬ ಯುದ್ಧವೀರನಾಗಿ (ವಿಮೋಚನಕಾಂಡ 15:3; ಯೆಶಾಯ 42:13; ಚೆಫನ್ಯ 3:17) ತನ್ನ ವೈರಿಗಳ ಕಡೆಗೆ ಬಲಿಷ್ಠ ಬಿಲ್ಲಿನಿಂದ ಬಾಣಗಳನ್ನು ಅಥವಾ ಮಿಂಚನ್ನು ಹಾರಿಸಿ ಬಿಡುತ್ತಾನೆಂಬ

(ಕೀರ್ತನೆ 7:13; 18:14; ಹಬಕ್ಕೂಕ 3:11) ಚಿತ್ರಣವು ಇರುತ್ತದೆಂದು ಅಭಿಪ್ರಾಯ ಸೂಚಿಸುತ್ತಾರೆ. ಅವರು ಪ್ರಸ್ತಾವನ್ನಿಡುವದೇನೆಂದರೆ, ಪ್ರಳಯದ ನಂತರ ದೇವರು **ಇನ್ನು ಮುಂದೆ ನೀರು ಹೆಚ್ಚಿ ... ಪ್ರಳಯದ** ಮೂಲಕವಾಗಿ ಲೋಕವನ್ನು ನಾಶಗೊಳಿಸುವದಿಲ್ಲ ಎಂಬುದಾಗಿ ಮನುಷ್ಯರಿಗೆ ಪುನರಾಶ್ವಾಸನೆಯನ್ನು ನೀಡುವದಕ್ಕಾಗಿ ತನ್ನ ಬಿಲ್ಲನ್ನು **ಮೇಘದಲ್ಲಿ** ನೇತು ಹಾಕಿ ಬಿಡುವದಕ್ಕೆ ನಿರ್ಧರಿಸಿದನು. ಹೇಗೂ, ನೋಹನ ಕಾಲಕ್ಕಿಂತಲೂ ಅಧಿಕ ಸಮಯದ ನಂತರದ ವರೆಗೂ, ಬೈಬಲಿನಲ್ಲಾಗಲಿ ಅಥವಾ ಹೊರಗಿನ ಮೂಲಗಳಲ್ಲಾಗಲಿ ಅಂತಹ ಬಿಲ್ಲಿನ ಸಾಂಕೇತಿಕತೆಯ ದಾಖಲೆಯು ಇರುವದೇ ಇಲ್ಲ.[8] ಹಾಗಾದರೆ, ದೇವರು ನೋಹನಿಗೆ ಏನು ತಿಳಿಯಪಡಿಸಿದನೋ ಅದನ್ನು ಮೀರಿ ನಾವು ಬಿಲ್ಲಿನ ಮಹತ್ವದ ಕುರಿತಾಗಿ ಯಾವದೇ ಊಹಾಪೋಹಗಳನ್ನು ಮಾಡತಕ್ಕದ್ದು ಎಂಬುದು ಸಂದೇಹಕರವಾಗಿರುತ್ತದೆ. ಪ್ರಳಯದ ಸನ್ನಿವೇಶದಲ್ಲಿ ನೋಡುವದಾದರೆ, ಅದು ಯುದ್ಧವೊಂದರಲ್ಲಿ ಸಿಕ್ಕುವ ಜಯದ ಒಂದು ಸಂಕೇತ ಆಗಿರುವದಿಲ್ಲ, ಆದರೆ ದೇವರ ಕೃಪೆ ಹಾಗೂ ಆತನು ಇನ್ನೆಂದಿಗೂ ಮಹಾ ಪ್ರಳಯದ **ನೀರು ಹೆಚ್ಚಿ ಎಲ್ಲಾ ಜೀವರಾಶಿಗಳನ್ನು** ನಾಶಗೊಳಿಸುವದಿಲ್ಲ ಎಂಬ ತನ್ನ ವಾಗ್ದಾನದಲ್ಲಿ ನಂಬಿಗಸ್ತನಾಗಿರುವನು ಎಂಬುದನ್ನು ಜ್ಞಾಪಿಸುವಂಥದ್ದು ಆಗಿರುತ್ತದೆ.

**ವಚನ 16.** ಒಂದು **ಬಿಲ್ಲು ಮೇಘಗಳಲ್ಲಿ ಕಾಣಿಸುವಾಗ ... ಶಾಶ್ವತವಾದ ಒಡಂಬಡಿಕೆಯನ್ನು ಜ್ಞಾಪಕಮಾಡಿಕೊಳ್ಳುವೆನು** ಎಂಬ ದೇವರ ಹೇಳಿಕೆಯು ಯೆಹೋವನು ಮತ್ತು ಆತನ ಜನರ ನಡುವಿನ ಸಂಬಂಧದ ಭಾಷೆಯನ್ನು ಬಳಸುತ್ತದೆ. "ಜ್ಞಾಪಕಮಾಡಿಕೊಳ್ಳುವೆನು" (זָכַר, *ಝೂಕಾರ)* ಎಂಬ ಪದವು ತಾನು ಮಾಡಿದ ಒಡಂಬಡಿಕೆಯನ್ನು ಮರೆತು ಹೋಗುವ ಅಪಾಯದಲ್ಲಿರುತ್ತಾನೆ ಮತ್ತು ಅದನ್ನು ಆತನಿಗೆ ನೆನಪಿಸುವದಕ್ಕೆ ಮೇಘಗಳಲ್ಲಿ ಒಂದು ಗುರುತಿನ ಅಗತ್ಯವಿರುತ್ತದೆಂಬ ಭಾವನೆಯನ್ನುಂಟು ಮಾಡುವದಿಲ್ಲ. ಬದಲಾಗಿ, ಯೆಹೋವನು ಅವರ ಪರವಾಗಿ ತನ್ನ "ಒಡಂಬಡಿಕೆಯ ನಿಷ್ಠೆಯನ್ನು ತೋರ್ಪಡಿಸುವನು"[9] ಎಂಬ ಪುನರಾಶ್ವಾಸನೆಯನ್ನು ಮಾನವರಿಗೆ ನೀಡುವದಾಗಿತ್ತು.

ಆದಿಕಾಂಡ 19:29 ಹೇಳುವದೇನೆಂದರೆ "ದೇವರು ಅಬ್ರಹಾಮನನ್ನು ನೆನಸಿಕೊಂಡನು" ಎಂಬುದೆ, ಅಂದರೆ, ಆತನು ಸೊದೋಮ ಮತ್ತು ಗೊಮೋರಗಳ ಮೇಲೆ ಅಗ್ನಿಗಂಧಕಗಳು ಬಿದ್ದ ವೇಳೆ ಲೋಟನನ್ನು ಅದರೊಳಗಿಂದ ತಪ್ಪಿಸಿ ಕಾಪಾಡುವ ವೇಳೆ ಮೂಲಪಿತೃವಿಗೆ ಮಾಡಿದ್ದ ಒಡಂಬಡಿಕೆಯ ವಾಗ್ದಾನವನ್ನು ನೆನಪಿಸಿಕೊಂಡನು. ಅಷ್ಟುಮಾತ್ರವಲ್ಲದೆ, ನಾನು ಮಾಡಿದ "ವಾಗ್ದಾನವನ್ನು ನೆನಸಿಕೊಂಡೆನು" ಮತ್ತು "ಐಗುಪ್ತ್ಯರು ನಿಮ್ಮಿಂದ ಮಾಡಿಸುವ ಬಿಟ್ಟೀಕೆಲಸಗಳನ್ನು ನಾನು ತಪ್ಪಿಸಿ" ಕಾಪಾಡುವದಕ್ಕೆ ಬಂದಿದ್ದೇನೆ ಎಂಬುದಾಗಿ ಇಸ್ರಾಯೇಲ್ಯರಿಗೆ ತಿಳಿಸಬೇಕೆಂದು ಯೆಹೋವನು ಮೋಶೆಗೆ ಹೇಳುತ್ತಾನೆ (ವಿಮೋಚನಕಾಂಡ 6:5-7). ಅದೇ ರೀತಿಯಲ್ಲಿಯೇ, ನೋಹನ ಕಥೆಯಲ್ಲಿ, ಯೆಹೋವನು ಜ್ಞಾಪಿಸಿಕೊಳ್ಳುವುದು ಪ್ರಾಮುಖ್ಯವಾಗಿದೆ, ಮತ್ತು ಮೂಲಪಿತೃವಿನ ಚರಿತ್ರೆಯು ಅದರ ಮೇಲೆಯೇ ಅವಲಂಬಿತವಾಗಿ ಕಂಡದ್ದು ಇದು ಎರಡನೆಯ ಸಾರಿ ಆಗಿದೆ. 8:1ರಲ್ಲಿ "ದೇವರು ನೋಹನನ್ನೂ ... ನೆನಪಿಗೆ ತಂದುಕೊಂಡು [*ಝೂಕಾರ*]" ಭೂಮಿಯು ಪುನಃ ವಾಸಯೋಗ್ಯವಾಗುವಂತೆ ಪ್ರಳಯದ ನೀರು ತಕ್ಕ ಕಾಲದಲ್ಲಿ ತಗ್ಗಿ ಒಣಗಿ ಹೋಗುವಂತೆ ಮಾಡಿದನು ಎಂಬುದಾಗಿ ವಾಕ್ಯವು ತಿಳಿಸುತ್ತದೆ. ಯೆಹೋವನು ನೋಹನನ್ನು ಪ್ರಳಯದ ವೇಳೆ ನೆನಪಿಸಿಕೊಂಡಿದ್ದು, ಮತ್ತು ಮೇಘದಲ್ಲಿ ಬಿಲ್ಲು ಇರುವದು ಆತನಿಗೆ ಮತ್ತು ಎಲ್ಲಾ ಭವಿಷ್ಯದ ತಲೆಮಾರುಗಳಿಗೆ ದೇವರು ತನ್ನ ಒಡಂಬಡಿಕೆಯ ವಾಗ್ದಾನಗಳಲ್ಲಿ ನಂಬಿಗಸ್ತನಾಗಿರುವನೆಂಬ ಭರವಸವನ್ನು ನೀಡಿತ್ತು. ಆತನ ಒಡಂಬಡಿಕೆಗಳು ಅವನ ಗುಣಸ್ವಭಾವಗಳಲ್ಲಿ ಬೇರೂರಿರುತ್ತವೆ.

**ವಚನ 17.** ದೇವರು ತನ್ನ ಹಾಗೂ **ಎಲ್ಲಾ ಭೂಜೀವಿಗಳಿಗೂ** ನಡುವೆ ಮಾಡಿಕೊಂಡಿದ್ದ **ಒಡಂಬಡಿಕೆಗೆ** ಬಿಲ್ಲು ಒಂದು **ಗುರುತು** ಆಗಿತ್ತು. ಇಲ್ಲಿ ಬಳಸಲಾಗಿರುವ "ಗುರುತು" (אוֹת, *ಒಥ)* ಎಂಬುದು ಹಲವಾರು ವಾಕ್ಯಭಾಗಗಳಲ್ಲಿ ಕಂಡು ಬರುತ್ತದೆ, ಗಮನಾರ್ಹವಾದ ರೀತಿಯಲ್ಲಿ ಐಗುಪ್ತ, ಅರಣ್ಯದಲ್ಲಿ, ಮತ್ತು ಕಾನಾನ್ ದೇಶವನ್ನು ಸ್ವಾಧೀನಪಡಿಸಿಕೊಳ್ಳುವ ವೇಳೆ ಸಂಭವಿಸಿದಂಥ ದೇವರ ಅದ್ಭುತಕರವಾದ ಕೃತ್ಯಗಳನ್ನು ಸೂಚಿಸುವದಾಗಿ ಕಂಡು ಬರುತ್ತದೆ (ವಿಮೋಚನಕಾಂಡ 7:3; ಅರಣ್ಯಕಾಂಡ 14:11, 22; ಧರ್ಮೋಪದೇಶಕಾಂಡ 4:34; 11:3; ಯೆಹೋಶುವ 24:17, 18). *ಒಥ* ಎಂಬುದರ ಅದ್ಭುತಕರವಲ್ಲದ ಅರ್ಥವು ಸಹ ವಿಶೇಷ ಕೃತ್ಯಗಳಲ್ಲಿ ಸ್ಪಷ್ಟವಾಗಿ ಕಂಡು ಬರುತ್ತದೆ, ಉದಾಹರಣೆಗೆ: ಸುನ್ನತಿ (ಆದಿಕಾಂಡ 17:11), ಇಸ್ರಾಯೇಲ್ಯರು ವಿಮೋಚನಯಾತ್ರೆಯ ಬಳಿಕ ಸೀನಾಯಿ ಪರ್ವತದಲ್ಲಿ ದೇವರನ್ನು ಆರಾಧಿಸಿದ್ದರಲ್ಲಿ (ವಿಮೋಚನಕಾಂಡ 3:12), ಇಸ್ರಾಯೇಲ್ಯರು ಐಗುಪ್ತದಲ್ಲಿದ್ದ ತಮ್ಮ ಮನೆಗಳ ಬಾಗಿಲ ನಿಲುವು ಕಂಬಗಳಿಗೂ ಪಟ್ಟಿಗಳಿಗೂ ರಕ್ತವನ್ನು ಹಚ್ಚುವದರಲ್ಲಿ (ವಿಮೋಚನಕಾಂಡ 12:7, 13), ಸಬ್ಬತ್ (ವಿಮೋಚನಕಾಂಡ 31:16, 17), ಮತ್ತು ಪ್ರವಾದಿಗಳ ವಿವಿಧ ಸಾಂಕೇತಿಕ ಕೃತ್ಯಗಳಲ್ಲಿ (ಯೆಶಾಯ 20:3; ಯೆಹೆಜ್ಕೇಲ 4:3).

ಗುರುತುಗಳ ಮಹತ್ವನ್ನು ಜನರು ಗುರುತಿಸುವಂತಾಗುವ ಹಾಗೆ ಅವುಗಳನ್ನು ಯಾವಾಗಲೂ ದೇವರ ಪ್ರಕಟನೆಗೆ ಅನುಗುಣವಾಗಿ ಅರ್ಥನಿರೂಪಣೆ ಮಾಡತಕ್ಕದ್ದು. "ಗುರುತನ್ನು ಅರ್ಥನಿರೂಪಣೆ ಮಾಡುತ್ತಿರುವ ಪ್ರಕಟನೆಯ ವಾಕ್ಯವಿಲ್ಲದೆ ಇರುವಂಥ ಗುರುತು ಯಾವದೂ ಇರುವದಿಲ್ಲ."[10] ಗುರುತುಗಳು ಅದ್ಭುತಕರವಾಗಿದ್ದರೂ ಸರಿಯೇ ಅಥವಾ ಅದ್ಭುತಕರವಲ್ಲದಿದ್ದರೂ ಸರಿಯೇ, ಅವುಗಳು ದೇವರ ಪ್ರಸನ್ನತೆ ಮತ್ತು ಉದ್ದೇಶವನ್ನು ತೋರಿಸುತ್ತವೆ, ಮತ್ತು ಕೆಲವು ಸಾರಿ ಮನುಷ್ಯನ ಮೇಲಿಡಲ್ಪಟ್ಟಿರುವ ದೈವಿಕ ಹೊಣೆಗಾರಿಕೆಗಳನ್ನು ತೋರಿಸುತ್ತವೆ. ಮುಗಿಲು ಬಿಲ್ಲಿನ ವಿಷಯದಲ್ಲಿ ನೋಡುವದಾದರೆ, ಅದು ಯೆಹೋವನ ಮತ್ತು ಸಕಲ ಜೀವರಾಶಿಗಳ ನಡುವಿನ ಒಂದು ಒಡಂಬಡಿಕೆಯ ಜ್ಞಾಪಕ, ಒಂದು ಗುರುತು ಆಗಿದ್ದು, ಭವಿಷ್ಯದಲ್ಲಿ ಇಡೀ ಭೂಮಿಯನ್ನು ಪ್ರಳಯವು ಆವರಿಸಿಕೊಂಡು ನೋಹನ ಕಾಲದಲ್ಲಿ ಜೀವರಾಶಿಗಳನ್ನು ನಾಶಗೊಳಿಸಿದಂತೆ ಆಗುವದಕ್ಕೆ ಅನುಮತಿಯನ್ನು ಕೊಡುವದಿಲ್ಲ ಎಂಬುದನ್ನು ಸೂಚಿಸುತ್ತದೆ. ಮುಗಿಲು ಬಿಲ್ಲು ಎಲ್ಲಾ ಭವಿಷ್ಯದ ತಲೆಮಾರುಗಳಿಗೆ, ಮತ್ತು ವಿಶೇಷವಾಗಿ ಅನಂತರದಲ್ಲಿ ಭೂಮಿಯ ಮೇಲೆ ಬಂದಂಥ ತಾತ್ಕಾಲಿಕ ನ್ಯಾಯತೀರ್ಪುಗಳು (ಸೆರೆವಾಸ ಮತ್ತು ರಕ್ತಸಾಕ್ಷಿಯ ಮರಣ) ಮಧ್ಯದಲ್ಲಿ ವಿಪತ್ತಿಗೊಳಗಾದ ಆತನ ಜನರಿಗೆ ದೇವರ ಕರುಣೆ ಮತ್ತು ಕೃಪೆಯ ಒಂದು ಸಂಕೇತವಾಯಿತು (ನೋಡಿರಿ ಯೆಹೆಜ್ಕೇಲ 1:28; ಪ್ರಕಟನೆ 4:3; 10:1).

ದೇವರು "ಶಾಶ್ವತವಾದ ಒಡಂಬಡಿಕೆ"ಗೆ ಒಂದು "ಗುರುತಾಗಿ" "ಮೇಘಗಳಲ್ಲಿ ಬಿಲ್ಲು" ಇಟ್ಟಿದ್ದರ (9:16) ಅರ್ಥವು ಅವಶ್ಯಕವಾಗಿ ನೋಹನು ನಾವೆಯಿಂದ ಹೊರಗೆ ಬರುವದಕ್ಕೆ ಮುಂಚಿನ ಕಾಲದಲ್ಲಿ ಎಂದಿಗೂ ಮೇಘಗಳಲ್ಲಿ ಬಿಲ್ಲು ಕಾಣಿಸಿಕೊಂಡಿರಲೇ ಇಲ್ಲ ಎಂದಾಗುವದಿಲ್ಲ. ದೇವರು ಮುಗಿಲು ಬಿಲ್ಲಿಗೆ ಹಿಂದೆ ಇಲ್ಲದಂಥ ಒಂದು ಮಹತ್ವವನ್ನು ನೀಡಿದನು ಎಂದಷ್ಟೆ ಅದರರ್ಥವಾಗಿರುತ್ತದೆ. ಅಬ್ರಹಾಮನ ಕಥೆಯಲ್ಲಿ ಇದೇ ರೀತಿಯ ಪರಿಸ್ಥಿತಿಯು ಕಂಡು ಬರುತ್ತದೆ. ನಂಬಿಗಸ್ತರ ಪಿತೃವು ಅನೇಕ ವರ್ಷಗಳ ಕಾಲ ದೇವರ ಸಂಗಡ ನಂಬಿಗಸ್ತನಾಗಿ ನಡೆದುಕೊಂಡ ನಂತರದಲ್ಲಿ, ಸುನ್ನತಿಯನ್ನು ಅವನಿಗೂ ಅವನ "ಸಂತತಿಯವರು ಎಲ್ಲಾ ತಲಾಂತರುಗಳ ವರೆಗೂ" ಇರುವ ಗುರುತಾಗಿ ಕೊಟ್ಟನು (17:9-14). ಉತ್ಪನಶಾಸ್ತ್ರದ ಪುರಾವೆಗಳು ಸೂಚಿಸುವದೇನೆಂದರೆ ಮೂಲಪಿತೃವಿನ ಕಾಲಕ್ಕಿಂತ ಬಹಳ

ಹಿಂದೆಯೇ ಪ್ರಾಯಕ್ಕೆ ಬಂದಾಗ ಪುರುಷನ ಜನನಾಂಗದ ತುದಿಯ ಚರ್ಮವನ್ನು ಈಗಾಗಲೇ ಒಂದು ಪ್ರಾಚೀನ ಧಾರ್ಮಿಕ ಆಚಾರವಾಗಿ ನಡಿಸಲಾಗುತ್ತಿತ್ತು ಎಂಬುದನ್ನು ಸೂಚಿಸುತ್ತವೆ.[11] ಹೇಗೂ, ಅಬ್ರಹಾಮನು ಸ್ವತಃ ತೊಂಭತ್ತೊಂಬತ್ತು ವಯಸ್ಸಿನಲ್ಲಿ ಸುನ್ನತಿಯನ್ನು ಮಾಡಿಸಿಕೊಂಡ ವೇಳೆ, ಅದು ದೇವರು ತನ್ನ ಜನರೊಂದಿಗೆ ಮಾಡಿಕೊಂಡಿದ್ದ ಒಡಂಬಡಿಕೆಗೆ ಒಂದು ಶಾರೀರಿಕ ಗುರುತು ಆಗಿ ಮಾರ್ಪಟ್ಟಿತು.

ಅದೇ ವಿಧದಲ್ಲಿಯೇ, ಸೀನಾಯಿ ಪರ್ವತದಲ್ಲಿ ಇಸ್ರಾಯೇಲ್ಯರು ಸಬ್ಬತ್ ದಿನದ ಗುರುತನ್ನು ಪಡೆದುಕೊಂಡ ವೇಳೆ, ಅದು ಯೆಹೋವನು ಅವರ ಸಂಗಡ ಮಾಡಿಕೊಂಡ ಒಂದು ಗುರುತಾಗಿ *(ಒಥ)* ಹೊಸ ಅರ್ಥವನ್ನು ಪಡೆದುಕೊಂಡಿತು (ವಿಮೋಚನಕಾಂಡ 31:16, 17), ಹಾಗಿದ್ದಾಗ್ಯೂ ಅವರು ಈಗಾಗಲೇ ಅರಣ್ಯದಲ್ಲಿ ಸಬ್ಬತ್ ದಿನವನ್ನು ಆಚರಿಸುತ್ತಿದ್ದರು (ವಿಮೋಚನಕಾಂಡ 16:22-30). ಹಾಗಾದರೆ, ಅಬ್ರಹಾಮ ಅಥವಾ ಇಸ್ರಾಯೇಲ್ಯರ ಕಾಲಕ್ಕಿಂತಲೂ ಬಹಳ ಹಿಂದೆಯೇ, ಯೆಹೋವನು ಮುಗಿಲು ಬಿಲ್ಲನ್ನು ನೋಹ ಮತ್ತು ಆತನ ನಂತರ ಬರುವ ಸಕಲ ಮಾನವರೊಂದಿಗೆ ಮಾಡಿಕೊಂಡ ತನ್ನ ಒಡಂಬಡಿಕೆಯ ಒಂದು ಅರ್ಥಪೂರ್ಣವಾದ ಗುರುತಾಗಿ *(ಒಥ)* ಮಾರ್ಪಡಿಸಿರಬಹುದಾಗಿದೆ. ದೇವರು ಯಾವಾಗಲೂ ತನ್ನ ವಾಗ್ದಾನಗಳನ್ನು ಕಾಪಾಡಿಕೊಳ್ಳುತ್ತಾನಾದ್ದರಿಂದ, ಆತನು ಪುನಃ ಇನ್ನೆಂದಿಗೂ ನೀರು ಭೂಮಿಯನ್ನು ಆವರಿಸಿಕೊಂಡು ಸಕಲ ಜೀವಿಗಳನ್ನು ನಾಶಗೊಳಿಸುವಂತೆ ನೀರಿನಿಂದ ವಿನಾಶತೆಯುಂಟಾಗುವ ಹಾಗೆ ಮಾಡುವದಿಲ್ಲ.

## ನೋಹನ ಶಾಪ ಮತ್ತು ಆಶೀರ್ವಾದಗಳು (9:18-29)

ದೇವರ ಆಗಷ್ಟೇ ನಿರ್ಮಾಣವಾದ, ಹೊಸ ಲೋಕದಲ್ಲಿ ಸಹ, ಮಾನವರು ಪಾಪಕ್ಕೆ ಒಳಗಾಗಿ ಅನೀತಿ ಮತ್ತು ಕಳಪೆ ವಿವೇಚನೆಗಳ ಕಡೆಗೆ ಒಲವು ಬೆಳೆಸಿಕೊಳ್ಳುವದಕ್ಕೆ ಬಹಳ ಕಾಲ ಬೇಕಾಗಲಿಲ್ಲ. ಲೋಕದಲ್ಲಿ ಜನರು ಅಧಿಕಗೊಂಡ ಹಾಗೆ, ಅದು ಈ ಹಿಂದೆ ಇದ್ದಂತೆಯೇ ಬಹಳಷ್ಟು ಮುಂದುವರೆಸಿಕೊಂಡು ಹೋಗುವದಾಗಿತ್ತು, ಜನರಿಗೆ ಭಕ್ತಿ ಹಾಗೂ ಪಾಪದ ನಡುವಿನ ಆಯ್ಕೆಗಳು ಅನುದಿನವೂ ಎದುರಾಗುತ್ತಿದ್ದವು.

### ನೋಹನ ವಂಶ (9:18, 19)

**18ನಾವೆಯಿಂದ ಹೊರಟುಬಂದ ನೋಹನ ಮಕ್ಕಳು ಶೇಮ್ ಹಾಮ್ ಯೆಫೆತ್ ಎಂಬವರೇ (ಹಾಮನು ಕಾನಾನನ ತಂದೆಯು). 19ಈ ಮೂವರು ನೋಹನ ಮಕ್ಕಳು; ಇವರಿಂದಲೇ ಭೂಮಿಯಲ್ಲೆಲ್ಲಾ ಹರಡಿಕೊಂಡಿರುವ ಜನರು ಉತ್ಪತ್ತಿಯಾದರು.**

**ವಚನ 18.** ಪ್ರಳಯದ ಕಥೆಯು ನೋಹ ಮತ್ತು ಆತನ ಮೂವರು ಪುತ್ರರನ್ನು ಉಲ್ಲೇಖಿಸುವದರೊಂದಿಗೆ ಆರಂಭಗೊಂಡಿತ್ತು: "ಶೇಮ್, ಹಾಮ್, ಯೆಪೆತ್" (9:9, 10). ಅದೇ ರೀತಿಯಲ್ಲಿಯೇ, ಮೂಲಪಿತೃ ಮತ್ತು ಅವನ ಸಂತಾನದ ಕುರಿತು ಇನ್ನೊಂದು ಹೇಳಿಕೆಯೊಂದಿಗೆ ಅಂತ್ಯಗೊಳ್ಳುತ್ತದೆ: **ನಾವೆಯಿಂದ ಹೊರಟುಬಂದ ನೋಹನ ಮಕ್ಕಳು ಶೇಮ್ ಹಾಮ್ ಯೆಫೆತ್ ಎಂಬವರೇ.** ಅದು **ಹಾಮನು ಕಾನಾನನ ತಂದೆಯು** ಎಂದು ಸೇರಿಸಿ ಹೇಳುತ್ತದೆ, ಇದು 9:25ರಲ್ಲಿ ನೋಹನು ನೀಡುವ ಶಾಪವನ್ನು ಎದುರು ನೋಡುವದಾಗಿದೆ. ಕಾನಾನನ ಕುರಿತಾದ ಹೇಳಿಕೆಯು ಅಬ್ರಹಾಮನ ಸಂತತಿಯವರು (ಇಸ್ರಾಯೇಲ್ಯರು) ಮತ್ತು ಕಾನಾನ್ಯರ ನಡುವೆ ಭವಿಷ್ಯದಲ್ಲಿ ವಾಗ್ದಾನ ದೇಶದೊಳಗೆ ನಡೆಯುವ ವ್ಯಾಜ್ಯಗಳಿಗೆ ಛಾಯೆ

ಸಹ ಆಗಿರುತ್ತದೆ.

**ವಚನ 19.** ಲೇಖಕನು "ನೋಹನ ಮಕ್ಕಳು" ಬಗ್ಗೆ ಮಾತಾಡುವ ವೇಳೆ ಅವರು ಮುಖಾಂತರವಾಗಿ **ಭೂಮಿಯಲ್ಲೆಲ್ಲಾ ಹರಡಿಕೊಂಡಿರುವ ಜನರು ಉತ್ಪತ್ತಿಯಾದರು** ಎಂಬುದನ್ನು ದೃಢೀಕರಿಸುತ್ತಾನೆ. ಈ ಕುಟುಂಬವು ಬೆಳವಣಿಗೆಯು "ಬಹುಸಂತಾನವುಳ್ಳವರಾಗಿ ಹೆಚ್ಚಿರಿ; ಭೂಲೋಕದಲ್ಲೆಲ್ಲಾ ತುಂಬಿಕೊಳ್ಳಿರಿ" (9:1) ಎಂಬ ದೇವರ ಆಜ್ಞೆಯನ್ನು ಒಳಗೊಂಡ ದೇವರ ಆಶೀರ್ವಾದವು ಅವರ ಜೀವಿತಗಳಲ್ಲಿ ಕೆಲಸ ಮಾಡುತ್ತಿತ್ತೆಂಬುದನ್ನು ತೋರಿಸುತ್ತದೆ.

## ನೋಹನ ಅಚಾತುರ್ಯತೆ (9:20, 21)

**20ನೋಹನು ವ್ಯವಸಾಯಗಾರನಾಗಿದ್ದನು; ಅವನೇ ದ್ರಾಕ್ಷೇತೋಟವನ್ನು ಪ್ರಾರಂಭಿಸಿದನು. ಅವನು ದ್ರಾಕ್ಷಾರಸವನ್ನು ಕುಡಿಯಲು ಅಮಲೇರಿದ್ದರಿಂದ ಗುಡಾರದಲ್ಲಿ ಬೆತ್ತಲೆಯಾಗಿ ಬಿದ್ದಿದ್ದನು.**

**ವಚನ 20.** ಪ್ರಳಯದ ನಂತರ, **ನೋಹನು** ತನಗೆ ಹಾಗೂ ತನ್ನ ಕುಟುಂಬಕ್ಕೆ ಸಹಾಯವನ್ನು ಮಾಡಿಕೊಳ್ಳುವುದು ಅಗತ್ಯವಾಗಿತ್ತು, ಆದ್ದರಿಂದ ಆತನು **ವ್ಯವಸಾಯಗಾರನಾಗಿದ್ದನು; ಅವನೇ ದ್ರಾಕ್ಷೇತೋಟವನ್ನು ಪ್ರಾರಂಭಿಸಿದನು**. ಇಬ್ರಿಯ ವಾಕ್ಯದ ಒಂದು ಅಕ್ಷರಶಃ ಅನುವಾದವು "ಮತ್ತು ಮಣ್ಣಿನ ಮನುಷ್ಯನಾದ ನೋಹನು, ಒಂದು ದ್ರಾಕ್ಷೇತೋಟವನ್ನು ಕೃಷಿ ಮಾಡಿ *ಆರಂಭಿಸಿದನು"* (ಒತ್ತಿ ಹೇಳಿದ್ದು ನನ್ನದು).[12] RSVಯು "ನೋಹನು ಭೂಮಿಯನ್ನು ಬೇಸಾಯ ಮಾಡಿದ ಮೊದಲಿಗನು" ಎಂದು ಹೇಳಿದರೆ, ಇತರ ತರ್ಜುಮೆಗಳು ನೋಹನೇ ಮೊಟ್ಟಮೊದಲನೆಯದಾಗಿ "ಒಂದು ದ್ರಾಕ್ಷೇತೋಟವನ್ನು ನೆಟ್ಟವನು" ಎಂದು ಹೇಳುತ್ತವೆ (NRSV; NJPSV). *The Jewish Study Bible* ಹೇಳುವದೇನೆಂದರೆ, ನೋಹನು "ದ್ರಾಕ್ಷೆಗಳನ್ನು ಬೆಳೆಸಿದ ಮೊದಲ ವ್ಯಕ್ತಿಯಾಗಿ," ಮದ್ಯಪಾನವನ್ನು ಅತಿಯಾಗಿ ಸೇವಿಸುವದರಿಂದಾಗುವ ಕೀಳುಮಟ್ಟಕ್ಕೆ ನಡಿಸುವ ಪರಿಣಾಮಗಳನ್ನು" ಅರಿತುಕೊಂಡಿರಬೇಕಿತ್ತು.[13]

ಆದಾಮ ಮತ್ತು ಕಾಯಿನರು ಅಷ್ಟೊಂದು ಆದಿಯಲ್ಲಿಯೇ ಭೂಮಿಯನ್ನು ಬೇಸಾಯ ಮಾಡಿದವರಾಗಿದ್ದದರಿಂದ (2:15; 3:17–19; 4:2, 3), ನೋಹನು ಹೇಗೆ "ಭೂಮಿಯನ್ನು ಬೇಸಾಯ ಮಾಡಿದ ಮೊದಲ ವ್ಯಕ್ತಿ" ಆಗುವದಕ್ಕೆ ಸಾಧ್ಯವೆಂಬುದನ್ನು ಅರ್ಥಮಾಡಿಕೊಳ್ಳುವುದು ಕಷ್ಟಕರವಾಗಿರುತ್ತದೆ. ಅದರ ಜೊತೆಗೆ, ನೋಹನು "ದ್ರಾಕ್ಷೇತೋಟವನ್ನು ನೆಟ್ಟವರಲ್ಲಿ ಮೊಟ್ಟಮೊದಲನೆಯವನು"[14] ಎಂಬುದಾಗಿ ವಾಕ್ಯವು ತಿಳಿಸುವದಿಲ್ಲ, ಅತಿಯಾದ ದ್ರಾಕ್ಷಾರಸವನ್ನು ಕುಡಿದು ಮತ್ತುಗೊಂಡ ಮೊದಲನೆಯವನೆಂದಾಗಲಿ ಸಹ ಅದು ಹೇಳುವದಿಲ್ಲ. ಅಂಥ ಅನುವಾದಗಳು ನೋಹನ ಕುಡಿಕತನವನ್ನು ಕ್ಷಮಿಸಿ ಆತನು ಯಾವ ತಪ್ಪನ್ನು ಮಾಡಿರಲಿಲ್ಲ ಎಂಬಂತೆ ಬಿಂಬಿಸುವದಕ್ಕೆ ಮಾಡುವ ಪ್ರಯತ್ನಗಳಂತಿರುತ್ತವೆ. ಸೃಷ್ಟಿಯ ಸಮಯದಿಂದ ಮೊದಲ್ಗೊಂಡು ಗತಿಸಿ ಹೋಗಿದ್ದ ದೀರ್ಘಕಾಲದ ವೇಳೆಯಲ್ಲಿ, ನೋಹನ ಕಾಲದ ತನಕವೂ ದ್ರಾಕ್ಷಾರಸವನ್ನು ಪಾನೀಯವಾಗಿ ಕಂಡುಹಿಡಿದಿರಲಿಲ್ಲ ಎಂಬುದು ನಿಜಕ್ಕೂ ವಿಚಿತ್ರವೇನಿಸುತ್ತದೆ. ಹೆಚ್ಚು ನ್ಯಾಯಸಮ್ಮತವೆಂದು ತೋರುವ ಅರ್ಥನಿರೂಪಣೆಯೆಂದರೆ "ನೋಹನು ತನಗೆ ಈ ಮುಂಚೆ ಕೃಷಿ ಮತ್ತು ಬಳಕೆಗಳು ಗೊತ್ತಿಲ್ಲದೆ ಇದ್ದಂಥ ಒಂದು ಗಿಡವನ್ನು ಬೆಳೆಸುವದಕ್ಕೆ ಆರಂಭಿಸಿದನು."[15]

**ವಚನ 21.** ನೋಹನು ದೇವರ ಸಂಗಡ ಅನ್ಯೋನ್ಯವಾಗಿ ನಡೆಯುತ್ತಿದ್ದ ನೀತಿವಂತ ಮನುಷ್ಯನಾಗಿದ್ದನಾದರೂ, ಆತನು ಪಾಪವನ್ನು ಮಾಡುವದಕ್ಕೆ ಸಾಧ್ಯವಿಲ್ಲದ

ಮನುಷ್ಯನಾಗಿದ್ದನು ಎಂದು ಯೋಚಿಸದಂತೆ ಜಾಗರೂಕರಾಗಿರಬೇಕು. ವಾಕ್ಯವು ಸ್ಪಷ್ಟವಾಗಿ ಹೇಳುವದೇನೆಂದರೆ **ದ್ರಾಕ್ಷಾರಸವನ್ನು ಕುಡಿಯಲು ಅಮಲೇರಿದ್ದನು**. ಕುಡಿದ ಅಮಲಿನಲ್ಲಿ, ನೋಹನು **ಗುಡಾರದಲ್ಲಿ ಬೆತ್ತಲೆಯಾಗಿ ಬಿದ್ದಿದ್ದನು**. ನೋಹನು ತನ್ನ ಗುಡಾರದಲ್ಲಿ ಏಕೆ ಬೆತ್ತಲೆಯಾಗಿದ್ದನು ಎಂಬುದು ನಮಗೆ ತಿಳಿಸಲ್ಪಟ್ಟಿಲ್ಲ. ಬಿಸಿಲಿನ ವಾತಾವರಣದ ವೇಳೆ ಪ್ರಾಚೀನ ಮಧ್ಯಪ್ರಾಚ್ಯ ಮತ್ತು ಮೆಡಿಟೆರ್ರೇನಿಯನ್ ಪ್ರಾಂತ್ಯದಲ್ಲಿ ತಮ್ಮ ಗುಡಾರಗಳಲ್ಲಿ ಬೆತ್ತಲೆಯಾಗಿ ಮಲಗಿಕೊಳ್ಳುವದು ಅಸಹಜವೇನೂ ಆಗಿರಲಿಲ್ಲ (ಪ್ರಕಟನೆ 16:15).[16] ನೋಹನ ಬೆತ್ತಲೆತನವು ವ್ಯತ್ಯಾಸವಾದದ್ದಾಗಿತ್ತೆಂಬುದು ಸ್ಪಷ್ಟವಾಗಿರುತ್ತದೆ. ಆತನು ತನ್ನ ಹೆಂಡತಿಯೊಂದಿಗೆ ಲೈಂಗಿಕ ಸಂಬಂಧಕ್ಕೆ ಸಿದ್ಧಗೊಳ್ಳುತ್ತಿದ್ದಿರಬೇಕು ಅಥವಾ ಮದ್ಯವು ಅವನ ಸಂಕೋಚತೆಯನ್ನು ತೊಲಗಿಸಿದ್ದರಿಂದ ಮತ್ತು ಅವನ ವಿವೇಚನೆಯನ್ನು ಕೆಡಿಸಿದ್ದರಿಂದಾಗಿ, ಆತನು ಒಂದು ಯೋಗ್ಯವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದನು ಎಂಬುದಾಗಿ ಕೆಲವರು ಊಹಿಸಿಕೊಳ್ಳುತ್ತಾರೆ.

**ಹಾಮನ ಪಾಪ (9:22, 23)**

**[22]ಕಾನಾನನ ತಂದೆಯಾದ ಹಾಮನು ತಂದೆಯು ಬೆತ್ತಲೆಯಾಗಿರುವದನ್ನು ಕಂಡು ಹೊರಗಿದ್ದ ಅಣ್ಣತಮ್ಮಂದಿರಾದ ಶೇಮ್ ಯೆಫೆತರಿಗೆ ತಿಳಿಸಿದನು. [23]ಇವರಿಬ್ಬರು ಕಂಬಳಿಯನ್ನು ತೆಗೆದುಕೊಂಡು ತಮ್ಮಿಬ್ಬರ ಬೆನ್ನಿನ ಮೇಲೆ ಹಾಕಿಕೊಂಡು ಹಿಂಧಿಂದಕ್ಕೆ ನಡೆದು ತಂದೆಗೆ ಹೊದಿಸಿ ಅವನ ಮಾನವನ್ನು ಕಾಪಾಡಿದರು; ಅವರು ಹಿಮ್ಮುಖರಾಗಿದ್ದದರಿಂದ ತಂದೆಯು ಬೆತ್ತಲೆಯಾಗಿದ್ದದ್ದನ್ನು ನೋಡಲಿಲ್ಲ.**

**ವಚನ 22.** ಮತ್ತೊಂದಾವರ್ತಿ, **ಹಾಮನನ್ನು ಕಾನಾನನ ತಂದೆ** ಎಂಬುದಾಗಿ ಗುರುತಿಸಲಾಗಿದೆ (ನೋಡಿರಿ 9:18), ಹೇಳಲ್ಪಟ್ಟಿರುವ ಹಾಗೆ ಅವನು **ತಂದೆಯು ಬೆತ್ತಲೆಯಾಗಿರುವದನ್ನು ಕಂಡನು.** ಸ್ಪಷ್ಟವಾಗಿರುವಂತೆ, ಆತನಿಗೆ ತನ್ನ ತಂದೆಯ ಗುಡಾರದಲ್ಲಿ ಹೋಗುವ ಕೆಲಸವೇ ಇರಲಿಲ್ಲ. ಅದರೊಳಗಡೆಯಲ್ಲಿ ಏನೋ ಸಮಸ್ಯೆಯಿರುತ್ತದೆಂದು ಅವನಿಗೆ ಸಂಶಯ ಬಂದಿತ್ತೋ? ಆತನು ಕೇವಲ ಕುತೂಹಲಗೊಂಡಿದ್ದನೋ, ಅಥವಾ ತನ್ನ ತಂದೆಯನ್ನು ಬಲಿಪಶು ಮಾಡಿ ವಿಕೃತ ಆಶೆಯನ್ನು ತೀರಿಸಿಕೊಳ್ಳಲು ಬಯಸಿದನೋ? ಹಾಮನು ಗುಡಾರದೊಳಗೆ ಯಾವ ಉದ್ದೇಶವನ್ನು ಇಟ್ಟುಕೊಂಡು ಹೋದನು ಎಂಬುದನ್ನು ತಿಳಿಯುವದಕ್ಕೆ ನಮಗೆ ಯಾವ ದಾರಿಯೂ ಇರುವದಿಲ್ಲ, ಯಾಕೆಂದರೆ ವಾಕ್ಯವು ಅದನ್ನು ಬಯಲುಗೊಳಿಸುವದಿಲ್ಲ. ಒಂದಂತೂ ನಮಗೆ ತಿಳಿದದೆ, ಆದಾಮ ಮತ್ತು ಹವ್ವಳರು ಪಾಪ ಮಾಡಿದ ಬಳಿಕ, ಅವರ ಬೆತ್ತಲೆತನದಿಂದಾಗಿ ಶೀಘ್ರವೆ ಅವರಲ್ಲಿ ನಾಚಿಕೆಯುಂಟಾಗಿತ್ತು (3:7, 10). ಅನಂತರದಲ್ಲಿ, ಅಸಭ್ಯವಾಗಿ ಬೆತ್ತಲೆತನವನ್ನು ತೋರಿಸಿಕೊಳ್ಳಬಾರದೆಂದು ಧರ್ಮಶಾಸ್ತ್ರದಲ್ಲಿ ಯಾಜಕರಿಗೆ ಎಚ್ಚರಿಸಲಾಗಿತ್ತು (ವಿಮೋಚನಕಾಂಡ 20:26; 28:42). ಅಷ್ಟುಮಾತ್ರವಲ್ಲದೆ, ರಕ್ತಸಂಬಂಧಿಕರೊಂದಿಗೆ ಸಂಭೋಗ ನಡಿಸುವದರ ವಿರುದ್ಧವಾದ ಶಾಸನದಲ್ಲಿ, ಒಬ್ಬನ ಸಂಗಾತಿಯನ್ನು ಹೊರತು ಪಡಿಸಿ ಮತ್ತೊಬ್ಬರ ಬಟ್ಟೆಯನ್ನು ನೇರವಾಗಿ ಬಿಚ್ಚಿ ಬೆತ್ತಲೆಗೊಳಿಸುವದನ್ನು (ಜನನಾಂಗಗಳನ್ನು) ನಿಷೇಧಿಸಲಾಗಿತ್ತು (ಯಾಜಕಕಾಂಡ 18:6–18).

ಹಾಮನ ಪಾಪದ ವಿಷಯದವಾಗಿ ಇನ್ನು ಕೆಲವು ಆಲೋಚನೆಗಳನ್ನು ಮುಂದಿಡಲಾಗಿರುತ್ತದೆ. ಆತನು ತನ್ನ ತಂದೆಯೊಂದಿಗೆ ಸಲಿಂಗ ಕಾಮವನ್ನು ನಡಿಸುವ

ಉದ್ದೇಶವನ್ನಿಟ್ಟುಕೊಂಡಿದ್ದನು ಎಂಬುದಾಗಿ ಕೆಲವರು ಭಾವಿಸಿಕೊಳ್ಳುತ್ತಾರೆ. ಇನ್ನೊಂದು ಅಭಿಪ್ರಾಯವು ಏನೆಂದರೆ ಆತನು ತನ್ನ ತಾಯಿಯೊಂದಿಗೆ ಲೈಂಗಿಕವಾಗಿ ಜೊತೆಯಲ್ಲಿರಲು ಬಯಸಿದ್ದನು ಎಂಬುದೆ; ಈ ವಿಚಾರವನ್ನು ಬೆಂಬಲಿಸುವವರು ಯಾಜಕಕಾಂಡ 18:7ನ್ನು ಮುಂದಿಡುತ್ತಾರೆ. ಆ ವಾಕ್ಯವು "ತಂದೆಗೆ ಮಾನಭಂಗವಾಗುವದು" ನಡೆಯಕೂಡದು ಎಂಬುದಾಗಿ ಶಾಸನವನ್ನು ಮಾಡುವಾಗ, ವಾಸ್ತವಿಕದಲ್ಲಿ ಆ ನಿಷೇಧಾಜ್ಞೆಯು ಒಬ್ಬನು ತಾಯಿಯೊಂದಿಗೆ ಲೈಂಗಿಕ ಸಂಬಂಧವನ್ನಿಟ್ಟುಕೊಳ್ಳುವುದರ ವಿರುದ್ಧವಾಗಿದೆ. ಈ ಎಲ್ಲಾ ಊಹಾಪೋಹಗಳು ಅತಿಯಾಗಿ ವ್ಯಾಖ್ಯಾನಿಸುವಿಕೆಗಳಾಗಿರುತ್ತವೆ; ವಾಕ್ಯವು ಕೇವಲ ಹಾಮನು "ತಂದೆಯು ಬೆತ್ತಲೆಯಾಗಿರುವದನ್ನು ಕಂಡ" ವೇಳೆ, ಆತನು **ಹೊರಗಿದ್ದ ಅಣ್ಣತಮ್ಮಂದಿರಾದ ಶೇಮ್ ಯೆಫೆತರಿಗೆ ತಿಳಿಸಿದನು** ಎಂದಷ್ಟೇ ಹೇಳುತ್ತದೆ.

ಹಾಮನು ತನ್ನ ಸಹೋದರರಿಗೆ ಏನು ಹೇಳಿದನೆಂಬುದನ್ನಾಗಲಿ ಅಥವಾ ಯಾವ ಮನೋಭಾವದೊಂದಿಗೆ ಘಟನೆಯ ಕುರಿತು ಮಾತಾಡಿದನೆಂಬುದನ್ನಾಗಲಿ ಚರಿತ್ರೆಯು ತಿಳಿಸುವದಿಲ್ಲ. ಆತನು ಅವರನ್ನು ತಂದೆಯ ಬೆತ್ತಲೆತನವನ್ನು ನೋಡುವಂತೆ ಮತ್ತು ಅವನ ಕಾಮಾಭಿಲಾಷೆಯುಳ್ಳ ಲೈಂಗಿಕಪ್ರದರ್ಶನದ ತೃಪ್ತಿಯನ್ನು ಪಡೆಯುವಂತೆ ಆಮಂತ್ರಿಸಿದನೋ? ಹಾಮನು ತನ್ನ ಸಹೋದರರಿಗೆ ಏನೇ ಹೇಳಿದ್ದರೂ ಸರಿಯೇ, ಅದು ಬಹುಶಃ ಅವನ ವಯಸ್ಸಾದ ತಂದೆಯ ಕಡೆಗೆ ಹಗೆತನವನ್ನು ತೋರಿಸುವಂಥ ಮತ್ತು ಅಪಹಾಸ್ಯಕ್ಕೆ ಗುರಿಪಡಿಸುವಂತಹ ರೀತಿಯಲ್ಲಿ ಕುಚೋದ್ಯದಿಂದ ಹೇಳಿರಬಹುದಾಗಿದೆ. ಹಾಮನು ತನ್ನ ತಂದೆಯ ಕಡೆಗೆ ಸ್ವಲ್ಪವೂ ಕನಿಕರ ಹೊಂದಿರಲಿಲ್ಲ ಅಥವಾ ಅವನ ಜೀವಿತದ ಇಂತಹ ದುರ್ಬಲ ಸಂದರ್ಭದಲ್ಲಿ ಅವನನ್ನು ಸನ್ಮಾನಿಸಿಲ್ಲ. ಅನಂತರದಲ್ಲಿ, ಬೇರೆಯವರ "ಬೆತ್ತಲೆತನವನ್ನು ನೋಡಬೇಕೆಂದು" ಅವರನ್ನು ಅಮಲೇರಿಸುವ ಜನರನ್ನು ಪ್ರವಾದಿಯು ಖಂಡಿಸುತ್ತಾನೆ (ಹಬಕ್ಕೂಕ 2:15). ಹಾಮನು ದ್ರಾಕ್ಷಾರಸವನ್ನು ಅತಿಯಾಗಿ ಕುಡಿಯುವಂತೆ ನೋಹನನ್ನು ಪ್ರೋತ್ಸಾಹಿಸಿದನೆಂಬುದಾಗಿ ನಮಗೆ ತಿಳಿಸಲ್ಪಟ್ಟಿಲ್ಲವಾದರೂ, ಆತನು ಆ ಶೋಚನೀಯ ಪರಿಸ್ಥಿತಿಯ ಲಾಭ ಪಡೆದುಕೊಂಡು, ತನ್ನ ತಂದೆಯ ಬೆತ್ತಲೆತನವನ್ನು ನೋಡುವ ಮೂಲಕ ಅಗೌರವವನ್ನು ತೋರಿಸಿದನೆಂದು ಕಾಣಿಸುತ್ತದೆ. ಅಷ್ಟುಮಾತ್ರವಲ್ಲದೆ, ತನ್ನ ಸಹೋದರರಿಗೆ ಅದರ ಬಗ್ಗೆ ಹೇಳುವ ಮೂಲಕ ಮತ್ತು ಸಂಭಾವ್ಯವಾಗಿ ಅವರ ತಂದೆಯ ಅವಮಾನವನ್ನು ನೋಡುವಂತೆ ಆಮಂತ್ರಿಸುವ ಮೂಲಕ, ಆತನು ತನ್ನ ಪಾಪವನ್ನು ಒಟ್ಟುಗೂಡಿಸಿಕೊಂಡನು.

ಶಾಸ್ತ್ರಗಳು ಹಾಮನ ಪಾಪವು ಯಾವ ಸ್ವಭಾವದ್ದಾಗಿತ್ತೆಂಬುದನ್ನು ನಿಖರವಾಗಿ ಬಯಲುಗೊಳಿಸುವದಿಲ್ಲವಾದರೂ, ಆತನು ತಂದೆಯ ಕಡೆಗೆ ನಡೆದುಕೊಂಡ ರೀತಿಯು ಖಂಡಿತವಾಗಿಯೂ ಸರಿಯಾದದ್ದಾಗಿರಲಿಲ್ಲ. ಪ್ರಾಚೀನ ಜಗತ್ತಿನಲ್ಲಿ, ಮತ್ತು ಈ ದಿನದಲ್ಲಿ ಸಹ ಹೆಚ್ಚು ಸಂಪ್ರದಾಯವಾದಿ ಸಮಾಜಗಳೊಳಗೆ ಮಕ್ಕಳು ತಮ್ಮ ಹೆತ್ತವರನ್ನು ಸನ್ಮಾನಿಸುವದು ಕಡ್ಡಾಯವಾಗಿರುತ್ತದೆ. ದೇವರು ಈ ಭಾವನೆಯನ್ನು ದಶಾಜ್ಞೆಯಲ್ಲಿ ಈ ಕೆಳಗಿನ ಮಾತುಗಳಲ್ಲಿ ಸೇರ್ಪಡೆಗೊಳಿಸಿದ್ದನು: "ನಿಮ್ಮ ತಂದೆತಾಯಿಗಳನ್ನು ಸನ್ಮಾನಿಸಬೇಕು" (ವಿಮೋಚನಕಾಂಡ 20:12). ಅಲ್ಲದೆ ವಾಗ್ದಾನ ದೇಶದಲ್ಲಿ ಇಸ್ರಾಯೇಲ್ಯರು ನಡೆದುಕೊಳ್ಳಬೇಕಾದ ರೀತಿಯ ಕುರಿತು ಉಪದೇಶಗಳನ್ನು ತನ್ನ ವಿದಾಯ ಭಾಷಣದಲ್ಲಿ ನೀಡುವವನಾಗಿ, ಮೋಶೆಯು ಯಾವನಾದರೂ ತನ್ನ ತಂದೆಯನ್ನಾಗಲಿ ತಾಯಿಯನ್ನಾಗಲಿ ಸನ್ಮಾನಿಸದಿದ್ದರೆ ಒಂದು ವಿಶೇಷವಾದ ಶಾಪವು ಘೋಷಿಸಲ್ಪಡುವದೆಂದು ತಿಳಿಸಿದನು. ಈ ಉಪದೇಶಗಳಿಗೆ ಪ್ರತಿಕ್ರಿಯೆಯಾಗಿ, ಎಲ್ಲಾ ಜನರು "ಆಮೆನ್" ಎಂದು ಹೇಳಿ ಸಮ್ಮತಿಯನ್ನು ಸೂಚಿಸಬೇಕಿತ್ತು

(ಧರ್ಮೋಪದೇಶಕಾಂಡ 27:16).

ತಮ್ಮ ತಂದೆತಾಯಿಗಳು ಅವಮಾನಕರವಾದ ವಿಧದಲ್ಲಿ ನಡೆದುಕೊಳ್ಳುವ ಸಂದರ್ಭದಲ್ಲಿ ಮಕ್ಕಳು ಹೇಗೆ ಪ್ರತಿಕ್ರಿಯಿಸಬೇಕೆಂಬುದರ ಕುರಿತು ಹಳೆಯ ಒಡಂಬಡಿಕೆಯು ಯಾವ ಮಾರ್ಗದರ್ಶನವನ್ನೂ ಕೊಡುವದಿಲ್ಲ, ಆದರೆ ಇಸ್ರಾಯೇಲ್ಯರು ಬಹುಶಃ ಉಗಾರಿಟಿಕ್ ಅಕ್ವಾಟನ ಮಹಾಕಾವ್ಯದೊಂದಿಗೆ ಸಹಮತವನ್ನು ಹೊಂದಿರಬಹುದಾಗಿದೆ, ಅದು ಹೇಳುವದೇನೆಂದರೆ ತಂದೆಯು "ಪಾನಮತ್ತನಾಗಿದ್ದಲ್ಲಿ, ಮಗನು ಅವನ ಕೈಯನ್ನು ಹಿಡಿದು ಎತ್ತುವನು, ಅವನು ದ್ರಾಕ್ಷಾರಸದಿಂದ ಅಮಲೇರಿದ ವೇಳೆ ಅವನನ್ನು ಎತ್ತಿಕೊಂಡು ಹೋಗುವನು"[18] ಎಂಬುದೆ. ಸರಳವಾಗಿ ಹೇಳುವದಾದರೆ, ತಂದೆಯು ಅಮಲೇರಿಸುವ ಪಾನದಿಂದ ಒಲಾಡುತ್ತಿರುವದಾದರೆ ಮಗನು ಅವನನ್ನು ಸ್ಥಿರಗೊಳಿಸಿ ನೆರವು ನೀಡುವನು; ಮತ್ತು ಅವನನ್ನು ಅಪಹಾಸ್ಯ ಮಾಡಬಹುದಾದವರ ಕಣ್ಣುಗಳಿಗೆ ಬೀಳದಂತೆ ಅವನನ್ನು ಕೈ ಹಿಡಿದು ಅಥವಾ ಎತ್ತಿಕೊಂಡು ಒಂದು ಖಾಸಗಿ ಸ್ಥಳಕ್ಕೆ ಒಯ್ಯುವನು.

**ವಚನ 23. ಶೆಮ್ ಯೆಪೆತ್** ಇವರು ತಮ್ಮ ಸಹೋದರನು ಆರಂಭಗೊಳಿಸುವದಕ್ಕೆ ಪ್ರಯತ್ನಿಸುತ್ತಿದ್ದ ಯಾವದೇ ಕೃತ್ಯದಲ್ಲಿ ಭಾಗವಹಿಸಲಿಲ್ಲ, ಆದರೆ ಮುಜುಗರಕ್ಕೀಡು ಮಾಡಬಹುದಾದ ಅಥವಾ ಅನೀತಿಯ ಎದುರ್ಗೊಳ್ಳುವಿಕೆಯನ್ನು ತಪ್ಪಿಸಿದರು. **ಇವರಿಬ್ಬರು ಕಂಬಳಿಯನ್ನು ತೆಗೆದುಕೊಂಡು ತಮ್ಮಿಬ್ಬರ ಬೆನ್ನಿನ ಮೇಲೆ ಹಾಕಿಕೊಂಡು ಹಿಂಧಿಂದಕ್ಕೆ ನಡೆದು ತಂದೆಗೆ ಹೊದಿಸಿ ಅವನ ಮಾನವನ್ನು ಕಾಪಾಡಿದರು.** ಮತ್ತು **ಅವರು ಹಿಮ್ಮುಖರಾಗಿದ್ದದರಿಂದ ತಂದೆಯು ಬೆತ್ತಲೆಯಾಗಿದ್ದದ್ದನ್ನು ನೋಡಲಿಲ್ಲ.** ಹಾಮನ ಪಾಪವು ಯಾವದನ್ನು ಒಳಗೊಂಡಿತ್ತು ಎಂಬುದರ ಕುರಿತು ಹಲವಾರು ಕರಾಳ ಕಲ್ಪನೆಗಳ ಹೊರತಾಗಿಯೂ, ಆತನು ತನ್ನ ತಂದೆಯು ಬೆತ್ತಲೆಯಾಗಿರುವದನ್ನು ಪಾನಮತ್ತನಾಗಿರುವದನ್ನು ಕಂಡನು ಎಂದಷ್ಟೇ ಚರಿತ್ರೆಯು ಹೇಳುತ್ತದೆ; ಆತನ ಸಹೋದರರು ಆತನನ್ನು ಆ ಸ್ಥಿತಿಯಲ್ಲಿ "ನೋಡಲಿಲ್ಲ." ಅವರು ಸಭ್ಯವಾಗಿ ನಡೆದುಕೊಂಡರು ಮತ್ತು ಅವರು ತಮಗೆ ಅರಿವಿಲ್ಲದೆ ಸಹ ತಂದೆಯನ್ನು ನೋಡಬಾರದೆಂಬುದಕ್ಕಾಗಿ ಹಿಂದಕ್ಕೆ ಹೆಜ್ಜೆಯಿಡುತ್ತಾ ಸಾಗಿ ಅವನ ಮೇಲೆ ಕಂಬಳಿಯನ್ನು ಹೊದಿಸುವ ಮೂಲಕ ಮುಂಜಾಗ್ರತೆಯನ್ನು ವಹಿಸಿದರು. ನೋಹನನ್ನು ನೋಡದೆಯೇ ಅವನ ಮೇಲೆ ಕಂಬಳಿಯನ್ನು ಹಾಕುವ ಮೂಲಕ, ಶೆಮ್ ಮತ್ತು ಯೆಫೆಥ್ ತಮ್ಮ ತಂದೆಯನ್ನು ಸನ್ಮಾನಿಸಿದರು ಹಾಗೂ ಬೇರೆಯವರು ಅವನನ್ನು ಇಂಥ ಬೆತ್ತಲೆಯ ಮತ್ತು ಅಮಲಿನ ಸ್ಥಿತಿಯಲ್ಲಿ ನೋಡಬಹುದಾದ ಸಾಧ್ಯತೆಯನ್ನು ನಿವಾರಿಸಿದ್ದರು.

## ಹಾಮನ ಮಗನಾದ ಕಾನಾನನ ಮೇಲೆ ನೋಹನು ನೀಡಿದ ಶಾಪ (9:24, 25)

**24 ನೋಹನು ಅಮಲಿಳಿದೆದ್ದು ಕಿರೀಮಗನು ಮಾಡಿದ್ದನ್ನು ತಿಳಿದು - 25 ಕಾನಾನನು ಶಾಪಗ್ರಸ್ತನಾಗಲಿ. ಅವನು ತನ್ನ ಅಣ್ಣತಮ್ಮಂದಿರಿಗೆ ದಾಸಾನುದಾಸನಾಗಲಿ ಅಂದನು.**

**ವಚನ 24.** ಒಂದಿಷ್ಟು ಕಾಲವಾದ ಮೇಲೆ, **ನೋಹನು** ದ್ರಾಕ್ಷಾರಸದ ಎಚ್ಚರಗೊಂಡು ಹಾಮನು ತನಗೆ **ಮಾಡಿದ್ದನ್ನು** [ನಳ್ಳ, '*ಅಶಾಹ]* **ತಿಳಿದನು**. "ಮಾಡಿದ್ದನ್ನು" *(ಅಶಾಹ)* ಎಂಬ ಕ್ರಿಯಾಪದವು ಕೆಲವು ಸಾರಿ ಹಾಮನು ತನ್ನ ತಂದೆಯ ವಿರುದ್ಧವಾಗಿ ಯಾವದೋ ರೀತಿಯ ದೈಹಿಕ ಹಲ್ಲೆಯನ್ನು - ಲೈಂಗಿಕವಾದ ಅಥವಾ ಬೇರೆ ಕಾರ್ಯವೊಂದನ್ನು - ನಡಿಸಿರಬಹುದು ಎಂಬ ಅರ್ಥ ಬರುವಂತೆ ಅನುವಾದಿಸಲ್ಪಟ್ಟಿರುತ್ತದೆ. ಈ ಸನ್ನಿವೇಶದಲ್ಲಿ, ಈ ಪದವು ಅವಶ್ಯಕವಾಗಿ ಒಂದು ಮರೆಯಿಲ್ಲದ ಕೃತ್ಯವನ್ನು ಸೂಚಿಸುವದಿಲ್ಲ. ಅದು ಕೇವಲ ತನ್ನ

ತಂದೆಯನ್ನು ಆತನು ಗೌರವಿಸಲಿಲ್ಲ ಮತ್ತು ತನ್ನ ಸಹೋದರರಿಗೆ (ಬಹುಶಃ ಅಪಹಾಸ್ಯ ಮಾಡುವ ರೀತಿಯಲ್ಲಿ) ತಂದೆಯು ಗುಡಾರದೊಳಗೆ ಪಾನಮತ್ತನಾಗಿ ಮತ್ತು ಬೆತ್ತಲೆಯಾಗಿ ಇರುವದರ ಕುರಿತು ಹೇಳಿದ್ದನು ಎಂಬ ವಾಸ್ತವಾಂಶವನ್ನಷ್ಟೆ ತಿಳಿಸುತ್ತದೆ. ಹಾಮನು ಇಲ್ಲಿ **ಕಿರೀಮಗ** ಎಂದು ಕರೆಯಲ್ಪಟ್ಟಿದ್ದಾನೆ (10:21ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

**ವಚನ 25.** ಈ ವಚನವು ನೋಹನು ಬೈಬಲಿನಲ್ಲಿ ನುಡಿದ ಮೊದಲ ಮಾತುಗಳನ್ನು ದಾಖಲಿಸಿರುತ್ತದೆ: **ಕಾನಾನನು ಶಾಪಗ್ರಸ್ತನಾಗಲಿ. ಅವನು ತನ್ನ ಅಣ್ಣತಮ್ಮಂದಿರಿಗೆ ದಾಸಾನುದಾಸನಾಗಲಿ.** ಸ್ಪಷ್ಟವಾಗಿರುವ ಒಗಟು ಏನೆಂದರೆ ಶಾಪವು, ಮೂಲಪಿತೃವಿನ ಮಗನಾದ ಹಾಮನ ಬದಲಾಗಿ ಆತನ ಮೊಮ್ಮಗನ ಮೇಲೆ ಬಿದ್ದಿತ್ತು ಎಂಬುದೆ, ನಿಜವಾದ ಅಪರಾಧಿಯು ಹಾಮನೇ ಆಗಿದ್ದನು. ಕಾನಾನನನ್ನು ಗುರಿಯಾಗಿಸಲಾಗಿತ್ತಾದ್ದರಿಂದ, ಆತನು ಸಹ ಆ ತುಚ್ಛ ಕೆಲಸದಲ್ಲಿ ಭಾಗಿಯಾಗಿರಬಹುದು ಎಂಬುದಾಗಿ ಕೆಲವರು ವಾದಿಸುತ್ತಾರೆ; ಆದರೆ ಕಥನದಲ್ಲಿ ಅಂತಹ ಯಾವ ಸಂಗತಿಯೂ ಸ್ಪಷ್ಟವಾಗಿ ತಿಳಿಸಲಾಗಿಲ್ಲ. ವಾಸ್ತವಿಕದಲ್ಲಿ, ಇದು ದೇವರು ಹೇಗೆ “ತಂದೆಗಳ ದೋಷಫಲವನ್ನು ಮಕ್ಕಳ ಮೇಲೆ ಮೂರು ನಾಲ್ಕು ತಲೆಗಳವರೆಗೆ ಬರಮಾಡುವವನಾಗಿಯೂ” ಇದ್ದಾನೆಂಬುದಕ್ಕೆ ಒಂದು ಉದಾಹರಣೆಯಾಗಿರಬಹುದು (ವಿಮೋಚನಕಾಂಡ 20:5), ಆದಾಗ್ಯೂ ಈ ಸತ್ಯವು ಮೋಶೆಯ ಕಾಲದ ತನಕ ಅಧಿಕೃತವಾಗಿ ಪ್ರಕಟಿಸಲ್ಪಟ್ಟಿರಲಿಲ್ಲ.

ದೇವರು ತಂದೆಯ ದೋಷಫಲಕ್ಕಾಗಿ ದಂಡಿಸುತ್ತಿದ್ದನು ಎಂಬ ವಿಚಾರವು ಅನೇಕ ಸಾರಿ ತಿರಸ್ಕರಿಸಲ್ಪಡುತ್ತದೆ ಯಾಕೆಂದರೆ ಹಿಂದಿನ ಪೀಳಿಗೆಯು ಮಾಡಿದ ತಪ್ಪಿಗಾಗಿ ಮತ್ತೊಂದು ಪೀಳಿಗೆಯನ್ನು ದಂಡಿಸುವಿಕೆಯು ನಿರಂಕುಶಕಾರಿ ಹಾಗೂ ಅನ್ಯಾಯಕರವಾಗಿ ಕಾಣಿಸುತ್ತದೆ. ವಾಸ್ತವಿಕದಲ್ಲಿ, ಅದು ಒಂದು ರೀತಿಯಲ್ಲಿ ತಂದೆಯ ಗುಣಸ್ವಭಾವವು ಅವನ ಸಂತಾನದವರ ಕೃತ್ಯಗಳಲ್ಲಿ ಕಂಡುಬರುವದೆಂದು ಎದುರುನೋಡಲಾಗುತ್ತದೆ ಎಂದು ಹೇಳುವಂತಿರುತ್ತದೆ. ಒಳ್ಳೇದಿರಲ್ಲಿರಬಹುದು ಅಥವಾ ಕೆಟ್ಟದ್ದಿರಿರಬಹುದು, ಮಕ್ಕಳು ಮತ್ತು ಮೊಮ್ಮಕ್ಕಳು ಅನೇಕ ಸಾರಿ - ಯಾವಾಗಲೂ ಅಲ್ಲದಿದ್ದಾಗ್ಯೂ - ತಮ್ಮ ಮನೋಭಾವಗಳು, ನೈತಿಕ ವಿಚಾರಗಳಲ್ಲಿ, ಮತ್ತು ಜೀವನ ಶೈಲಿಗಳಲ್ಲಿ ತಮ್ಮ ಹೆತ್ತವರು ಮತ್ತು ಅಜ್ಜಅಜ್ಜಿಯರ ಹೆಜ್ಜೆಜಾಡುಗಳಲ್ಲಿ ನಡೆಯುತ್ತಾರೆ. ಒಂದು ಅರ್ಥದಲ್ಲಿ, ಮಕ್ಕಳು ತಮ್ಮ ಹೆತ್ತವರ ಪಾಪಗಳಿಂದಾಗಿ ಬಾಧೆಯನ್ನು ಅನುಭವಿಸಬಹುದಾಗಿದೆ; ಆದರೆ ಸಾಮಾನ್ಯವಾಗಿ ಅವರ ಸ್ವತಃ ಮಾಡಿಕೊಂಡ ಕೆಟ್ಟ ನಿರ್ಧಾರಗಳಿಂದಾಗಿ ಮತ್ತು ಹವ್ಯಾಸಗಳಿಂದಾಗಿಯೇ ಅವರು ತಮ್ಮ ಮೇಲೆ ಅವರ ಮೂಲಪಿತೃಗಳು ಅನುಭವಿಸಿದ ಅದೇ ಶಾಪಗಳನ್ನು, ನೋವು, ಮತ್ತು ಶ್ರಮೆಗಳನ್ನು ತಂದುಕೊಳ್ಳುತ್ತಾರೆ.

ಆದಿಕಾಂಡದಲ್ಲಿ ಈ ಮುಂಚೆ ನೋಡಿದ ಪ್ರಕಾರವೇ, ಕಾಯಿನನ ಜೀವಿತದಲ್ಲಿ ಪ್ರಬಲವಾಗಿದ್ದ ಕೆಟ್ಟ ಮನೋಭಾವಗಳನ್ನು, ಹಗೆತನ, ಹಿಂಸೆ, ಮತ್ತು ಶ್ರಮೆಯ ಪುನರಾವರ್ತನೆಯು ಆತನ ವಂಶದವರಲ್ಲಿ, ವಿಶೇಷವಾಗಿ ಲೆಮೆಕನ್ಲಿ ವ್ಯಾಪಕವಾಗಿ ಮುಂದುವರೆದದ್ದು ಕಂಡು ಬರುತ್ತದೆ (4:1-24). ನೆಫೀಲಿಯರ ಕೆಟ್ಟತನವು (6:4) ದೇವರು ಹಳೆಯ ಲೋಕವನ್ನು ಶಪಿಸಿ ಒಂದು ಪ್ರಳಯವನ್ನ ಬರಮಾಡಿ ಅವರನ್ನೆಲ್ಲಾ ಹೊಡೆದುಕೊಂಡು ಹೋಗುವ ತನಕವೂ ಹಲವಾರು ತಲೆಮಾರುಗಳ ವರೆಗೆ ಮುಂದುವರೆದಿರಬಹುದಾಗಿದೆ (ನೋಡಿರಿ 6:17; 7:23; 8:21). ತಂದೆಗಳ ದೋಷಫಲವು, ಮತ್ತು ಸಂಭಾವ್ಯವಾಗಿ ಅಜ್ಜಂದಿರ ದೋಷಫಲವು ಸಹ ಅನಂತರದ ಕಾಲದಲ್ಲಿ ಅವರ ಮೇಲೆ ಬಂದಿರಬಹುದಾಗಿದೆ. ಅವರ ನಡವಳಿಕೆ ಮತ್ತು ದಂಡನೆಗಳು ಸ್ವೇಚ್ಛಾಚಾರದಿಂದ ಪೂರ್ವನಿರ್ಣಯಗೊಳಿಸಲ್ಪಟ್ಟವುಗಳಲ್ಲ,

ಆದರೆ ಅವರ ಪೂರ್ವಜರಂತೆಯೇ ಇವರ ಜೀವಿತಗಳು ಕೂಡಿದವುಗಳಾಗಿದ್ದ ನೋಹನ ಬೋಧನೆಯನ್ನು ನಿರಾಕರಿಸಿ ಆ ಮೂಲಕ ಪ್ರಳಯದಲ್ಲಿ ನಾಶವಾಗುವಷ್ಟರ ಮಟ್ಟಿಗೆ ಕೆಟ್ಟತನವು ಅವರ ಒಂದು ಮಾದರಿಯಾಗಿ ಮಾರ್ಪಟ್ಟಿತ್ತು.

ನೋಹನ ಮೊಮ್ಮಗನಾದ ಕಾನಾನನ ಪ್ರಕರಣದಲ್ಲಿ ನೋಡುವದಾದರೆ, ಶಾಪವು ಮುಖ್ಯವಾಗಿ ಆತನು ವೈಯಕ್ತಿಕವಾಗಿ ಅನುಭವಿಸಲಿದ್ದ ಕೆಟ್ಟ ಸಂಗತಿಗಳನ್ನು ಸೂಚಿಸಲಿಲ್ಲ. ಹೆಚ್ಚು ವಿಶಾಲವಾಗಿ ನೋಡುವದಾದರೆ, ಅದು ಅನೇಕ ತಲೆಮಾರುಗಳ ಬಳಿಕ, ಇಸ್ರಾಯೇಲ್ಯರು ವಾಗ್ದಾನ ದೇಶದ ಮೇಲೆ ಆಕ್ರಮಣ ಮಾಡಿ ಅಂತಿಮವಾಗಿ ಅದನ್ನು ಸ್ವಾಧೀನಪಡಿಸಿಕೊಳ್ಳುವ ಕಾಲದಲ್ಲಿ ಆತನ ಸಂತತಿಯವರ - ಕಾನಾನ್ಯರು - ಮೇಲೆ ಬರಲಿದ್ದ ಸಂಗತಿಯನ್ನು ಸೂಚಿಸುತ್ತದೆ. ಈ ಅಭಿಪ್ರಾಯವು ನಿಖರವಾಗಿರುವಂತೆ ಕಾಣಿಸುತ್ತದೆ ಯಾಕೆಂದರೆ ನೋಹನು, ಕಾನಾನನ ಮೇಲೆ ಶಾಪವನ್ನು ಹಾಕುವ ವೇಳೆ ಹೀಗೆ ಹೇಳಿದನು, "ಅವನು ತನ್ನ ಅಣ್ಣತಮ್ಮಂದಿರಿಗೆ ದಾಸಾನುದಾಸನಾಗಲಿ." ನಮಗೆ ತಿಳಿದಿರುವ ಪ್ರಕಾರವಾಗಿ, ಹಾಮ ಅಥವಾ ಕಾನಾನ ಆಗಲಿ ವೈಯಕ್ತಿಕವಾಗಿ ಆತನ ಸಹೋದರರಿಗೆ ಸೇವೆಯನ್ನು ಮಾಡಲಿಲ್ಲ; ಆದರೆ ಹಾಮನ ಪಾಪವು "ಆತನ ಮಗನಾದ ಕಾನಾನನ ಸಂತತಿಯವರು (ಕಾನಾನ್ಯರು) ಶೆಮ್ ಮತ್ತು ಯೆಪೆತರ ಸಂತತಿಯವರಿಗೆ ಅಧೀನರಾಗುವ ಮತ್ತು ಸೇವೆ ಮಾಡುವ ಪಾತ್ರಕ್ಕೊಳಗಾಗುವರು"[19] ಎಂಬುದಕ್ಕೆ ಮೀಸಲಿಡಲ್ಪಟ್ಟಿತ್ತು. ಹಾಮನ ಸಂತಾನದವರು ತಮ್ಮ ಮೇಲೆ ಹೇರಲ್ಪಟ್ಟಿದ್ದ ನಿರಂಕುಶತನದ ವಿಧಿಗೆ ಒಳಗಾದ ನಿರಪರಾಧಿ ಬಲಿಪಶುಗಳಾಗಿರಲಿಲ್ಲ; ಅವರು ಹಾಮನಂತೆ ನಡೆದುಕೊಂಡರು ಮತ್ತು ತಮ್ಮ ವಿಗ್ರಹಾರಾಧಕ ಜೀವನ ಶೈಲಿಯ ಭಾಗವಾಗಿದ್ದ ಲೈಂಗಿಕ ಅಪರಾಧಗಳಲ್ಲಿ ಹಾಗೂ ಘೋರ ಕೃತ್ಯಗಳಲ್ಲಿ ಅವರ ಪೂರ್ವಜರನ್ನೂ ಮೀರಿಸಿ ಬಹು ದೂರಕ್ಕೆ ಸಾಗಿದ್ದರಿಂದ ಅವರ ಮೇಲೆ ಶಾಪವು ಬಂದಿತ್ತು. ಅವರು ಇಸ್ರಾಯೇಲ್ಯರ ಮೂಲಕವಾಗಿ ಕಾನಾನ್ ದೇಶದ ಸ್ವಾಧೀನವನ್ನು ಕಳೆದುಕೊಂಡರು ಯಾಕೆಂದರೆ ಅವರ ಪಾಪವು ಪೂರ್ಣ ಅಳತೆಯನ್ನು ತಲುಪಿದ್ದರಿಂದ ದೇವರು ಇನ್ನು ಮೇಲೆ ಸಹಿಸಿಕೊಳ್ಳದವನಾದನು (ನೋಡಿರಿ 15:16; ಯಾಜಕಕಾಂಡ 18:3-30; ಧರ್ಮೋಪದೇಶಕಾಂಡ 9:4-6).

## ಶೆಮ್ ಮತ್ತು ಯೆಪೆತ್ ಮೇಲೆ ನೋಹನು ನೀಡಿದ ಆಶೀರ್ವಾದ (9:26, 27)

**26ಅವನು ಇನ್ನೂ ನುಡಿದದ್ದೇನಂದರೆ - ಶೇಮನ ದೇವರಾದ ಯೆಹೋವನಿಗೆ ಸ್ತೋತ್ರವಾಗಲಿ; ಕಾನಾನನು ಅವರಿಗೆ ದಾಸನಾಗಲಿ. 27ಯೆಫೆತನನ್ನು ದೇವರು ವಿಸ್ತರಿಸಲಿ. ಅವನು ಶೇಮನ ಗುಡಾರಗಳಲ್ಲಿ ವಾಸವಾಗಿರಲಿ. ಕಾನಾನನು ಅವರಿಗೆ ದಾಸನಾಗಿರಲಿ ಎಂಬದು.**

**ವಚನ 26.** ನೋಹನು ತಪ್ಪು ಮಾಡಿದವನಿಗೆ ಶಾಪವನ್ನು ಕೊಟ್ಟು ಅಷ್ಟಕ್ಕೆ ನಿಲ್ಲಿಸಲಿಲ್ಲ. ಆತನು ಇನ್ನೂ ಹೇಳಿದ್ದೇನೆಂದರೆ, **ಶೇಮನ ದೇವರಾದ ಯೆಹೋವನಿಗೆ ಸ್ತೋತ್ರವಾಗಲಿ**. "ಶೆಮ್"ನು ಸ್ತೋತ್ರದ ಗುರಿಯಾಗಿರಲಿಲ್ಲ; ಆ ಸ್ತೋತ್ರವನ್ನು "ಯೆಹೋವನಿಗೆ" ಹೇಳಲಾಗಿತ್ತು. ಸಾಮಾನ್ಯವಾಗಿ, ಯೆಹೋವನು ಮಾಡಿರುವ ಕಾರ್ಯಕ್ಕಾಗಿ ಸ್ತುತಿಯ ನಿರ್ದಿಷ್ಟವಾದ ಮಾತನ್ನು ಉತ್ತೇಜಿಸುವದಕ್ಕೆ ಆತನನ್ನು ಉದ್ದೇಶಿಸಿ ಸ್ತೋತ್ರವು ಹೇಳಲ್ಪಡುತ್ತದೆ. ಒಂದು ನಿರ್ದಿಷ್ಟವಾದ ವಿವರಣೆಯಿಲ್ಲದಿರುವಿಕೆಯು ನೋಹನು "ಶೆಮನ ದೇವರಾಗಿ" ಇರುವದರ ನಿಮಿತ್ತವಾಗಿ "ಯೆಹೋವನಿಗೆ ಸ್ತೋತ್ರವಾಗಲಿ" ಎಂದು ಹೇಳುತ್ತಿದ್ದಾನೆಂಬುದಾಗಿ ವಾಚಕನು

ನಂಬುವಂತೆ ನಡಿಸುತ್ತದೆ. ಹಾಮನಂತಲ್ಲದೆ, ಶೇಮನು ಯೆಹೋವನಿಗೆ ಸಮರ್ಪಿತನಾದವನು ಎಂಬುದನ್ನು ನೋಹನು ಗ್ರಹಿಸಿಕೊಂಡಿರಬಹುದಾಗಿದೆ. ದೇವರ ಆದುಕೊಂಡ ವಂಶವು, ಈ ಮುಂಚೆ ಸೇತನ ಮೂಲಕ ಮುಂದುವರೆದಿದ್ದ ಹಾಗೆಯೇ (4:26) ಈತನ ಮೂಲಕ ಮುಂದುವರೆಯುವದು. ಖಂಡಿತವಾಗಿಯೂ, ಇದು 11:10-26ರಲ್ಲಿನ ವಂಶಾವಳಿಯೊಳಗೆ ಮಿತವಾಗಿ ತಿಳಿಸಲ್ಪಟ್ಟಿದೆ, ಈ ವಂಶಾವಳಿಯು ಅಬ್ರಹಾಮನು ಕರೆಯಲ್ಪಡುವದರೊಂದಿಗೆ ಅಂತ್ಯಗೊಳ್ಳುತ್ತದೆ (12:1-3).

ಶೇಮನ ದೇವರಾಗಿರುವ ಯೆಹೋವನಿಗೆ ಸ್ತೋತ್ರ ಮಾಡಿದ ಬಳಿಕ, ನೋಹನು ಹೀಗೆ ಹೇಳಿದನು, **ಕಾನಾನನು ಅವರಿಗೆ ದಾಸನಾಗಲಿ.** ಅನಂತರ ಕಾಲದಲ್ಲಿ ಇಸ್ರಾಯೇಲ್ಯರು ಕಾನಾನ್ಯರೊಂದಿಗೆ ಯುದ್ಧಗಳನ್ನು ಮಾಡಿದ್ದು ಮತ್ತು ಅಂತಿಮವಾಗಿ ದೇವರಾದುಕೊಂಡ ಜನಾಂಗವು ಜಯ ಗಳಿಸುವಿಕೆಯನ್ನು ಹೊರತು ಪಡಿಸಿದರೆ ಮೂಲಪಿತೃವಿನ ಈ ಹೇಳಿಕೆಯನ್ನು ಅರ್ಥಮಾಡಿಕೊಳ್ಳುವುದು ಕಷ್ಟಕರವಾಗಿರುತ್ತದೆ. ಕಾನಾನ್ಯರು ಭವಿಷ್ಯದಲ್ಲಿ ಅನುಭವಿಸಲಿದ್ದ ಸೇವಕತ್ವವು ನಿರಂಕುಶತನದಿಂದ ಹಾಮನ ಪಾಪದ ಮೇಲೆ ಆಧಾರವಾಗಿರುವದಿಲ್ಲ, ಆದರೆ ಅವರು ಕೆಟ್ಟತನವನ್ನು ಮಿತಿಮೀರಿ ಮಾಡಿದ್ದರ ಮೇಲೆಯೇ ಆಧಾರವಾಗಿರುತ್ತದೆ. ಪ್ರಳಯದ ನಂತರದ ಆರಂಭಗೊಂಡ ಪಾಪದ ಒಂದು ಚಿಕ್ಕ ಹರಿವು ಮುಂದೆ ಬೆಳೆದು ಅಂತಿಮವಾಗಿ ಹಾಮನ ಸಂತತಿಯವರಾದ ಕಾನಾನ್ಯರಲ್ಲಿ ಕೆಟ್ಟತನದ ಒಂದು ರಭಸವಾಗಿ ಉಕ್ಕಿ ಹರಿಯುವ ದೊಡ್ಡ ಪ್ರವಾಹವಾಗಿ ಮಾರ್ಪಟ್ಟಿತ್ತು. ಹಾಗಿದ್ದರೂ, ಈ ಪ್ರವಾದನೆಯು ನೂರಾರು ವರ್ಷಗಳ ನಂತರವಷ್ಟೆ, ಅವರ ಅಪರಾಧವು "ಪೂರ್ಣಸ್ಥಿತಿಗೆ" ಬಂದಾಗ ನೆರವೇರುವದಾಗಿತ್ತು (15:16).[20] ದೇವರು ನ್ಯಾಯತೀರಿಸುವದರಲ್ಲಿ ತಾಳ್ಮೆಯಿಂದಿದ್ದನು ಮತ್ತು ಕಾನಾನಿನ ನಿವಾಸಿಗಳಿಗೆ ಪಶ್ಚಾತ್ತಾಪ ಪಡುವದಕ್ಕಾಗಿ ದೀರ್ಘವಾದ ಕಾಲಾವಕಾಶವನ್ನು ನೀಡಿದ್ದನು (ನೋಡಿರಿ 2 ಪೇತ್ರ 3:9).

**ವಚನ 27.** ಶಾಪ ಮತ್ತು ಆಶೀರ್ವಾದದ ನಂತರದಲ್ಲಿ, ನೋಹನು ಒಂದು ಬಿನ್ನಹ ಮಾಡಿದನು: **ಯೆಫೆತನನ್ನು ದೇವರು ವಿಸ್ತರಿಸಲಿ.** ಈ ವಿನಂತಿಯು 9:26ರಲ್ಲಿನ ವಿನಂತಿಯಂತೆಯೇ ಇದ್ದು, ಇದನ್ನು ಸಹ ಮುಂದೆ ಸಂಭವಿಸಲಿರುವಂಥ ಮಹಾ ಘಟನೆಗಳ ಕುರಿತಾದ ಪ್ರವಾದನೆ ಎಂಬುದಾಗಿ ಪರಿಗಣಿಸತಕ್ಕದ್ದೇ, ಹೊರತು ಕೆಲವರು ವಾದಿಸುವ ಪ್ರಕಾರ ಇದು ಕಾನಾನನ್ನು ಗೆದ್ದುಕೊಂಡ ಮೇಲೆ ಅನಂತರದ ಲೇಖಕನೊಬ್ಬನು ಬರೆದ ಸಿಂಹಾವಲೋಕನ ಎಂಬುದಾಗಿ ಪರಿಗಣಿಸಕೂಡದು.

27 ವಚನದ ಮೊದಲ ಭಾಗದಲ್ಲಿ ಮತ್ತೊಂದು ಇಬ್ರಿಯ ಶಬ್ದಾಡಂಬರವು ಕಂಡು ಬರುತ್ತದೆ, ಅಲ್ಲಿ ಮೂಲಪಿತೃವು "ಯೆಪೆತ"ನನ್ನು (יֶפֶת, *ಯೆಪೆಥ)* "ವಿಸ್ತರಿಸಲಿ" (יַפְתְּ, *ಯಾಫ್ಥೆ)* ಎಂದು ಬೇಡಿಕೊಳ್ಳುತ್ತಾನೆ. ಯೆಪೆತನ ಕುಟುಂಬವು ಹೇಗೆ ವಿಸ್ತರಿಸಲ್ಪಟ್ಟಿತು? ಈ ನೋಹನ ಪುತ್ರನಿಂದ ಹುಟ್ಟಿಕೊಂಡ ಜನಾಂಗವು ಯಾವುದು? ಆದಿಕಾಂಡ 10:2-5ರಲ್ಲಿ, ಯೆಪೆತನು ಪ್ರಾಚೀನ ಅನಾಟೊಲಿಯ (ಆಧುನಿಕ ತುರ್ಕಿ, ಅದರಲ್ಲಿ ಪೂರ್ವದ ಸೋವಿಯತ್ ಯುನಿಯನ್ನಗೆ ಸೇರಿದ ದಕ್ಷಿಣದ ಹುಲ್ಲುಗಾವಲುಗಳು ಸೇರಿರುತ್ತವೆ) ಮತ್ತು ಹಲವಾರು ಇಂಡೋ-ಯುರೋಪಿಯನ್ನ ಜನಾಂಗಗಳು ಸೇರಿದಂತೆ ಗ್ರೀಸ್ ಮತ್ತು ಆಯಗೇನ ಪ್ರಾಂತ್ಯದಲ್ಲಿರುವ ಉತ್ತರದ ಇಸ್ರಾಯೇಲ್ ಜನರ ಜನಕನಾಗಿ ತಿಳಿಸಲ್ಪಟ್ಟಿರುತ್ತಾನೆ.[21]

ಮುಂದಿನ ಪರಿಚ್ಛೇದ, **ಅವನು ಶೇಮನ ಗುಡಾರಗಳಲ್ಲಿ ವಾಸವಾಗಿರಲಿ** ಎಂಬುದು ಸಾಕಷ್ಟು ಸರಳವಾಗಿ ಕಾಣಿಸುತ್ತದೆ - ಆದರೆ "ಅವನು" ಎಂಬುದು ಯಾರನ್ನು ಸೂಚಿಸುತ್ತದೆ? ಈ ವಾಕ್ಯವನ್ನು ಅರಾಮಿಕ್ ಭಾಷೆಯಲ್ಲಿ ಭಾವಾನುವಾದ ಮಾಡುವ ವೇಳೆ, ತಾರ್ಗುಮ್ ಆಫ್

ಒಂಕೆಲೊಸ ಯೆಹೋವನನ್ನು ಪ್ರಸ್ತಾಪಿಸುತ್ತದೆ ಮತ್ತು ಹೀಗೆ ಹೇಳುತ್ತದೆ, "ಮತ್ತು ಆತನು ತನ್ನ ಶೆಕಿನಾ ಮಹಿಮೆಯನ್ನು ಶೇಮನ ಗುಡಾರಗಳಲ್ಲಿ ನೆಲೆಸುವಂತೆ ಮಾಡುವನು."[22] ಈ ಬಹಳ ಕಾಲ ನಂತರದ ಯೆಹೂದಿ ಅರ್ಥನಿರೂಪಣೆಯು ಕ್ರಿ.ಪೂ. ಪ್ರಥಮ ಶತಮಾನ ಅಥವಾ ಎರಡನೆಯ ಶತಮಾನಕ್ಕೆ ಸೇರಿದ್ದಾಗಿರಬಹುದಾಗಿದ್ದು,[23] ಇದರಲ್ಲಿ ಪ್ರಶಂಸಿಸತಕ್ಕದ್ದೇನೂ ಇರುವದಿಲ್ಲ. ಅಷ್ಟುಮಾತ್ರವಲ್ಲದೆ, ಇದು ವ್ಯಾಕರಣದ ಮೂಲಭೂತ ನಿಯಮವನ್ನು ಉಲ್ಲಂಘಿಸುವದಾಗಿದೆ, ಅದು ಒಂದು ಸರ್ವನಾಮವು ಸ್ವಾಭಾವಿಕವಾಗಿ ಅದರ ಅತಿ ಸಮೀಪದ ಪೂರ್ವಗಾಮಿ ಪದಪುಂಜವನ್ನು ಸೂಚಿಸುತ್ತದೆ ಎಂದು ಹೇಳುವದಾಗಿದೆ. ಕೆಲವೊಂದು ಈ ನಿಯಮಕ್ಕೆ ಹೊರತಾಗಿರುತ್ತವಾದರೂ, ಇಲ್ಲಿ ಒಂದು ವಿನಾಯಿತಿಯನ್ನು ಮಾಡುವದಕ್ಕೆ ಯಾವದೇ ತಾರ್ಕಿಕವಾದ ಕಾರಣವನ್ನು ಕೊಡುವದಕ್ಕೆ ಸಾಧ್ಯವಿಲ್ಲ. ದೇವರು ದೇವದರ್ಶನ ಗುಡಾರದಲ್ಲಿ ತನ್ನ ಜನರ ಮಧ್ಯದೊಳಗೆ ವಾಸಿಸುತ್ತಿದ್ದನು (ವಿಮೋಚನಕಾಂಡ 25:8; 29:42-46), ಆದರೆ ಇಲ್ಲಿ ಆ ಭಾವನೆಯು ಚರ್ಚೆಯಲ್ಲಿರುವದಿಲ್ಲ. ಈ ಹೇಳಿಕೆಯು "ಯೆಪೆತನನ್ನು ವಿಸ್ತರಿಸಲಿ" ಮತ್ತು "ಅವನು" (ಯೆಪೆತ) "ಶೇಮನ ಗುಡಾರಗಳಲ್ಲಿ ವಾಸವಾಗಿರುವಂತೆ" ಅನುಮತಿಸುವ ಎಂಬುದಾಗಿ "ದೇವರನ್ನು" ಬಿನ್ನಹಿಸಿಕೊಳ್ಳುವದಷ್ಟೆ ಆಗಿದೆ, ಹೊರತು ಹೆಚ್ಚಿನದೇನೂ ಅಲ್ಲ.

ಆ ವಿನಂತಿಯ ಸ್ವಾಭಾವಿಕ ಅರ್ಥವು ಏನೆಂದರೆ ಯೆಪೆತನ ಗಡಿಗಳು ಮತ್ತು ಪ್ರಭಾವವು ವಿಸ್ತರವಾಗಲಿ ಹಾಗೂ ಆತನು ಶೇಮನ ಗುಡಾರಗಳಲ್ಲಿ ಅಥವಾ ನಡುವೆ ವಾಸಿಸುವಂತಾಗಲಿ ಎಂಬುದಾಗಿ ನೋಹನು ಬೇಡಿಕೊಳ್ಳುತ್ತಿದ್ದಾನೆ. ನ್ಯಾಯಸ್ಥಾಪಕರು ಮತ್ತು ಸೌಲನ ಆಳ್ವಿಕೆಯ ವೇಳೆಯಲ್ಲಿ ಕ್ರೇತ ಮತ್ತು ಅಯಗೇನ ದ್ವೀಪಗಳಿಂದ ಬಂದ ಫಿಲಿಷ್ಟಿಯರು ಇಸ್ರಾಯೇಲ್ಯರ ಮೇಲೆ ಆಕ್ರಮಣ ಮಾಡಿ ಅವರಲ್ಲಿ ಅನೇಕರನ್ನು ಅಧೀನಪಡಿಸಿಕೊಂಡ ಸಂದರ್ಭದಲ್ಲಿ ಇದು ನೆರವೇರಿತ್ತು ಎಂಬುದಾಗಿ ಕೆಲವರು ಭಾವಿಸಿಕೊಳ್ಳುತ್ತಾರೆ. ಇನ್ನು ಕೆಲವರು ಇದು Antiochus Epiphanes IVನ ಆಳ್ವಿಕೆಯನ್ನು ಸೂಚಿಸುತ್ತದೆಂದು ಯೋಚಿಸುತ್ತಾರೆ, ಈತನು ಕ್ರಿ.ಪೂ. ಎರಡನೆಯ ಶತಮಾನದಲ್ಲಿ ಫಿಲಿಷ್ಟಿಯದ ಮೇಳೆ ಆಳ್ವಿಕೆ ಮಾಡುತ್ತಿದ್ದ ಸೆಲ್ಯೂಕ್ಯರ ಅರಸನಾಗಿದ್ದನು. ಅಂತಹ ಯಾವದೇ ನೆರವೇರುವಿಕೆಯಿ ಒಂದು *ಶಾಪ* ಆಗುವುದು, ಯಾಕೆಂದರೆ ಯೆಪೆತನ ಸಂತತಿಯವರು ಶೇಮನ ಗುಡಾರಗಳಲ್ಲಿ ವಾಸಿಸುವಂತೆ ಅಥವಾ ಆಕ್ರಮಿಸಿಕೊಳ್ಳುವಂತೆ ಒತ್ತಾಯಿಸಲ್ಪಡುವರಷ್ಟೆ.

ಅದಕ್ಕೆ ಬಹಳ ತದ್ವಿರುದ್ಧವಾಗಿ, ಈ ಹೇಳಿಕೆಯು "ಶೇಮನ ಗುಡಾರಗಳಲ್ಲಿ" "ಯೆಪೆತ"ನ ಸಂತತಿಯವರು (ಸಮಾಧಾನದಿಂದ) "ವಾಸಿಸುವರು" ಎಂದು ನುಡಿದ ನೋಹನ *ಆಶೀರ್ವಾದ*ದ ಭಾಗವಾಗಿರುತ್ತದೆ. ಹೊಸ ಒಡಂಬಡಿಕೆಯ ಯುಗದ ತನಕವೂ, ಈ ಪ್ರವಾದನೆಯು ವಾಸ್ತವಿಕದಲ್ಲಿ ಯಾವಾಗ ನೆರವೇರಿತು ಎಂದು ಇತಿಹಾಸದಲ್ಲಿನ ಕಾಲಾವಧಿಯೊಂದನ್ನು ಕಂಡು ಹಿಡಿಯುವುದು ಕಷ್ಟಕರವಾಗಿರುತ್ತದೆ. ಹಾಗಾದರೆ, ನೋಹನು ದೇವರಿಗೆ ಮಾಡಿಕೊಂಡ ವಿನಂತಿಯ ಅಂತಿಮವಾದ ನೆರವೇರಿಕೆಯು, ಪೌಲನು ಸಿರಿಯದಲ್ಲಿರುವ ಅಂತಿಯೋಕ್ಯದಿಂದ ತಾರ್ಸ, ಗಲಾತ್ಯದ ಪಟ್ಟಣಗಳು, ಎಫೆಸ, ಅಯಗೇನ ಸಮುದ್ರದಾಚೆ ಮಕೆದೋನ್ಯ, ಗ್ರೀಸ್, ಮತ್ತು ಮುಂತಾದ ಕಡೆಗಳ ತನಕ ಮಾಡಿದ ಸುವಾರ್ತಾ ಪ್ರಯಾಣಗಳಲ್ಲಿಯೇ ಆರಂಭಗೊಂಡಿತ್ತೆಂದು ಹೇಳಬಹುದು, ಯೆಪೆತನ ಸಂತತಿಯವರು (ಯೆಹೂದಿ ಕ್ರೈಸ್ತರು) ಸಮಾಧಾನದಿಂದ ಒಂದಾಗಿ ನೆಲೆಸುವಂತೆ ಒಂದುಗೂಡಿಸಲ್ಪಟ್ಟರು - ಕ್ರಿಸ್ತನ ಆತ್ಮೀಕ ದೇಹವಾಗಿ, ಸಭೆಯಾಗಿ ನೆಲೆಸುವಂತಾದರು (ಎಫೆಸ 2:11-22).

9:27ರ ಅಂತಿಮ ಹೇಳಿಕೆಯು ಏನೆಂದರೆ **ಕಾನಾನನು ಶೇಮನ ದಾಸನು** ಮಾತ್ರವೇ ಅಲ್ಲ, ಆದರೆ ಯೆಪೆತನ ದಾಸನು ಸಹ ಆಗಿದ್ದನು. ಕಾನಾನು ಭವಿಷಯದಲ್ಲಿ ಸೇವಕನಾಗುವನು (ದಾಸತ್ವ) ಎಂಬುದರ ಕುರಿತು ಇದು ಮೂರನೆಯ ಸಾರಿ ಮುಂದತಿಳಿಸುವಿಕೆಯಾಗಿದೆ, ಆ ಶಾಪವನ್ನು ಮತ್ತಷ್ಟು ಒತ್ತಿ ಹೇಳುವದಾಗಿದೆ. ಈಗಾಗಲೇ, ಕ್ರಿ.ಪೂ. ಎರಡನೆಯ ಸಹಸ್ರಮಾನದ ಆರಂಭದಿಂದ (ಅಬ್ರಹಾಮನ ಕಾಲ), ಅನೇಕ ಕಾನಾನ್ಯರು ಫಿಲಿಷ್ಟಿಯದಲ್ಲಿ ಮಾತ್ರವೇ ಅಲ್ಲ, ಆದರೆ ಮೆಡಿಟೆರ್ರೇನಿಯನ್ ಸಮುದ್ರದ ಉತ್ತರ ದಿಕ್ಕಿನ ಕಾನಾನ್ ದೇಶದ ಮೂಡಣ ಕರಾವಳಿಯುದ್ದಕ್ಕು (ಆಧುನಿಕ ಲೆಬನಾನ ಮೊದಲ್ಗೊಂಡು ಸಿರಿಯದಲ್ಲಿನ ಉಗ್ರಿತ್ ವರೆಗೂ) ಸಹ ನೆಲೆಸಿದ್ದರು.[24] ಪ್ರಾಚೀನ ವಾಕ್ಯಗಳ ಪ್ರಕಾರ, ಇಸ್ರಾಯೇಲ್ಯರು ವಾಗ್ದಾನ ದೇಶವನ್ನು ಪ್ರವೇಶಿಸಿದ ಕಾಲದಿಂದ ಬಹಳ ದೂರವೇನೂ ಇರದ, ಅಯಗೇನ್ ದ್ವೀಪಗಳಿಗೆ ಸೇರಿದ ಸಮುದ್ರ ಜನಾಂಗಗಳು (ಅವರಲ್ಲಿ ಕೆಲವರು ಯೆಪೆತನ ಸಂತತಿಯವರಾಗಿದ್ದರು) ಸಹ ಬಹಳ ಕಾಲದಿಂದಲೂ ಕಾನಾನ್ಯರ ಸ್ವಾಧೀನದಲ್ಲಿದ್ದಂಥ ಪ್ರಾಂತ್ಯಗಳೊಳಗೆ ನೆಲೆಗಳನ್ನು ನಿರ್ಮಿಸಿಕೊಳ್ಳುತ್ತಲಿದ್ದರು. ಅಂತಹ ಘಟನೆಗಳು ನೋಹನು ಯೆಪೆತನಿಗೆ ನೀಡಿದ ಆಶೀರ್ವಾದವು ನೆರವೇರಿದ್ದರ ಭಾಗವಾಗಿರಬಹುದಾಗಿದೆ.

## ನೋಹನ ಮರಣ (9:28, 29)

**28ಪ್ರಳಯವಾದ ಮೇಲೆ ನೋಹನು ಮುನ್ನೂರೈವತ್ತು ವರುಷ ಬದುಕಿದನು. 29ಅವನು ಒಟ್ಟು ಒಂಭೈನೂರೈವತ್ತು ವರುಷ ಬದುಕಿ ಸತ್ತನು.**

ನೋಹನ ಕಥೆಯು 5:3-32ರಲ್ಲಿ ತಿಳಿಸಲ್ಪಟ್ಟ ಸೇತನ ವಂಶಾವಳಿಯನ್ನು ಪೂರ್ತಿಗೊಳಿಸುವದಕ್ಕೆ ಎರಡು ನಿಧನವಾರ್ತೆಗಳ ಮಾಹಿತಿಯೊಂದಿಗೆ ಮುಕ್ತಾಯಗೊಳ್ಳುತ್ತದೆ.

**ವಚನ 28.** 5ನೇ ಅಧ್ಯಾಯವನ್ನು ಚರ್ಚಿಸುವ ವೇಳೆ, ಆ ಪ್ರಾಚೀನ ದಾಖಲೆಗಳೊಳಗೆ "10" ಸಂಖ್ಯೆಯ ಮಹತ್ವವನ್ನು ಕುರಿತಾಗಿ ಗಮನಿಸಿದೆವು. ಪೂರ್ವಜರ ದಾಖಲೆಯೊಳಗೆ ನೋಹನು ಹತ್ತನೆಯ ಮತ್ತು ಅಂತಿಮ ಸ್ಥಾನದಲ್ಲಿರುತ್ತಾನೆ. ಇಲ್ಲಿ, ವಾಕ್ಯವು ಹೇಳುವದೇನೆಂದರೆ **ಪ್ರಳಯವಾದ ಮೇಲೆ ನೋಹನು ಮುನ್ನೂರೈವತ್ತು ವರುಷ ಬದುಕಿದನು**. ಆದದರಿಂದ, ಆತನು ಪ್ರಳಯಪೂರ್ವದ ಜಗತ್ತು ಮತ್ತು ಪ್ರಳಯ ನಂತರದ ಜಗತ್ತು ನಡುವಿನ ಅತ್ಯಾವಶ್ಯಕವಾದ ಸೇತುವೆಯಾಗಿದ್ದನು.

5ನೇ ಅಧ್ಯಾಯದಲ್ಲಿ ಸೇತನ ಸಂತತಿಯವರ ವಿಷಯವಾದ ಸಾಮಾನ್ಯ ಮಾತು, "ಗಂಡು ಹೆಣ್ಣು ಮಕ್ಕಳನ್ನು ಪಡೆದನು" ಎಂಬುದು ಈ ಬಣ್ಣನೆಯಲ್ಲಿ ಕೈ ಬಿಡಲ್ಪಟ್ಟಿರುತ್ತದೆ. ಈ ಕೈ ಬಿಟ್ಟಿರುವಿಕೆಯು ಪ್ರಳಯದ ನಂತರದಲ್ಲಿನ ಮಾನವರೆಲ್ಲರೂ ನೋಹನ ಮೂವರು ಮಕ್ಕಳ ಸಂತತಿಯವರಾಗಿದ್ದರು ಎಂಬುದನ್ನು ಅಂತಿಮಗೊಳಿಸುತ್ತದೆ: ಶೇಮ್, ಹಾಮ್, ಮತ್ತು ಯೆಪೆತ್.

**ವಚನ 29.** ಮೂಲಪಿತೃವಿನ ನಿಧನವಾರ್ತೆಯು ಹೀಗೆ ಹೇಳುವ ಮೂಲಕ ಮುಕ್ತಾಯಗೊಳ್ಳುತ್ತದೆ, **ಅವನು ಒಟ್ಟು ಒಂಭೈನೂರೈವತ್ತು ವರುಷ ಬದುಕಿ ಸತ್ತನು.** ಉತ್ನಪಿಸ್ತಿಮನ ಪೌರಾಣಿಕ ಕಥೆಯಲ್ಲಿ, ಬಾಬೆಲಿನ ನೋಹನನ್ನು ಪ್ರಳಯದ ಬಳಿಕ ದೇವರಂತೆ ನಿರ್ಲಯವಾದವನೆಂಬುದಾಗಿ ಮಾಡಲಾಗಿರುತ್ತದೆ.[25] ನಿಜವಾದ ನೋಹನು 5:3-32ರಲ್ಲಿ ಪಟ್ಟಿ ಮಾಡಲಾಗಿರುವ ಆತನ ಎಲ್ಲಾ ಪೂರ್ವಜರಂತೆಯೇ ಮರಣವನ್ನು ಹೊಂದಿದನು, ಅವರಲ್ಲಿ ಹನೋಕನ ವಿಷಯದಲ್ಲಿ ಮಾತ್ರವೇ ಆತನು "ಸತ್ತನು" ಎಂದು ಹೇಳಲಾಗಿರುವದಿಲ್ಲ.

# ಅನ್ವಯಿಸುವಿಕೆ

## ದೇವರ ಕೃಪಾಭರಿತ ವರಗಳು (9:1-20)

ಒಂದು ಅರ್ಥದಲ್ಲಿ, ನೋಹನು ಎರಡನೆಯ ಆದಾಮನಂತಿದ್ದನು. ಆತನು ಮತ್ತು ಆತನ ಕುಟುಂಬದವರು ಪ್ರಳಯಪೂರ್ವದ ಜನರು ಮಾಡಿದ್ದ ದುಷ್ಟತ್ವವನ್ನು ಹೋಗಲಾಡಿಸಿ ಶುದ್ಧೀಕರಿಸಲ್ಪಟ್ಟ ಹೊಸ ಲೋಕದೊಳಗೆ ಕಾಲಿಟ್ಟಿದ್ದರು. ದೇವರು ತನ್ನ ಕೃಪೆಯ ಮೂಲಕವಾಗಿ ಮನುಷ್ಯರಿಗೆ ಒಂದು ಹೊಸ ಆರಂಭವನ್ನು ಒದಗಿಸಿದ್ದನು. ಆತನು ಆದಾಮ ಮತ್ತು ಹವ್ವಳ ಪಾಪದ ನಿಮಿತ್ತವಾಗಿ ಏದೆನ್ ತೋಟದಲ್ಲಿ ನೀಡಿದ್ದ ಶಾಪವನ್ನು ಪುನರುಚ್ಚರಿಸಲಿಲ್ಲ, ಆದರೆ ಆತನು ಸೃಷ್ಟಿಯ ಕಾರ್ಯದಲ್ಲಿ ನೀಡಿದ್ದ ಕೆಲವು ಮೂಲ ಆಶೀರ್ವಾದಗಳನ್ನಂತೂ ಪುನರಾವರ್ತಿಸಿದ್ದನು. ಅಲ್ಲದೆ ಹೊಸ ಮಾನವ ಜನಾಂಗದ ಜನಕರಾಗಲಿದ್ದವರಿಗೆ ಕೆಲವೊಂದು ಹೆಚ್ಚುವರಿ ಆಶೀರ್ವಾದಗಳನ್ನು ಸಹ ನೀಡಿದ್ದನು.

*ಏರ್ಪಾಡು 1: ಮಾನವ ಕುಟುಂಬದ ಹೆಚ್ಚಳ* (9:1, 7). ಸೃಷ್ಟಿಯಲ್ಲಿ ಕೊಡಲ್ಪಟ್ಟ ಮೊದಲ ಆಜ್ಞೆ ಮತ್ತು ಆಶೀರ್ವಾದವು (1:28) ನೋಹನ ಕುಟುಂಬಕ್ಕಾಗಿ ಎರಡು ಸಾರಿ ಪುನರಾವರ್ತಿಸಲ್ಪಟ್ಟಿತ್ತು, ಪ್ರಳಯದಲ್ಲಿ ಬದುಕುಳಿದವರಿಗೆ "ಬಹುಸಂತಾನವುಳ್ಳವರಾಗಿ ಹೆಚ್ಚಿರಿ; ಭೂಲೋಕದಲ್ಲೆಲ್ಲಾ ತುಂಬಿಕೊಳ್ಳಿರಿ" ಎಂದು ಬೇಡಿಕೊಳ್ಳಲಾಯಿತು (9:1, 7). ಮದುವೆಯ ಶಾಸನವು ಒಂದು ಪವಿತ್ರವಾದ ಪದ್ಧತಿ ಎಂದು ಪುನಃ ದೃಢೀಕರಿಸಲ್ಪಟ್ಟಿತು (2:22–25; ನೋಡಿರಿ ಮತ್ತಾಯ 19:4–6), ಲಿಂಗಗಳ ನಡುವಿನ ಸಂಬಂಧವನ್ನು ಕೀಳುತನಕ್ಕೆ ಇಳಿಯುವ ಸಂಬಂಧಗಳಿಗಿಂತಲೂ ಹೆಚ್ಚಿನದ್ದಾಗಿ ಮಾಡಿ ಸಮಾಜದಲ್ಲಿ ಸ್ಥಿರತೆಯನ್ನು ಉತ್ತೇಜಿಸುವದಾಗಿತ್ತು. ಇದು ಮನುಷ್ಯನನ್ನು ನಿಗ್ರಹಿಸಿಕೊಳ್ಳದ ಕಾಮಾಭಿಲಾಷೆಗಳನ್ನು ಮತ್ತು ನಿಯಂತ್ರಣದಲ್ಲಿಲ್ಲದ ಶಾರೀರಿಕ ಇಚ್ಛೆಗಳಲ್ಲಿ ತೊಡಗಿಸಿಕೊಳ್ಳುವದಕ್ಕಿಂತ ಮೇಲಕ್ಕೆ ಎಬ್ಬಿಸಿ ನಿಲ್ಲಿಸುವದಕ್ಕೆ ದೇವರು ಮಾಡಿದ ಪ್ರಯತ್ನವಾಗಿತ್ತು. ಲೋಕದ ಬಹಳಷ್ಟು ಭ್ರಷ್ಟತೆಯು ಬಹುಪತ್ನಿತ್ವ ಮತ್ತು ತಪ್ಪಾದ ಕಾರಣಗಳಿಗಾಗಿ ಮದುವೆ ಮಾಡಿಕೊಳ್ಳುವ ಮೂಲಕವಾಗಿ ಮದುವೆಯ ಪದ್ಧತಿಯನ್ನು ಅಪವಿತ್ರಗೊಳಿಸಿದ್ದರಿಂದಲೇ ಉಂಟಾಗಿತ್ತು.

ಆದಾಮ ಮತ್ತು ಹವ್ವಳ ಬಹುಪಾಲು ಸಂತತಿಯವರು ಭೂಮಿಯನ್ನು ತುಂಬಿಕೊಂಡಿದ್ದ ವ್ಯಾಪಕವಾದ ಪಾಪದಲ್ಲಿ ಭಾಗಿಗಳಾಗಿದ್ದರು. ಹೇಗೂ, ಸೇತನ ನೀತಿಯುಳ್ಳ ವಂಶವು ಸತ್ಯ ದೇವರ ಜ್ಞಾನವನ್ನು ಸಂರಕ್ಷಿಸಿಕೊಂಡು ಬಂದಿತ್ತು ಮತ್ತು ಅದನ್ನು ತಮ್ಮ ಸಂತತಿಯವರಿಗೆ ಕಲಿಸಿ ಕೊಟ್ಟರು. ಈ ಪ್ರಕ್ರಿಯೆಯು ನೋಹನಲ್ಲಿ ಸಮಾರೋಪಗೊಂಡಿತ್ತು. ಮನುಷ್ಯನು ಪಾಪದಲ್ಲಿ ಅಭಿವೃದ್ಧಿಗೊಂಡಿದ್ದರ ಹೊರತಾಘಿಯೂ, ದೇವರು ನೋಹನ ಸಂತಾನದ ಮೂಲಕವಾಗಿ ಮಾನವರಿಗೆ ಅಂತಿಮವಾದ ವಿಮೋಚನೆಯನ್ನು ಕಾರ್ಯರೂಪಕ್ಕೆ ತರುವದಕ್ಕಾಗಿ ಪರಿಮಿತನಾದ ಮಾನವ ಮುಖಾಂತರವಾಗಿ ಕೃಪೆಯುಳ್ಳವನಾಗಿ ಕೆಲಸ ಮಾಡುವದಕ್ಕೆ ಈಗಲೂ ಮನಸ್ಸುಳ್ಳವನಾಗಿದ್ದನು: ಆ ಸಂತಾನವು ಸೇತನು (10:21–31), ಈತನು ಅಬ್ರಾಮ (ಅಥವಾ ಅಬ್ರಹಾಮ; 11:10–26) ಪೂರ್ವಜನಾಗಿದ್ದನು ಮತ್ತು ಆತನ ಅಂತಿಮ ಸಂತತಿಯವನೇ ಯೇಸು ಕ್ರಿಸ್ತನಾಗಿರಲಿದ್ದನು (ಮತ್ತಾಯ 1:1–17; ಗಲಾತ್ಯ 3:8–29).

ಶಾಸ್ತ್ರಗಳಲ್ಲಿ ಮಕ್ಕಳು ಯೆಹೋವನಿಂದ ಬರುವ ಒಂದು ಆಶೀರ್ವಾದವೆಂದು ಪರಿಗಣಿಸಲ್ಪಟ್ಟಿರುತ್ತಾರೆ. ಅನೇಕ ಮಕ್ಕಳನ್ನು ಮತ್ತು ಮೊಮ್ಮಕ್ಕಳನ್ನು ಪಡೆಯುವದನ್ನು ಯಾವಾಗಲೂ ದೈವಿಕ ಕಟಾಕ್ಷಕ್ಕೆ ಒಂದು ಪುರಾವೆಯಾಗಿ ಕಾಣಲಾಗುತ್ತಿತ್ತು (24:60; ಕೀರ್ತನೆ 127:3–5; 128:3, 4). ದುರಂತಕರವೆಂದರೆ, ಲೋಕದಲ್ಲಿರುವ ಅನೇಕರು ಇಂದು

ಮಕ್ಕಳನ್ನು ಆ ವಿಧವಾಗಿ ಭಾವಿಸಿಕೊಳ್ಳುವದಿಲ್ಲ, ವಿವಿಧ ದೇಶಗಲ್ಲಿ ಎಷ್ಟೊಂದು ಗರ್ಭಪಾತಗಳಾಗುತ್ತವೆಂಬುದರಲ್ಲಿ ಅದು ಕಂಡು ಬರುತ್ತದೆ. ಬೈಬಲಿನ ಸಮಯಗಳಲ್ಲಿ, ದೇವರು ಮಗುವೊಂದನ್ನು ಗರ್ಭಪಾತ ಮಾಡಿಸಿಕೊಳ್ಳುವ ಯೋಚನೆಯನ್ನು ದೇವರ ಜನರನು ಮಾಡಿರಲಾರರು. ಜೀವವು ದೇವರ ವರದಾನ ಎಂಬುದು ಅವರಿಗೆ ತಿಳಿದಿತ್ತು, ಮತ್ತು ಮಕ್ಕಳನ್ನು ಯೆಹೋವನಿಂದ ಆಶೀರ್ವಾದವಾಗಿದ್ದು ಪ್ರೀತಿಸಲ್ಪಡತಕ್ಕವರು, ಕಾಪಾಡಲ್ಪಡತಕ್ಕವರು, ಮತ್ತು ಆತನ ಮಹಿಮೆಗೋಸ್ಕರ ಉಪದೇಶಿಸಲ್ಪಡತಕ್ಕವರು ಎಂದು ಪರಿಗಣಿಸಲಾಗುತ್ತಿತ್ತು.

*ಏರ್ಪಾಡು 2: ಮಾನವ ಜೀವಿತದ ಪೋಷಣೆ* (9:2-4, 20). ಪ್ರಳಯದ ಮುನ್ನ ಮಾನವರು ಪ್ರಾಣಿಯ ಮಾಂಸವನ್ನು ಸೇವಿಸುತ್ತಿದ್ದರೋ ಅಥವಾ ಇಲ್ಲವೋ ಎಂಬುದರ ಬಗ್ಗೆ ಬೈಬಲ್ ಮೌನವಾಗಿರುತ್ತದೆ. ಮನುಷ್ಯನ ಬೀಳುವಿಕೆಯ ನಂತರ, ಅನೇಕ ಜನರಿಗೆ ಜೊತೆಯ ಮಾನವ ಜೀವಿಗಳ ರಕ್ತವನ್ನು ಹರಿಸುವದರ ವಿಷಯದಲ್ಲಿ ಚಿಂತೆಯನ್ನೇ ಹೊಂದಿರಲಿಲ್ಲ ಎಂಬುದನ್ನಂತೂ ನಾವು ಬಲ್ಲೆವು (4:8, 14, 23, 24; 6:11); ಮತ್ತು ಅವರು ಆಹಾರಕ್ಕಾಗಿ ಪ್ರಾಣಿಯನ್ನು ಕೊಲ್ಲುವದಕ್ಕೆ ಸಂಕೋಚ ಪಟ್ಟಿರಬಹುದು ಎಂಬುದ ಸಂದೇಹಕರವಾಗಿರುತ್ತದೆ. ದೇವರು ಈ ಎರಡನೆಯ ಸಂಗತಿಯನ್ನು ಖಂಡಿತವಾಗಿಯೂ ಅನುಮತಿಸಿರಬಹುದಾಗಿದೆ, ಆದರೆ ಈ ಪದ್ಧತಿಗೆ ಮೊದಲ ಬಾರಿಗೆ ಸಕಾರಾತ್ಮಕವಾದ ಅಧಿಕಾರ ಕೊಡುವಿಕೆಯು ನೋಹ ಮತ್ತು ಆತನ ಕುಟುಂಬದವರು ನಾವೆಯಿಂದ ಹೊರಗೆ ಬಂದ ನಂತರ ಸಂಭವಿಸಿತ್ತು. ನೋಹನು ಹೊಸ ಲೋಕದೊಳಗೆ ನೇಡುವದಕ್ಕೋಸ್ಕರವೆಂದು ನಾವೆಯೊಳಗೆ ತೆಗೆದುಕೊಂಡು ಬಂದಿದ್ದ ಬೀಜಗಳನ್ನು ಹೊರತು ಪಡಿಸಿ (9:20), ದೇವರು ಭೂಮಿಯ ಮೇಲೆ ಸಂಚರಿಸುವ ಸಕಲ ಪ್ರಾಣಿ, ಆಕಾಶದಲ್ಲಿ ಹಾರಾಡುವ ಪಕ್ಷಿಗಳು, ಮತ್ತು ನೆಲದ ಮೇಲೆ ಹರಿದಾಡುವ ಕ್ರಿಮಿಗಳು, ಮತ್ತು ಸಮುದ್ರದಲ್ಲಿನ ಸಕಲ ಮೀನುಗಳು ಇವುಗಳನ್ನು ಸಹ ದೇವರು ಮಾನವರಿಗೆ ಆಹಾರವಾಗಿ ಒದಗಿಸಿದನ (9:3).

ಅಲ್ಲದೆ ಯೆಹೋವನು ಈ ಎಲ್ಲಾ ಪ್ರಾಣಿಗಳು ಮಾನವನಿಗೆ ಹೆದರುವಂತೆ ಸಹ ಮಾಡಿದನು (9:2). ಅವುಗಳು ದುರುಪಯೋಗದಿಂದ ಬೇಟೆಯಾಡಲ್ಪಟ್ಟು ಅಳಿದು ಹೋಗಬಾರದೆಂದು ಅವುಗಳು ಸಹಜ ಪ್ರೇರಣೆಯಿಂದ ಮನುಷ್ಯನಿಗೆ ದೂರವಾಗಿ ಓಡಿ ಹೋಗುವಂತೆ ಈ ಬದಲಾವಣೆಯನ್ನು ಮಾಡಿರಬಹುದಾಗಿದೆ. ಮಾನವರು ಮತ್ತು ಪ್ರಾಣಿಗಳು ಶಾರೀರಿಕವಾಗಿ ಬದುಕುಳಿಯುವಂತಾಗಲು, ಅವುಗಳು ಮತ್ತೊಬ್ಬರ ಜೀವಗಳಿಂದ ಬದುಕತಕ್ಕದ್ದಾಗಿತ್ತು, ಅದು ಪ್ರಾಣಿಗಳೇ ಆಗಿರಲಿ ಅಥವಾ ಗಿಡಮರಗಳೇ ಆಗಿರಲಿ. ಈ ಕಾರಣಕ್ಕಾಗಿ, ದೇವರು ಮನುಷ್ಯನಿಗೆ ಭೂಮಿಯ ಮೇಲೆ ಧೊರೆತನವನ್ನು ಅನುಗ್ರಹಿಸಿದನು. ಅಲ್ಲದೆ ಆತನು ಮನುಷ್ಯನ ಮೇಲೆ ಮಿತಿಯೊಂದನ್ನು ಸಹ ಹೇರಿದನು: ಪ್ರಾಣಿಗಳ ಮಾಂಸವನ್ನು ಆಹಾರಕ್ಕಾಗಿ ತಿನ್ನಬಹುದಾಗಿತ್ತಾದರೂ, ಅವುಗಳ ರಕ್ತವನ್ನು ಮಾಂಸದೊಂದಿಗೆ ತಿನ್ನಬಾರದಿತ್ತು (9:4). ಇಲ್ಲಿ, ದೇವರು ನೋಹನಿಗೆ ತಾನು ಅನಂತರದಲ್ಲಿ ಮೋಶೆಗೆ ಏನನ್ನು ವಿವರವಾಗಿ ಹೇಳಿದನೋ ಅದನ್ನು ಕ್ಲುಪ್ತವಾಗಿ ತಿಳಿಸಿದನು: ರಕ್ತವು ಜೀವಧಾರವಾಗಿದೆ, ಮತ್ತು ಈ ಜೀವದ ಶಕ್ತಿಯನ್ನು ಗೌರವಿಸತಕ್ಕದ್ದು ಯಾಕೆಂದರೆ ಅದು ಯೆಹೋವನಿಂದಲೇ ಬಂದದ್ದಾಗಿದೆ (ಯಾಜಕಕಾಂಡ 3:17; 7:26, 27; 17:10-14; ಧರ್ಮೋಪದೇಶಕಾಂಡ 12:16, 23-25; 15:23).

ಕೊರತೆಗಳಾವವು ಮತ್ತು ಅಗತ್ಯತೆಗಳಾವವು ಎಂದು ವ್ಯತ್ಯಾಸವನ್ನು ಗುರುತಿಸುವ ವಿಷಯದಲ್ಲಿ ಮನುಷ್ಯನು ಯಾವಾಗಲೂ ಕಷ್ಟ ಪಟ್ಟಿರುತ್ತಾನೆ. ನಾವು ಯಾವದಾದರೂ

ಆಕರ್ಷಕವಾದದ್ದನ್ನು ನೋಡುವಾಗ, ಅದನ್ನು ಬಯಸುವದಕ್ಕೆ ಒಲವು ತೋರುತ್ತೇವೆ; ಮತ್ತು ಆ ಬಯಕೆಯನ್ನು ನಿಯಂತ್ರಿಸಿಕೊಳ್ಳದಿದ್ದರೆ, ಆ ಬಯಸಲ್ಪಟ್ಟ ವಸ್ತುವು ಇಲ್ಲದೆ ನಾವು ಬದುಕಲಾರೆವು ಎಂದು ಯೋಚಿಸಲಾರಂಭಿಸುವದಕ್ಕೆ ಮತ್ತು ಅದು ನಮಗೆ ಒಂದು "ಅಗತ್ಯತೆ" ಎಂಬುದಾಗಿ ತಾರ್ಕಿಕಗೊಳಿಸುವದಕ್ಕೆ ಆರಂಭಿಸುತ್ತೇವೆ. ಆಗ ದೇವರು ಆದಾಮ ಮತ್ತು ಹವ್ವಳರನ್ನು ಏದೆನ್ ತೋಟದಲ್ಲಿ ಇರಿಸಿದ್ದಂಥ ಆ ಆರಂಭ ಕಾಲದಿಂದಲೂ ಇದು ಮಾನವ ಜನಾಂಗಕ್ಕಿರುವ ದುರ್ಬಲತೆಯಾಗಿರುತ್ತದೆ. ಅವರಿಗೆ ಅಗತ್ಯವಾಗಿರುವ ಸಕಲವನ್ನು ಆತನು ಏರ್ಪಾಡು ಮಾಡಿದ್ದನು. ಅವರಿಗೆ ತಿನ್ನುವದಕ್ಕೆ ಎಲ್ಲಾ ವಿಧವಾದ ಹಣ್ಣುಗಳು ಮತ್ತು ಗಿಡಗಳಿದ್ದವು. ಅವರು ಪಾಪ ಮಾಡಿದ ಬಳಿಕ, ಆತನು ಅವರಿಗೆ ಪ್ರಾಣಿಯ ಚರ್ಮಗಳನ್ನು ಉಡುಪಾಗಿ ನೀಡಿದ್ದನು (1:29; 2:9, 16; 3:21). ಆಹಾರ ಮತ್ತು ಉಡುಪು ಈಗಲೂ ಮಾನವ ಮೂಲಭೂತ ಅಗತ್ಯತೆಗಳಾಗಿವೆ, ಯೇಸುವು ತಾವು ಏನು ತಿನ್ನಬೇಕು, ಕುಡಿಯಬೇಕು, ಅಥವಾ ತೊಟ್ಟುಕೊಳ್ಳಬೇಕು ಎಂಬುದರ ಬಗ್ಗೆ ಚಿಂತಿಸುತ್ತಿದ್ದ ಜನರೊಂದಿಗೆ ಮಾತಾಡುವ ವೇಳೆ ಅದನ್ನೇ ಪರ್ವತದ ಮೇಲಿನ ಪ್ರಸಂಗದಲ್ಲಿ ಹೇಳಿದನು. ನಮ್ಮ ಪರಲೋಕದ ತಂದೆಯು ಹೂಗಳಿಗೆ ಉಡುಪನ್ನು ತೊಡಿಸಿ ಪಕ್ಷಿಗಳಿಗೆ ಆಹಾರವನ್ನು ಒದಗಿಸುವದಾದರೆ, ಆತನು ತನ್ನ ಸ್ವಂತ ಪ್ರಿಯ ಮಕ್ಕಳಿಗೆ ನಿಶ್ಚಯವಾಗಿಯೂ ಆಹಾರ ಮತ್ತು ಉಡುಪುಗಳನ್ನುಒದಗಿಸುವನು ಎಂಬುದಾಗಿ ಯೇಸುವು ಒತ್ತಿ ಹೇಳಿದನು. ನಮಗೆ ಈ ಸಂಗತಿಗಳ ಅಗತ್ಯವಿದೆ ಎಂಬುದು ದೇವರಿಗೆ ಗೊತ್ತಿದೆ (ಮತ್ತಾಯ 6:25-32).

ಅಪೊಸ್ತಲನಾದ ಪೌಲನು ಇದಕ್ಕೆ ಸಹಮತವನ್ನು ವ್ಯಕ್ತಪಡಿಸುತ್ತಾನೆ. ಅದೇ ರೀತಿಯಲ್ಲಿ ಆತನು ಮನುಷ್ಯನ ಮೂಲಭೂತ ಅಗತ್ಯತೆಗಳನ್ನು ಎರಡು ಸಂಗತಿಗಳಿಗೆ ಇಳಿಸುತ್ತಾ ಹೀಗೆ ಹೇಳಿದನು, "ನಮಗೆ ಅನ್ನವಸ್ತ್ರಗಳಿದ್ದರೆ ಸಾಕು" (1 ತಿಮೊಥೆ 6:8). ಈ ಮುಖ್ಯವಾಗಿ ಬೇಕಾಗಿರುವ ಸಂಗತಿಗಳನ್ನು ಹೊರತು ಪಡಿಸಿ ಹೆಚ್ಚು ಸಂಗತಿಗಳನ್ನು ಹೊಂದಿರುವುದು ತಪ್ಪು ಎಂಬುದು ಇದರರ್ಥವಲ್ಲ, ಆದರೆ ಇದು ಸ್ವತ್ತುಗಳನ್ನು ಪ್ರೀತಿಸಿ ದುರಾಶೆಯನ್ನು ಒಂದು ಅಗತ್ಯತೆಯೆಂದು ತಪ್ಪಾಗಿ ಭಾವಿಸಿಕೊಳ್ಳಬಾರದೆಂದು ಒಂದು ಎಚ್ಚರಿಕೆ ಇದಾಗಿರುತ್ತದೆ. ಈ ಬಲೆಯಲ್ಲಿ ಬೀಳುವ ಜನರು ತಮ್ಮ ಸ್ವಾರ್ಥ ಬಯಕೆಗಳನ್ನು ತೃಪ್ತಿಪಡಿಸುವದಕ್ಕೆ ಪ್ರಯತ್ನಿಸುವವರಾಗಿ ಹೆಚ್ಚೆಚ್ಚು ವಸ್ತುಗಳನ್ನು ಖರೀದಿಸುತ್ತಾ ಹೆಚ್ಚೆಚ್ಚಾಗಿ ಐಶ್ವರ್ಯವನ್ನು ಕೂಡಿಸಿಟ್ಟುಕೊಳ್ಳುವದಕ್ಕೆ ತಮ್ಮ ಜೀವಿತಗಳನ್ನು ಮುಡಿಪಾಗಿಟ್ಟುಕೊಳ್ಳುವರು. "ಬುದ್ಧಿವಿರುದ್ಧವಾಗಿಯೂ ಹಾನಿಕರವಾಗಿಯೂ ಇರುವ ಅನೇಕ ಆಶೆಗಳಲ್ಲಿ ಬೀಳುವದರ" ವಿರುದ್ಧವಾಗಿ ಎಚ್ಚರಿಕೆಯನ್ನು ಕೊಡುತ್ತಾ, ಪೌಲನು ಹೀಗೆ ಹೇಳಿದನು, "ಹಣದಾಸೆಯು ಸಕಲವಿಧವಾದ ಕೆಟ್ಟತನಕ್ಕೆ ಮೂಲವಾಗಿದೆ. ಕೆಲವರು ಅದಕ್ಕಾಗಿ ಆತುರಪಟ್ಟು ಅದರಿಂದ ಕ್ರಿಸ್ತ ನಂಬಿಕೆಯನ್ನು ಬಿಟ್ಟು ಅಲೆದಾಡಿ ಅನೇಕ ವೇದನೆಗಳಿಂದ ತಮ್ಮನ್ನು ತಿವಿಸಿಕೊಳ್ಳುತ್ತಾರೆ" (1 ತಿಮೊಥೆ 6: 9, 10).

*ಏರ್ಪಾಡು 3: ಮಾನವ ಕುಟುಂಬಕ್ಕೆ ಭದ್ರತೆ* (9:5, 6). ಆಹಾರಕ್ಕಾಗಿ ಪ್ರಾಣಿಗಳನ್ನು ಕೊಲ್ಲುವದನ್ನು ಅಂಗೀಕರಿಸಿಕೊಳ್ಳುವಂತೆ ಆದರೆ ಅವುಗಳ ರಕ್ತವನ್ನು ಸೇವಿಸಕೂಡದೆಂದು ನೋಹನಿಗೆ ಅಪ್ಪಣೆಯನ್ನು ಕೊಟ್ಟ ಬಳಿಕ, ದೇವರು ಹೆಚ್ಚು ಪ್ರಾಮುಖ್ಯವಾದ ಚರ್ಚೆಯಾಂಶದ ಕಡೆಗೆ ತಿರುಗಿಕೊಂಡನು: ಮಾನವನ ರಕ್ತವನ್ನು ಸುರಿಸುವಿಕೆ. ಮನುಷ್ಯನಿಂದ ಬೆದರಿಕೆಯಿದೆ ಎಂದು ಭಾವಿಸುವ ಅಥವಾ ಆತನನ್ನು ಆಹಾರದ ಮೂಲವೆಂಬಂತೆ ಕಾಣಬಹುದಾದ ಭಯಭರಿತ ಮತ್ತು/ಅಥವಾ ಕ್ರೂರ ಪ್ರಾಣಿಗಳ ವಿರುದ್ಧವಾಗಿ ದೇವರು ಒಂದು ಮಟ್ಟದ ಭದ್ರತೆಯನ್ನು ಒದಗಿಸಿದನು. ಮಾನವ ರಕ್ತವನ್ನು ಸುರಿಸಿದರೆ ಪ್ರಾಣಿ ಮತ್ತು ಮನುಷ್ಯ

ಇಬ್ಬರನ್ನೂ ಹೊಣೆಗಾರರನ್ನಾಗಿ ಮಾಡಬೇಕು ಎಂದು ಆತನು ಒತ್ತಿ ಹೇಳಿದನು. ಅಪರಾಧ ಮಾಡಿದವರು ತಮ್ಮ ಸ್ವಂತ ಜೀವಧಾರವಾದ ರಕ್ತವನ್ನು ಕಳೆದುಕೊಳ್ಳುವರು (ಅಕ್ಷರಶಃ "ರಕ್ತವನ್ನು ಸುರಿಸಿ ಜೀವತೆಗೆಯುವವರಿಗೆ"; 9:5).

ದೈಹಿಕವಾಗಿ ಮನುಷ್ಯನಿಗಿಂಥ ಬಲಿಷ್ಠವಾಗಿರುವ ಪ್ರಾಣಿಗಳು ಮಾನವನ ಜೀವಿತಕ್ಕೆ ದೊಡ್ಡ ಗಂಡಾಂತರವನ್ನೊಡ್ಡಬಹುದು, ಆದರೆ ಅವುಗಳನ್ನು ಮನಸೋ ಇಚ್ಛೆಯಾಗಿ ಕೊಲ್ಲಲ್ಪಡಕೂಡದು. ಮಾನವರನ್ನು ಬೇಟೆಯಾಡುವ ಒಂದು ಪ್ರಾಣಿಯನ್ನು ಜನರ ರಕ್ಷಣೆಗೋಸ್ಕರ ಕೊಲ್ಲತಕ್ಕದ್ದು ಎಂದು ದೇವರು ಹೇಳಿದನು. ಎಲ್ಲಾ ಜೀವವೂ ಪವಿತ್ರವಾದದ್ದು; ಆದರೆ ಮಾನವನ ಜೀವಿತವು ಯೆಹೋವನಿಗೆ ವಿಶೇಷವಾಗಿ ಪವಿತ್ರವಾದದ್ದು, ಮತ್ತು ಅದರ ಹಕ್ಕುಗಳನ್ನು ಎತ್ತಿ ಹಿಡಿಯತಕ್ಕದ್ದು - ತಾರ್ಕಿಕ ಬುದ್ಧಿಯಿರುವ ಮಾನವರ ವಿರುದ್ಧವಾಗಿ ಮಾತ್ರವೇ ಅಲ್ಲ, ಆದರೆ ಮಾನವರ ಮೇಲೆ ಕ್ರೂರತೆಯಿಂದ ದಾಳಿ ನಡಿಸುವ ತಾರ್ಕಿಕ ಬುದ್ಧಿಯಿಲ್ಲದ ಪ್ರಾಣಿಗಳ ವಿರುದ್ಧವಾಗಿಯೂ ಅದನ್ನು ಮಾಡಬೇಕಿತ್ತು.

ಪ್ರಳಯದ ನಂತರದಲ್ಲಿ ಮಾನವರಿಗೆ ಭದ್ರತೆಯನ್ನು ಒದಗಿಸುವದಕ್ಕಾಗಿ, ಯೆಹೋವನು ಪ್ರಾಣಿಗಳಲ್ಲಿ ಮನುಷ್ಯನ ಕುರಿತು ಭಯವನ್ನು ಇಟ್ಟನು. ಆ ನಂತರ, ಮಾಣವರು ಪ್ರಳಯದ ಮುಂಚೆ ಮಾಡುತ್ತಿದ್ದ ಪ್ರಕಾರವಾಗಿ ಒಬ್ಬರನ್ನೊಬ್ಬರು ನಾಶಪಡಿಸಿಕೊಳ್ಳದ ಹಾಗೆ ಮಾನವರೊಳಗೆ ತನ್ನ ಕುರಿತಾದ ಭಯವನ್ನು ದೇವರು ಇಡಬೇಕಾಗಿ ಬಂದಿತ್ತು (6:11-13). ಈಗಿರುವ ಪ್ರಕಾರವೇ, ಆಗ ಸಹ ಕೊಲೆಗಾರರು ತಮ್ಮ ಸೃಷ್ಟಿಕರ್ತನಿಗೆ ಉತ್ತರವನ್ನು ಕೊಡಬೇಕಾಗುತ್ತದೆ ಎಂಬುದನ್ನು ತಿಳಿಯಬೇಕಿತ್ತು. ಜೊತೆಯ ಮಾನವ ಜೀವಿಯ ಮೇಲೆ ದಾಳಿಯನ್ನು ಮಾಡುವದೆಂದರೆ, ಒಂದು ಅರ್ಥದಲ್ಲಿ ದೇವರ ಮೇಲೆಯೇ ದಾಳಿ ಮಾಡುವಂತೆ ಆಗಿದೆ. ಸಕಲ ಜೀವವನ್ನು ಯೆಹೋವನಿಂದ ದೊರೆತಿರುವ ಒಂದು ವರವೆಂದು ಕಾಣತಕ್ಕದ್ದು. ಒಂದು ಮಾನವ ಜೀವಿತವನ್ನು ನಾಶಮಾಡುವದೆಂದರೆ ದೇವರ ಸ್ಥಾನವನ್ನು ವಹಿಸಿಕೊಂಡು ಆತನ ಸ್ವರೂಪದಲ್ಲಿ ನಿರ್ಮಿಸಲ್ಪಟ್ಟಿರುವವನನ್ನು ನಾಶಮಾಡಿದಂತೆಯೇ ಆಗಿರುತ್ತದೆ (9:6). ಜೀವವನ್ನು ಕೊಡಬಲ್ಲವನು ಕರ್ತನೊಬ್ಬನೇ ಆಗಿದ್ದಾನಾದ್ದರಿಂದ, ಅದನ್ನು ತೆಗೆದುಕೊಳ್ಳುವಂತೆ ಅಧಿಕಾರ ಕೊಡುವ ಹಕ್ಕು ಆತನಿಗೆ ಮಾತ್ರವೇ ಇರುತ್ತದೆ (ಯೋಬ 1:21).

ನಮಗೆ ಗೊತ್ತಿರುವ ಪ್ರಕಾರವಾಗಿ, ಪ್ರಳಯದ ಕಾಲಕ್ಕೆ ಮುಂಚೆ, ದೇವರು ಕೊಲೆಗಾರರಿಗೆ ಮರಣದಂಡನೆ ಆಗಬೇಕೆಂದು ದೇವರು ಅಧಿಕಾರವನ್ನು ಕೊಡಲಿಲ್ಲ; ಆದರೆ ಸಂಭಾವ್ಯವಾಗಿ ಕೊಲೆಯಾದವನ ಸಂಬಂಧಿಕರು, ಆರಂಭದಿಂದಲೂ ಈ ಪದ್ಧತಿಯನ್ನು ಅನುಸರಿಸುತ್ತಿದ್ದರೆಂದು ಕಾಣಿಸುತ್ತದೆ. ಕಾಯಿನನಿಗೆ ಹೇಬೆಲನನ್ನು ಕೊಂದದ್ದಕ್ಕಾಗಿ ಆತನ ಸಂಬಂಧಿಕರಲ್ಲಿ ಯಾರಾದರೂ ಮುಯ್ಯಿ ತೀರಿಸಿಕೊಳ್ಳುವರೆನೋ ಎಂದು ಹೆದರಿದ್ದನು (4:14). ಬಹುಶಃ, ಪ್ರಳಯಪೂರ್ವದ ಜಗತ್ತಿನಲ್ಲಿ ಯಾವದೇ ನಿಯತಕ್ರಮವಾದ ಅಥವಾ ಸ್ಥಿರವಾದ ನ್ಯಾಯಾಂಗ ವ್ಯವಸ್ಥೆಯು ಇರಲಿಲ್ಲ ಎಂದು ಕಾಣುತ್ತದೆ. ಕನಿಷ್ಠ, ಲೆಮೆಕನಾದರೋ ತಾನು ಒಬ್ಬ ಯುವಕನನ್ನು ಕೊಂದೆನು ಎಂಬುದನ್ನು ಮರೆಯಾಗಿಟ್ಟುಕೊಳ್ಳಲು ಪ್ರಯತ್ನಿಸಲಿಲ್ಲ. ವಾಸ್ತವಿಕದಲ್ಲಿ, ಆತನು ಆ ಕೊಲೆಯ ಬಗ್ಗೆ ತನ್ನ ಹೆಂಡತಿಯರ ಮುಂದೆ ಬಡಾಯಿ ಕೊಚ್ಚಿಕೊಂಡನು (4:23, 24). ಆತನಿಗೆ ಮನುಷ್ಯರ ಕೈಗಳಲ್ಲಿ ಯಾವದೇ ವಿಧವಾದ ನ್ಯಾಯತೀರ್ಪನ್ನಾಗಲಿ ಅಥವಾ ದಂಡನೆಯನ್ನಾಗಲಿ ಪಡೆದುಕೊಳ್ಳುತ್ತೇನೆಂಬ ಭಯವು ಸಂಪೂರ್ಣವಾಗಿ ಇರಲಿಲ್ಲ ಎಂದು ತೋರುತ್ತದೆ.

ಕಾಲವು ಗತಿಸಿದ ಹಾಗೆ, ಕೊಲೆ ಮತ್ತು ಹಿಂಸೆಗಳು ಪ್ರಳಯಕ್ಕೆ ಮುಂಚೆ ವ್ಯಾಪಕವಾಗಿರುವ ವೇಳೆ, ಅಪರಾಧಿಗಳನ್ನು ಹಿಡಿದು ಅವರ ಅಪರಾಧಗಳಿಗೆ ತಕ್ಕ

ದಂಡನೆಯನ್ನು ನೀಡುವಂತಹ ಯಾವದೇ ವ್ಯಕ್ತಿಗಳಾಗಲಿ ಅಥವಾ ಸರ್ಕಾರವಾಗಲಿ ಇರಲಿಲ್ಲ ಎಂಬುದು ಸ್ಪಷ್ಟವಾಗಿರುತ್ತದೆ. ದಂಡನೆಯನ್ನು ಎದುರಿಸುವದರ ಬದಲಾಗಿ, ಅವರು ತಮಗಾಗಿ ಹೆಸರು ಮಾಡಿಕೊಂಡರು[26] ಮತ್ತು ಆ ಸಮಾಜದಲ್ಲಿ ವೀರರೆಂದು ಕರೆಸಿಕೊಂಡರು (6:4). ದೇವರು ತನ್ನ ಅಂತಿಮ ಅಧಿಕಾರವನ್ನು ಒಂದೇ ಬಾರಿಗೆ ಶಾಶ್ವತವಾಗಿ ತೋರ್ಪಡಿಸುವ ಉದ್ದೇಶದಿಂದ, ನೋಹ ಮತ್ತು ಆತನ ಕುಟುಂಬವನ್ನು ಹೊರತು ಪಡಿಸಿ, ಮಿಕ್ಕ ಆ ಹಳೆಯ ಲೋಕದ ಮೇಲೆ ಪ್ರಳಯದ ಮುಖಾಂತರವಾಗಿ ಮರಣದಂಡನೆಯನ್ನು ಬರಮಾಡಿದ್ದನು.

ಪ್ರಳಯದ ನಂತರದಲ್ಲಿ, ಮಾನವ ಜೀವಿತವನ್ನು ಕಾಪಾಡುವದಕ್ಕೋಸ್ಕರ, ದೇವರು ನೋಹನಿಗೆ ಕೊಲೆಗಾರರ ವಿಷಯದಲ್ಲಿ ಕ್ರಮ ಕೈಗೊಳ್ಳುವದಕ್ಕೆ ಅಪ್ಪಣೆಗಳನ್ನು ಕೊಟ್ಟನು: "ನರಹತ್ಯವು ಸಹೋದರ ಹತ್ಯವಲ್ಲವೇ. ದೇವರು ಮನುಷ್ಯರನ್ನು ತನ್ನ ಸ್ವರೂಪದಲ್ಲಿಯೇ ಉಂಟುಮಾಡಿದನಾದ್ದರಿಂದ ಯಾರು ಮನುಷ್ಯನ ರಕ್ತವನ್ನು ಸುರಿಸುತ್ತಾರೋ ಅವರ ರಕ್ತವನ್ನು ಮನುಷ್ಯರೇ ಸುರಿಸುವರು" (9:6). ದೇವರ ಸ್ವರೂಪದಲ್ಲಿ ರೂಪಿಸಲ್ಪಟ್ಟವನನ್ನು ಉದ್ದೇಶಪೂರ್ವಕವಾಗಿ ಮತ್ತು ನಿರ್ದಯವಾಗಿ ಕೊಂದದ್ದಕ್ಕಾಗಿ, ಕೊಲೆಗಾರನು ತನ್ನ ಸ್ವಪ್ರಾಣವನ್ನು ಕಳೆದುಕೊಳ್ಳುವದೇ ಅವನಿಗಾಗುವ ದಂಡನೆಯಾಗಿತ್ತು. ಕೊಲೆಗಾರನಿಗೆ ಮರಣದಂಡನೆಯನ್ನು ವಿಧಿಸುವದಕ್ಕೆ ಯಾರಾದರೊಬ್ಬರು - ಅನ - ತರದಲ್ಲಿ ಒಂದು ಸ್ಥಾಪಿಸಲ್ಪಟ್ಟ ಸಂಸ್ಥೆ - ಅಗತ್ಯವಿತ್ತು. ಇದು ತನ್ನ ಅತ್ಯಂತ ಪ್ರಾಚೀನತೆಯ ರೂಪದಲ್ಲಿದ್ದ ನಾಗರಿಕ ಸರ್ಕಾರದ ಆರಂಭವಾಗಿತ್ತು. ಈ ವಿಧದಲ್ಲಿ, ದೇವರು ಒಬ್ಬ ಕೊಲೆಗಾರನಿಗೆ ಮರಣದಂಡನೆ ವಿಧಿಸುವ ಸರ್ವೋಚ್ಚ ಅಧಿಕಾರವನ್ನು ಮನುಷ್ಯನೊಂದಿಗೆ ಹಂಚಿಕೊಂಡನು. ಮಾನವ ಸರ್ಕಾರ ಮತ್ತು ಮರಣದಂಡನೆ ಜೊತೆಜೊತೆಯಾಗಿ ಸಾಗುತ್ತವೆ, ಪೌಲನು ಅದನ್ನು ರೋಮಾ 13:1-7ರಲ್ಲಿ ದೃಢಪಡಿಸಿದನು. ಸರ್ಕಾರಿ ಅಧಿಕಾರಿಗಳು ಕೆಟ್ಟತನವನ್ನು ನಡಿಸುವವರಿಗೆ ದಂಡನೆಯನ್ನು ನೀಡುವದಕ್ಕಾಗಿ ದೇವರಿಂದ ನೇಮಿಸಲ್ಪಟ್ಟವರಾಗಿದ್ದಾರೆ, ಮತ್ತು ಅವರು "ಸುಮ್ಮನೆ ಕೈಯಲ್ಲಿ ಕತ್ತಿಯನ್ನು ಹಿಡಿದಿಲ್ಲ."[27] ಖಂಡಿತವಾಗಿಯೂ, ಮಾನವ ಸರ್ಕಾರಕ್ಕೆ ಅದರದ್ದೇ ಆಗಿರುವ ಬಲಹೀನತೆಗಳಿರುವವು. ಕೆಲವು ಸಾರಿ ಆಳುವವರು ತಮ್ಮ ಅಧಿಕಾರವನ್ನು ದುರ್ಬಳಕೆ ಮಾಡಿಕೊಳ್ಳುತ್ತಾರೆ, ಮತ್ತು ತಾವು ಮಾಡದೆ ಇರುವ ಅಪರಾಧಗಳನ್ನು ಮಾಡಿದ್ದಾರೆಂಬ ತೀರ್ಪನ್ನು ನಿರಪರಾಧಿಗಳು ಪಡೆದುಕೊಳ್ಳುವ ಸಾಧ್ಯತೆಯಿರುತ್ತದೆ. ಅರಾಜಕತೆಗಿಂಥ (ಸರ್ಕಾವೇ ಇಲ್ಲದಿರುವಿಕೆ) ದೋಷಗಳಿರುವ ಒಂದು ಸರ್ಕಾರವಾಗಲಿ ಸಹ ಉತ್ತಮವಷ್ಟೆ, ಇಲ್ಲವಾದರೆ ಜನರು ತಮ್ಮ ಸ್ವಂತ ದೃಷ್ಟಿಯಲ್ಲಿ ಸರಿಯೆಂದು ತೋರಿದ್ದನ್ನು ಮಾಡುತ್ತಿರುತ್ತಾರಷ್ಟೆ (ನ್ಯಾಯಸ್ಥಾಪಕರು 17:6; 18:1; 19:1; 21:25).

*ಏರ್ಪಾಡು 4: ಭೂಮಿಯ ಮೇಲಿನ ಜೀವವನ್ನು ಸಂರಕ್ಷಿಸುವದಕ್ಕೆ ಮಾಡಿಕೊಂಡ ಒಂದು ಒಡಂಬಡಿಕೆ* (9:5-17). ದೇವರು ಪ್ರಳಯದ ಬಳಿಕ ಮನುಷ್ಯನೊಂದಿಗೆ ಮಾಡಿಕೊಂಡ ಒಡಂಬಡಿಕೆಯು ಅನೇಕ ಸಾರಿ "ನೋಹನ ಕಾಲದ ಒಡಂಬಡಿಕೆ" ಎಂದು ಕರೆಯಲ್ಪಡುತ್ತದೆ, ಆದರೆ ಅದು ಕೇವಲ ನೋಹ ಮತ್ತು ಆತನ ಕುಟುಂಬದವರೊಂದಿಗೆ ಮಾಡಿಕೊಂಡ ಒಡಂಬಡಿಕೆಯಾಗಿತ್ತು. ಅದು ಅವರ ಎಲ್ಲಾ "ಸಂತತಿಯವರ" ಸಂಗಡ (9:9) ಮತ್ತು "ತಲತಲಾಂತರಗಳಲ್ಲಿಯೂ" ಇರುವ ಸಂತತಿಯವರ (9:12) ಸಂಗಡ ಮಾಡಿಕೊಂಡ ಒಡಂಬಡಿಕೆಯಾಗಿತ್ತು. ಒಡಂಬಡಿಕೆಯು ಇಷ್ಟಕ್ಕೆ ನಿಲ್ಲಲಿಲ್ಲ; ಅದು "ಸಮಸ್ತ ಜೀವರಾಶಿಗಳನ್ನೂ" ಒಳಗೊಂಡಿತ್ತು (9:10, 12, 15). ಮಾನವ ಜೀವಿಗಳು, ಪಕ್ಷಿಗಳು, ಪ್ರಾಣಿಗಳು, ಮತ್ತು ಎಲ್ಲಾ ಕ್ರಿಮಿಕೀಟಗಳು ಸಹ ದೇವರ ವಾಗ್ದಾನದ ಫಲಾನುಭವಿಗಳಾಗಿದ್ದರು. ಪ್ರಳಯದಲ್ಲಿ ಬದುಕುಳಿದವರಿಗೆ, ದೇವರು ಅಂತ್ಯಕಾಳದ ತನಕವೂ ವಿಸ್ತರಿಸುವಂಥ ಷರತ್ತುರಹಿತ

ವಾಗ್ದಾನವೊಂದನ್ನು ಮಾಡಿದನು: ಆತನು ಇನ್ನೆಂದಿಗೂ ಭೂಮಿಯ ಮೇಲಿರುವ ಸಕಲ ಜೀವರಾಶಿಗಳನ್ನು ನಾಶಗೊಳಿಸುವಂಥ ಪ್ರಳಯವನ್ನು ಬರಮಾಡುವದಿಲ್ಲ. ಬಾನಿನಲ್ಲಿ ಅಶುಭಕರವಾದ ಬಿರುಗಾಳಿ ಮೇಘಗಳು ಕಾಣಿಸಿಕೊಂಡಾಗಲೆಲ್ಲಾ ಮಾನವರಲ್ಲಿ ನಿರಾಶೆಯುಂಟಾಗದಂತೆ ತಡೆಯುವದಕ್ಕಾಗಿ ಇದಾಗಿತ್ತು.

ಸಾಮಾನ್ಯವಾಗಿ, ಪ್ರಾಚೀನ ಜಗತ್ತಿನಲ್ಲಿ ಒಡಂಬಡಿಕೆಗಳು ಮಾಡಲ್ಪಡುತ್ತಿದ್ದ ವೇಳೆ, ಎರಡೂ ಪಕ್ಷದವರ ಮೇಲೆ ಒಪ್ಪಂದದ ಷರತ್ತುಗಳನ್ನು ಹೇರಲಾಗುತ್ತಿತ್ತು. ಹೇಗೂ, ದೇವರು ಈ ಒಡಂಬಡಿಕೆಗೆ ಸ್ವತಃ ತನ್ನೊಬ್ಬನನ್ನೇ ಹೊಣೆಗಾರನನ್ನಾಗಿ ಮಾಡಿಕೊಂಡನು, ಅದು ಶಾಶ್ವತವಾಗಿ ಉಳಿಯುವಂತಾಗುವದಕ್ಕೆ ಮಾನವರ ಮೇಲೆ ಯಾವದೇ ಷರತ್ತುಗಳನ್ನು ಹಾಕಲಿಲ್ಲ. ಆತನು ಮಾನವರೊಂದಿಗೆ ಮಾಡಿದ ಈ “ಶಾಶ್ವತವಾದ ಒಡಂಬಡಿಕೆ” (9:16) ಕಾಪಾಡಿಕೊಳ್ಳುವನೆಂಬುದಕ್ಕೆ ಖಾತರಿಯಾಗಿ, ದೇವರು ಮಾನವರಿಗೆ ಕಾಣಿಸಬಹುದಾದ ಒಂದು ಮುಗಿಲು ಬಿಲ್ಲಿನ “ಗುರುತು” ನೀಡಿದನು. ಆತನ ವಾಗ್ದಾನದ ನೆರವೇರಿಸುವನೆಂಬುದಕ್ಕೆ ಸಾಕ್ಷಿಯಾಗಿ ಇರಲಿತ್ತು (9:12-17). ಮೇಘದಲ್ಲಿನ ಯೆಹೋವನು ಇಟ್ಟ ಬಿಲ್ಲು ಒಂದು ಪಾಪಭರಿತ ಲೋಕದ ಮೇಲೆ ನ್ಯಾಯತೀರ್ಪನ್ನು ಬರಮಾಡಿದ ನಂತರದಲ್ಲಿ ದೇವರ ಕೃಪೆಯ ಒಂದು ಗುರುತು ಆಗಿ ಮಾರ್ಪಟ್ಟಿತ್ತು; ಅದು ಭವಿಷ್ಯದ ಪೀಳಿಗೆಗಳಿಗೆ ಯೆಹೋವನು ಮತ್ತೆಂದಿಗೂ ಭೂಮಿಯ ಮೇಲಿನ ಜೀವರಾಶಿಯನ್ನು ವಿಶ್ವವ್ಯಾಪಿ ಪ್ರಳಯದ ಮೂಲಕ ನಾಶಮಾಡುವದಿಲ್ಲ ಎಂಬ ನಿರೀಕ್ಷೆಯನ್ನು ಕೊಡುವದಾಗಿತ್ತು.

ಎಲ್ಲಾ ಜನರು ಪಾಪ ಮಾಡುತ್ತಾರೆಂಬ ವಾಸ್ತವಾಂಶದ ಹೊರತಾಗಿಯೂ (ರೋಮಾ 3:23), ದೇವರು ತನ್ನ ಸೃಷ್ಟಿಯನ್ನು ಆಶೀರ್ವದಿಸಬೇಕೆಂದು ಮತ್ತು ನಮ್ಮ ಮೇಲೆ ತನ್ನ ವರಗಳನ್ನು ಸುರಿಸಬೇಕೆಂದು ಹಂಬಲಿಸುತ್ತಾನೆ (ನೋಡಿರಿ ಮತ್ತಾಯ 5:45; 7:11). ನಮ್ಮನ್ನು ಪ್ರೀತಿಸುವಾತನಿಗೆ, ನಮ್ಮನ್ನು ಆರೈಕೆ ಮಾಡುವಾತನಿಗೆ, ಕಾಪಾಡುವಾತನಿಗೆ, ಮತ್ತು ನಮಗಾಗಿ ಏರ್ಪಾಡುಗಳನ್ನು ಮಾಡುವವನಿಗೆ ನಾವು ತೋರಿಸಬಹುದಾದ ಏಕೈಕ ಸಮರ್ಪಕ ಪ್ರತಿಕ್ರಿಯೆ ಎಂದರೆ, ಆತನನ್ನು ಪ್ರೀತಿಸಿ ಆತನಿಗೆ ವಿಧೇಯರಾಗುವದೇ ಆಗಿರುತ್ತದೆ.

## ಮುಗಿಲು ಬಿಲ್ಲಿನಲ್ಲಿ ಪುನರಾಶ್ವಾಸನೆ (9:12-17)

ದೇವರ ಜನರು ಮಹಾ ರೋದನೆಯಲ್ಲಿದ್ದಾಗ ಮತ್ತು ಕೆಲವರು ನಂಬಿಕೆಯನ್ನು ಕಳೆದುಕೊಳ್ಳುವ ಹಂತದಲ್ಲಿದ್ದಾಗ, ಯಾಹುವು ಎರಡು ಸಾರಿ ತನ್ನನ್ನು ಮುಗಿಲು ಬಿಲ್ಲನ್ನು ಬಳಸಿ ಪ್ರಕಟಿಸಿಕೊಂಡನು. ಬಾಧೆಗಳಲ್ಲಿರುವ ತನ್ನ ಜನರು ತಾನು ಆಕಾಶ ಮತ್ತು ಭೂಮಿಗಳ ಸರ್ವಶಕ್ತನಾದ ಒಡೆಯನು, ಈಗಲೂ ಸಿಂಹಾಸನಾರೂಢನು ಮತ್ತು ಇತಿಹಾಸವನ್ನು ಹತೋಟಿಯಲ್ಲಿ ಇಟ್ಟುಕೊಂಡಿರುವವನು ಆಗಿದ್ದಾನೆ ಎಂದು ಅರಿತುಕೊಳ್ಳಬೇಕೆಂದು ಬಯಸಿದನು.

*ಯೆಹೋವನ ಮಹಿಮೆ: ಯೆಹೆಜ್ಕೇಲನ ಪುಸ್ತಕದಲ್ಲಿ ಮುಗಿಲು ಬಿಲ್ಲು.* ಮುಗಿಲು ಬಿಲ್ಲಿನ ಈ ಸಾಂಕೇತಿಕ ಬಳಕೆಯ ಮೊದಲ ಉದಾಹರಣೆಯು ಸುಮಾರು ಕ್ರಿ.ಪೂ. 598ರ ವೇಳೆ, ಬಾಬೆಲಿನ ಸೆರೆವಾಸದ ಎರಡನೆಯ ಹಂತದಲ್ಲಿ ಸಂಭವಿಸಿತ್ತು, ಆಗ ಯೆಹೆಜ್ಕೇಲ, ಅರಸನಾದ ಯೆಹೋವಾಖೀನ ಮತ್ತು ಆತನ ಕುಟುಂಬದವರು, ಹಾಗೂ ಯೆರೂಸಲೇಮಿನ ಹತ್ತು ಸಾವಿರ ಪ್ರಜೆಗಳು ಸೆರೆಯಾಳುಗಳಾಗಿ ಬಾಬೆಲಿಗೆ ಕರೆದೊಯ್ಯಲ್ಪಟ್ಟರು (2 ಅರಸು 24:8-17). ಐದು ವರ್ಷಗಳ ಬಳಿಕ (ಸುಮಾರು ಕ್ರಿ.ಪೂ. 593), ದೇವರು ಯೆಹೆಜ್ಕೇಲನನ್ನು ಪ್ರವಾದನಾತ್ಮಕ ಸೇವೆಗಾಗಿ ಕರೆದನು. ಯೆಹೆಜ್ಕೇಲನು ತನ್ನೊಂದಿಗೆ ಕೆಬಾರ ನದಿಯ ಹತ್ತಿರ

ಸೆರೆಯಾಳುಗಳಾಗಿ ವಾಸಿಸುತ್ತಿದ್ದವರನ್ನು ಎಚ್ಚರಿಸಿ ಯೆಹೂದದ ಜನರನು ತಮ್ಮ ವಿಗ್ರಹಾರಾಧನೆ ಮತ್ತು ದುಷ್ಟತನಗಳನ್ನು ಬಿಟ್ಟು ಪಶ್ಚಾತ್ತಾಪ ಪಡದಿದ್ದರೆ ಯೆರೂಸಲೇಮ್ ಪಟ್ಟಣ ಹಾಗೂ ದೇವಾಲಯಗಳು ನಾಶಗೊಳಿಸಲ್ಪಡುವವು ಎಂಬುದಾಗಿ ಹೇಳಬೇಕಾಗಿತ್ತು. ಆತನು ಸೆರೆಯಾಳುಗಳ ಮಧ್ಯದಲ್ಲಿ ಅನುಭವ ಮಾಡಿದ ಈ ಮೊದಲನೆಯ ದರ್ಶನವನ್ನು ಬರೆದಿಡುವ ವೇಳೆ, ಪ್ರವಾದಿಯು ಹೀಗೆ ಹೇಳಿದನು,

> ... ಆಕಾಶವು ಒಡೆದು ನನಗೆ ದೇವದರ್ಶನಗಳು ಉಂಟಾದವು ... ಇಗೋ, ನಾನು ನೋಡಿದೆನು; ಬಡಗಲಿಂದ ಬಿರುಗಾಳಿಯು ಬೀಸಿತು, ಎಡೆಬಿಡದೆ ಝುಗಝುಗಿಸುವ ಜ್ವಾಲೆಯುಳ್ಳ ಮಹಾಮೇಘವು ಕಾಣಿಸಿತು. ಅದರ ಸುತ್ತಲು ಮಿಂಚು ಹೊಳೆಯಿತು, ಅದರ ನಡುವೆ, ಆ ಜ್ವಾಲೆಯ ಮಧ್ಯೆ, ಸುವರ್ಣಕಾಂತಿಯಂಥ ಕಾಂತಿಯು ಉಂಟಾಯಿತು. ಅದರ ಮಧ್ಯದೊಳಗಿಂದ ನಾಲ್ಕು ಜೀವಿಗಳ ಆಕಾರಗಳು ಕಂಡುಬಂದವು; ಅವುಗಳ ರೂಪವು ಮನುಷ್ಯರೂಪದಂತಿತ್ತು ... ಇಗೋ, ನಾನು ಆ ಜೀವಿಗಳನ್ನು ನೋಡಲಾಗಿ ಒಂದೊಂದು ಕಡೆಯಲ್ಲಿಯೂ ಜೀವಿಗಳ ಪಕ್ಕಗಳಲ್ಲಿ ನೆಲಸೋಕುವ ಚಕ್ರಗಳು ಕಾಣಿಸಿದವು ... ಭೀಕರವಾದ ಮಂಜುಗಡ್ಡೆಯಂತೆ ಥಳಿಥಳಿಸುವ ಒಂದು ತರದ ನೆಲಗಟ್ಟು ಆ ಜೀವಿಗಳ ತಲೆಯ ಮೇಲ್ಗಡೆ ಹಾಕಿತ್ತು. ಅದರ ಕೆಳಗೆ ಜೀವಿಗಳ ರೆಕ್ಕೆಗಳು ಮಟ್ಟಸವಾಗಿ ಚಾಚಲ್ಪಟ್ಟು ಒಂದಕ್ಕೊಂದು ತಗಲುತ್ತಿದ್ದವು; ಇದಲ್ಲದೆ ಒಂದೊಂದು ಜೀವಿಗೆ ದೇಹವನ್ನು ಮುಚ್ಚಿಕೊಳ್ಳುವ ಎರಡೆರಡು ರೆಕ್ಕೆಗಳಿದ್ದವು. ಅವು ಮುಂದರಿಯುವಾಗ ಅವುಗಳ ರೆಕ್ಕೆಗಳ ಶಬ್ದವು ಜಲಪ್ರವಾಹದ ಘೋಷದಂತೆ, ಸರ್ವಶಕ್ತನ ಧ್ವನಿಯ ಹಾಗೆ, ಆರ್ಭಟಿಸುವ ಸೈನ್ಯದ ಕೋಲಾಹಲದೋಪಾದಿಯಲ್ಲಿ ನನಗೆ ಕೇಳಿಸಿತು; ಅವು ನಿಂತಾಗ ರೆಕ್ಕೆಗಳನ್ನು ಮುದುರಿಕೊಂಡವು. ಅವುಗಳ ತಲೆಗಳ ಮೇಲ್ಗಡೆಯ ನೆಲಗಟ್ಟಿನ ಮೇಲಿಂದ ಒಂದು ಧ್ವನಿಯು ಕಿವಿಗೆ ಬಿತ್ತು. ಜೀವಿಗಳು ನಿಂತಾಗ ರೆಕ್ಕೆಗಳನ್ನು ಮುದುರಿಕೊಂಡವು. ಅವುಗಳ ತಲೆಗಳ ಮೇಲ್ಗಡೆಯ ನೆಲಗಟ್ಟಿನ ಮೇಲೆ ಇಂದ್ರ ನೀಲಮಣಿಯಂತೆ ಹೊಳೆಯುವ ಸಿಂಹಾಸನಾಕಾರವು ಕಾಣಿಸಿತು; ಅದರ ಮೇಲೆ ನರರೂಪದಂಥ ರೂಪವುಳ್ಳ ಒಬ್ಬಾತನು ಆಸೀನನಾಗಿದ್ದನು. ಸೊಂಟದ ಹಾಗೆ ತೋರುವ ಆತನ ಮಧ್ಯಭಾಗದಿಂದ ಮೇಲ್ಗಡೆ ಸುವರ್ಣವು ಥಳಥಳಿಸುತ್ತದೋ, ಬೆಂಕಿಯು ಆ ರೂಪದೊಳಗೆಲ್ಲಾ ಪ್ರಜ್ವಲಿಸುತ್ತದೋ ಎಂಬಂತಿರುವ ಅದ್ಭುತಕಾಂತಿಯನ್ನು ಕಂಡೆನು; ಸೊಂಟದ ಹಾಗೆ ತೋರುವ ಆತನ ಮಧ್ಯಭಾಗದಿಂದ ಕೆಳಗಡೆ ಬೆಂಕಿಯು ಉರಿಯುತ್ತದೋ ಎಂಬಂತಿರುವ ಮಹಾತೇಜಸ್ಸನ್ನು ನೋಡಿದೆನು; ಮತ್ತು ಪ್ರಕಾಶವು ಆತನನ್ನು ಸುತ್ತಿಕೊಂಡಿತ್ತು. *ಮಳೆಗಾಲದಲ್ಲಿ ಮೇಘಮಂಡಲದೊಳಗೆ ಬಿಲ್ಲು ಹೊಳೆಯುವಂತೆ ಆತನ ಸುತ್ತಣ ಪ್ರಕಾಶವು ಹೊಳೆಯುತ್ತಿತ್ತು.* ಹೀಗೆ ಯೆಹೋವನ ಮಹಿಮಾದ್ಭುತ ದರ್ಶನವು ಆಯಿತು. ಇದು ಕಣ್ಣಿಗೆ ಬೀಳಲು ನಾನು ಅಡ್ಡಬಿದ್ದು ಮಾತಾಡುವಾತನ ವಾಣಿಯನ್ನು ಕೇಳಿದೆನು (ಯೆಹೆಜ್ಕೇಲ 1:1-28; ಒತ್ತಿ ಹೇಳಿದ್ದು ನನ್ನದು).

ಯೆರೂಸಲೇಮಿನಲ್ಲಿ ಉಳಿದಿದ್ದ ಇಸ್ರಾಯೇಲ್ಯರು ಆತ್ಮೀಕವಾಗಿ ಭ್ರಮಣೆಗೊಂಡಿದ್ದರು; ಅವರು ದೇವಾಲಯದಲ್ಲೆಲ್ಲಾ ವಿಗ್ರಹಗಳನ್ನು ಮತ್ತು ಬೇರೆ ದೇವರಿಗಳಿಗೆ ಕಟ್ಟಿದ ಗುಡಿಗಳನ್ನು ತುಂಬಿಸಿಕೊಂಡಿದ್ದಾಗ್ಯೂ, ಅದು ಈಗಲೂ ಯೆಹೋವನ ವಾಸಸ್ಥಳವೆಂದು ಮನವರಿಕೆಗೊಂಡಿದ್ದರು. ಆತನು ತನ್ನ ದೇವಾಲಯವನ್ನಾಗಲಿ ಅಥವಾ ಯೆಹೂದಿ ದೇಶವನ್ನಾಗಲಿ ನಾಶವಾಗುವದಕ್ಕೆ ಅನುಮತಿಸುವನು ಎಂಬುದನ್ನು ಅವರು ನಂಬಲಿಲ್ಲ.

ಈ ಸ್ವ-ಭ್ರಮಣೆಯ ಜೊತೆಯಲ್ಲಿ, ಈಗಲೂ ಯೆರೂಸಲೇಮಿನಲ್ಲಿದ್ದ ಜನರು ಕ್ರಿ.ಪೂ. 605 ಮತ್ತು 598ರಲ್ಲಿ ಬಾಬೆಲಿಗೆ ಸೆರೆಯಾಳುಗಳಾಗಿ ಒಯ್ಯಲ್ಪಟ್ಟಿದ್ದ ತಮ್ಮ ಸಹ ದೇಶದವರನ್ನು

ಅಪಹಾಸ್ಯ ಮಾಡುತ್ತಿದ್ದರು. ಈ ಸೆರೆಯಾಳುಗಳು ಈಗ ವಾಗ್ದಾನ ದೇಶದಲ್ಲಿ ಇರುವದಿಲ್ಲವಾದ್ದರಿಂದ ಯೆಹೋವನಿಂದ ಬಹಳ ದೂರದಲ್ಲಿರುತ್ತಾರೆಂದು ಹೇಳಿಕೊಳ್ಳುತ್ತಿದ್ದರು (ಯೆಹೆಜ್ಕೇಲ 11:15).

ಯೆಹೆಜ್ಕೇಲನ ಪುಸ್ತಕದಲ್ಲಿರುವ ಆರಂಭಿಕ ದರ್ಶನವು ಅವರ ಯೋಚನೆಯು ಬಹಳ ತಪ್ಪಾಗಿತ್ತೆಂಬುದನ್ನು ತಿಳಿಯಪಡಿಸುತ್ತದೆ. ದೇವರು ಸೆರೆಯಲ್ಲಿರುವ ತನ್ನ ಜನರಿಗೆ ಸಂತೈಸುವಂತಹ ಪ್ರವಾದನಾತ್ಮಕ ನುಡಿಗಳನ್ನು ಒದಗಿಸುತ್ತಲೇ ಇದ್ದನಾದರೂ, ಆತನು ಈಗ ದೇವಾಲಯದಲ್ಲಿರುವ ಒಡಂಬಡಿಕೆಯ ಮಂಜೂಷದ ಮೇಲಿರುವ ಕೆರೂಬಿಯರ ಸಿಂಹಾಸನದ ಮೇಲೆ ಕೂತಿರಲಿಲ್ಲ (ನೋಡಿರಿ 2 ಸಮುವೇಲ 6:2). ಅತ್ಯಂಥ ಸಾಂಕೇತಿಕ ವಾಕ್ಯಭಾಗವೊಂದರಲ್ಲಿ, ಯಾಹುವು ವಿಶ್ವದ ಒಬ್ಬ ಮಹಾ ಅರಸನು ಎಂಬುದಾಗಿ, ಅನಂತರದಲ್ಲಿ ಕೆರೂಬಿಯರೆಂದು ಗುರುತಿಸಲ್ಪಟ್ಟಂಥ ಜೀವಿಗಳಿಂದ ತಳ್ಳಿಕೊಂಡು ಹೋಗಲ್ಪಡುವ ಚಕ್ರಗಳನ್ನೊಳಗೊಂಡ ಪರಲೋಕದ ಸಿಂಹಾಸನಾಕಾರದ ರಥದ ಮೇಲೆ ಕೂತವನಾಗಿ ಚಿತ್ರಿಸಲ್ಪಟ್ಟಿರುತ್ತಾನೆ (ಯೆಹೆಜ್ಕೇಲ 1:15-26; 10:15, 20). ಪ್ರವಾದಿಗೆ ಇನ್ನಷ್ಟು ದರ್ಶನಗಳನ್ನು ಪ್ರಕಟಗೊಳಿಸಲ್ಪಟ್ಟವು, ಜನರು ನಿರ್ಭಯವಾಗಿ ನಡಿಸುತ್ತಿದ್ದ ದುಷ್ಟತನ ಹಾಗೂ ವಿಗ್ರಹಾರಾಧನೆಯ ಕಾರಣದಿಂದಾಗಿ "ಯೆಹೋವನ ಮಹಿಮಾದ್ಭುತವು" (ಅತನ ಸಾನಿಧ್ಯವು) ದೇವಾಲಯವನ್ನು ಮತ್ತು ಯೆರೂಸಲೇಮನ್ನು ಬಿಟ್ಟು ಹೋಗುತ್ತಿದೆ ಎಂಬುದನ್ನು ಹೆಚ್ಚೆಚ್ಚು ಸ್ಪಷ್ಟಗೊಳಿಸಿತ್ತು (ಯೆಹೆಜ್ಕೇಲ 8:3-6; 9:3-7; 10:1-5, 15-20; 11:22-25).

"ಯೆಹೋವನ ಮಹಿಮಾದ್ಭುತವು" ಅಂತಿಮವಾಗಿ ಪಟ್ಟಣವನ್ನು ಬಿಟ್ಟು ಹೋಗಿತ್ತು ಮತ್ತ ಯೆರೂಸಲೇಮಿನಿಂದ ಪೂರ್ವದ ದಿಕ್ಕಿಗೆ ಸುಮಾರು ಒಂದು ಮೈಲಿ ದೂರದ ಎಣ್ಣೇಮರಗಳ ಗುಡ್ಡದ ಮೇಲೆ ಹೊಯ್ದಾಡುವದಕ್ಕೆ ಮುನ್ನ, ಕೆಬಾರ ನದಿಯ ಬಳಿಯಲ್ಲಿ ವಾಸಿಸುತ್ತಿದ್ದ ಸೆರೆಯಾಳುಗಳಿಗೆ ಯೆಹೋವನು ಆ ದೂರದ ದೇಶದಲ್ಲಿ ಸಹ ತಾನೇ ಅವರ ಆತ್ಮೀಕ "ಪವಿತ್ರಾಲಯ" (מִקְדָּשׁ, *ಮಿಕ್ದಾದಾಶ್*; ಯೆಹೆಜ್ಕೇಲ 11:16) ಆಗಿದ್ದೇನೆಂದು ಪ್ರಕಟಗೊಳಿಸಿದನು. ಸರಳವಾಗಿ ಹೇಳುವದಾದರೆ, ಬಾಬೆಲಿನ ಸೆರೆವಾಸದಲ್ಲಿದ್ದ ಜನರು, ಯೆರೂಸಲೇಮಿನಲ್ಲಿದ್ದ ದುರಹಂಕಾರದ ಯೆಹೂದ್ಯರು ಭಾವಿಸಿಕೊಂಡ ರೀತಿಯಲ್ಲಿ ಯೆಹೋವನಿಂದ ದೂರವಾಗಿರಲಿಲ್ಲ, ಕೈಬಿಡಲ್ಪಟ್ಟವರಾಗಿ ತೊರೆಯಲ್ಪಟ್ಟಿರಲಿಲ್ಲ. ವಿಪರ್ಯಾಸವೆಂದರೆ, "ಯೆಹೋವನ ಮಹಿಮಾದ್ಭುತವು" ಯೆರೂಸಲೇಮನ್ನು ಬಿಟ್ಟು ಹೋಗಿತ್ತು.

ದೇವರ ಹಂಬಲಿಕೆಯು ತನ್ನ ಜನರನು ಪಶ್ಚಾತ್ತಾಪ ಪಟ್ಟು, ತಮ್ಮ ಹೃದಯಗಳನ್ನು ಮತ್ತು ಜೀವಿತಗಳನ್ನು ಆತನ ಕಡೆಗೆ ತಿರುಗಿಸಿಕೊಳ್ಳಲು ಎಂದಾಗಿತ್ತು. ಆತನು ಈಗಲೂ ಅವರನ್ನು ಆಶೀರ್ವದಿಸಿ ಕ್ಷಮಿಸುವನು, ಮತ್ತು ಒಂದು ದಿನ ಅವರು ತಮ್ಮ ಸ್ವದೇಶಕ್ಕೆ ಹಿಂದಿರುಗುವರು ಎಂಬುದನ್ನು ಅವರು ತಿಳಿದುಕೊಳ್ಳುವ ಅಗತ್ಯವಿತ್ತು (ಯೆಹೆಜ್ಕೇಲ 11:17-20). ಅವರಲ್ಲಿ ಅನೇಕರು ನಿರಾಶೆಗೊಂಡಿರುತ್ತಾರೆಂಬುದು ಯೆಹೋವನಿಗೆ ಅರ್ಥವಾಗಿತ್ತು, ಮತ್ತು ಆತನು ಅವರಿಗೆ ಭವಿಷ್ಯತ್ತಿಗಾಗಿ ಒಂದು ಹೊಸ ನಿರೀಕ್ಷೆಯನ್ನು ಕೊಡುವದಕ್ಕೆ ಬಯಸಿದ್ದನು. ಯೆಹೆಜ್ಕೇಲ ಮೊದಲ ದರ್ಶನವು ಬರಲಿರುವ ಸಂಗತಿಗಳಿಗೆ ಒಂದು ಪೂರ್ವಗಾಮಿಯಾಗಿ ವಿಶೇಷ ಪ್ರಾಮುಖ್ಯತೆಯನ್ನು ಹೊಂದಿತ್ತು.

ಚಲಿಸುವ ಸಿಂಹಾಸನ-ರಥ, "ಯೆಹೋವನ ಮಹಿಮಾದ್ಭುತ," ಮತ್ತು ಮಿಂಚುಗಳು ಕಾಣಿಸಿಕೊಳ್ಳುವಿಕೆಯನ್ನು (ಯೆಹೆಜ್ಕೇಲ 1:4, 13, 14) ಕೇವಲ ದೇವರಿಂದ ಬಂದ ನ್ಯಾಯತೀರ್ಪಿನ ಸಂದೇಶ ಎಂಬುದಾಗಿ ಮಾತ್ರವೇ ವ್ಯಾಖ್ಯಾನಿಸಿರಬಹುದಾಗಿದೆ; ಮತ್ತು ಇದು

ನಿರೀಕ್ಷೆ ಕಳೆದುಕೊಂಡಿದ್ದ ಇಸ್ರಾಯೇಲ್ಯರಲ್ಲಿ ಮತ್ತಷ್ಟು ನಿರಾಶೆಯನ್ನುಂಟು ಮಾಡಿರಬಹುದಾಗಿದೆ. ಹೇಗೂ, ಯೆಹೋವನ ಮಹಿಮೆಯ ದರ್ಶನದ ಮುಕ್ತಾಯದಲ್ಲಿ, ಪ್ರವಾದಿಯು ಆತನ ಸುತ್ತಲು ಅದ್ಭುತಕಾಂತಿಯನ್ನು ಕಂಡನು (ಯೆಹೆಜ್ಕೇಲ 1:27) ಇದು ಭಯಾನಕ ದೃಶ್ಯವಾಗಿರಬಹುದಾದರೂ, ಯೆಹೆಜ್ಕೇಲನು ಸುತ್ತಿಕೊಂಡಿದ್ದ ಕಾಂತಿಯ ಕಡೆಗೆ ಪುನಃ ನೋಡಿದನು ಮತ್ತು ಹೀಗೆ ವರದಿ ಮಾಡಿದನು, "ಮಳೆಗಾಲದಲ್ಲಿ ಮೇಘಮಂಡಲದೊಳಗೆ ಬಿಲ್ಲು ಹೊಳೆಯುವಂತೆ ಆತನ ಸುತ್ತಣ ಪ್ರಕಾಶವು ಹೊಳೆಯುತ್ತಿತ್ತು …" (ಯೆಹೆಜ್ಕೇಲ 1:28). ಅಗ್ನಿಮಯವಾದ ಕಾಂತಿಯು ತನ್ನ ಜನರ ಪಾಪದ ವಿರುದ್ಧವಾಗಿದ್ದ ಯೆಹೋವನ ಕೋಪಕ್ಕಿಂತಲೂ ಹೆಚ್ಚಿನದನ್ನು ಪ್ರತಿನಿಧಿಸುವದಾಗಿತ್ತು; ಅದರ ಸುತ್ತಲು ಮುಗಿಲು ಬಿಲ್ಲು ಇತ್ತೆಂಬುದು ನ್ಯಾಯತೀರ್ಪಿನ ನಡುವೆಯೂ ಆತನ ಕರುಣೆ ಮತ್ತು ಕೃಪೆಗಳನ್ನು ಸೂಚಿಸುವದಾಗಿತ್ತು. ದೇವರಿಂದ ಬಂದ ಈ ಸುಂದರವಾದ ಸಂದೇಶವು, ಪ್ರಳಯದ ಬಳಿಕ ನೋಹ ಹಾಗೂ ಆತನ ಕುಟುಂಬದವರಿಗೆ ನೀಡಿದ್ದ ರೀತಿಯಲ್ಲಿಯೇ ಈ ಸೆರೆಯಾಳುಗಳಿಗೆ ನಿರೀಕ್ಷೆಯನ್ನು ನೀಡಿತ್ತು.

*ದೇವರ ಸಿಂಹಾಸನದ ಮಹಿಮೆ: ಪ್ರಕಟನೆ ಪುಸ್ತಕದಲ್ಲಿ ಮುಗಿಲು ಬಿಲ್ಲು.* ಯೆಹೆಜ್ಕೇಲನ ಕಾಲದ ನಂತರದಲ್ಲಿ ಮುಗಿಲು ಬಿಲ್ಲಿನ ಗುರುತು ಪುನಃ ಬೈಬಲಿನ ಇತಿಹಾಸದಲ್ಲಿ ಕಾಣಿಸಿಕೊಂಡಿದ್ದು ಯಾವಾಗ ಎಂದರೆ, ರೋಮನ್ ಸಾಮ್ರಾಜ್ಯದಲ್ಲಿ ಕ್ರೈಸ್ತರು ಭಯಂಕರವಾದ ಹಿಂಸೆಯನ್ನು ಅನುಭವಿಸುತ್ತಿದ್ದ ಕಾಲದಲ್ಲಿಯೇ ಆಗಿದೆ. ರೋಮ್ ನಗರವು "ಬಾಬೆಲೆಂಬ ಮಹಾನಗರಿ, ಭೂಮಿಯಲ್ಲಿರುವ ಜಾರಸ್ತ್ರೀಯರಿಗೂ ಅಸಹ್ಯವಾದ ಕಾರ್ಯಗಳಿಗೂ ತಾಯಿ" ಆಗಿ ಮಾರ್ಪಟ್ಟಿತ್ತು. ರಾಜಧಾನಿಯನ್ನು "ದೇವಜನರ ರಕ್ತವನ್ನೂ ಯೇಸುವಿಗೋಸ್ಕರ ಸಾಕ್ಷಿ ಕೊಟ್ಟು ಹತರಾದವರ ರಕ್ತವನ್ನೂ ಕುಡಿದು ಮತ್ತಳಾಗಿರುವ" ಒಬ್ಬ ಜಾರಸ್ತ್ರೀಗೆ ಹೋಲಿಕೆ ಮಾಡಲಾಗಿತ್ತು (ಪ್ರಕಟನೆ 17:5, 6). ಇದು ದೇವರ ಜನರಿಗೆ ಕ್ರಿ.ಶ. ಪ್ರಥಮ ಶತಮಾನದ ಅಂತ್ಯದ ಸಮೀಪದಲ್ಲಿ ಅತ್ಯಂಥ ಕಠಿಣವಾದ ಕಾಲವಾಗಿತ್ತು. ಸೈತಾನ ಮತ್ತು ಆಥನ ಸಾಧನಗಳು[28] ಸೇರಿಕೊಂಡು ಸಭೆಯನ್ನು ನಾಶಗೊಳಿಸುವಲ್ಲಿ ಯಶಸ್ವಿಯಾಗುವರೆನೋ ಎಂಬಂತೆ ಕಾಣಿಸುತ್ತಿತ್ತು. ಕ್ರೈಸ್ತರು ರೋಮಿನ ಆರ್ಥಿಕ, ರಾಜಕೀಯ, ಮತ್ತು ಮಿಲಿಟರಿ ಶಕ್ತಿಯ ಮುಂದೆ ಅಸಹಾಯಕವೆಂಬಂತೆ ಕಂಡಿತ್ತು.

ಈ ಸಂಕಷ್ಟದಿಂದ ಕೂಡಿದ ಸಮಯಗಳ ನಡುವೆ, ಅಪೊಸ್ತಲನಾದ ಯೋಹಾನನಿಗೆ ಆಸ್ಯ ಸೀಮೆಯಲ್ಲಿರುವ (ಆಧುನಿಕ ಪಶ್ಚಿಮ ತುರ್ಕಿ) ಏಳು ಸಭೆಗಳಿಗೆ ಪತ್ರಗಳನ್ನು ಬರೆಯುವಂತೆ ಅಪ್ಪಣೆಯಾಯಿತು, ಕರ್ತನು ಅವನಿಗೆ ಕಾಣುವಂತೆ ಅನುಮತಿಸಿದ ದರ್ಶನಗಳನ್ನು ತಿಳಿಯಪಡಿಸಬೇಕೆಂದು ಹೇಳಲಾಯಿತು (ಪ್ರಕಟನೆ 1:11). ಆತನ ಈ ದರ್ಶನಗಳ ದಾಖಲೆಯಾಗಿರುವ ಪ್ರಕಟನೆ ಪುಸ್ತಕವು, ಯೇಸು ಕ್ರಿಸ್ತನ ವಿಷಯವಾಗಿ ಆತನು ನಮ್ಮನ್ನು ಪ್ರೀತಿಸುವವನು ಮತ್ತು ತನ್ನ ರಕ್ತದ ಮೂಲಕ ನಮ್ಮನ್ನು ನಮ್ಮ ಪಾಪಗಳಿಂದ ಬಿಡಿಸಿದವನು ಎಂಬುದಾಗಿ ಬಣ್ಣಿಸುವದರೊಂದಿಗೆ ಆರಂಭವಾಗುತ್ತದೆ (ಪ್ರಕಟನೆ 1:5).

ಪ್ರಕಟನೆ 1:13-18ರಲ್ಲಿ ಯೇಸುವು ದೈವಿಕ ಮನುಷ್ಯಕುಮಾರನು ಎಂಬ ಬಣ್ಣನೆಯು ಯೆಹೆಜ್ಕೇಲ 1ನೇ ಮತ್ತು ದಾನಿಯೇಲ 7ನೇ ಅಧ್ಯಾಯಗಳಲ್ಲಿರುವ ದೇವರ ಕುರಿತಾದ ಅತ್ಯಂಥ ಸಾಂಕೇತಿಕ ಚಿತ್ರಣದಿಂದ ತೆಗೆದುಕೊಳ್ಳಲಾಗಿರುತ್ತವೆ. ಈ ನಿರೀಕ್ಷೆಭರಿತ ದೃಶ್ಯವು ಯೇಸುವನ್ನು "ಸತ್ತವನಾಗಿದ್ದ" ಆದರೆ "ಯುಗಯುಗಾಂತರಗಳಲ್ಲಿಯೂ ಬದುಕುವವನಾಗಿದ್ದಾನೆ" ಎಂಬುದಾಗಿ ಬಣ್ಣಿಸುತ್ತದೆ. ಅದೊಂದು ಭಯ ಹುಟ್ಟಿಸುವ ಮತ್ತು ಅತ್ಯಮೋಘವಾದ ದೃಶ್ಯವಾಗಿತ್ತು, ಯಾಕೆಂದರೆ ಆರಂಭಿಕ ದರ್ಶನವು ಪುನರುತ್ತಾನಗೊಂಡ ಕರ್ತನನ್ನು ದೇವರು,

ವಿಶ್ವದ ನಿತ್ಯನಾದ ನ್ಯಾಯಾಧಿಪತಿ, ಆತನ ಕೈಗಳಲ್ಲಿ "ಮರಣದ ಮತ್ತು ಪಾತಾಳದ ಬೀಗದ" ಇರುತ್ತವೆ ಎಂಬ ಮಾತುಗಳಲ್ಲಿ ಚಿತ್ರಿಸಲ್ಪಟ್ಟಿರುತ್ತಾನೆ (ಪ್ರಕಟನೆ 1:18).

ಸಭೆಗಳಿಗೆ ಬರೆಯಲ್ಪಟ್ಟ ಪತ್ರಗಳು ಪ್ರಶಂಸೆಗಳ ಮತ್ತು ಎಚ್ಚರಿಕೆಗಳ, ಆಶೀರ್ವಾದಗಳ ಮತ್ತು ಬುದ್ಧಿವಾದಗಳ ಮಿಶ್ರಣವನ್ನು ಒಳಗೊಂಡಿರುತ್ತವೆ. ಯಾರು "ಸಾಯಬೇಕಾದರೂ ನಂಬಿಗಸ್ತರಾಗಿ" ಇರುತ್ತಾರೋ ಅವರಿಗೆ ನಿರೀಕ್ಷೆಯನ್ನು ಎತ್ತಿ ಹಿಡಿಯಲಾಗಿರುತ್ತದೆ: ಅವರು "ಜೀವವೆಂಬ ಜಯಮಾಲೆ" ಹೊಂದುವರು (ಪ್ರಕಟನೆ 2:10). ಯೇಸುವು "ಜಯಹೊಂದಿ ನನ್ನ ತಂದೆಯೊಡನೆ ಸಿಂಹಾಸನದಲ್ಲಿ ಕೂತುಕೊಂಡ" ಪ್ರಕಾರವೇ, ಜಯ ಹೊಂದುವವರಿಗೆ ಯೇಸುವಿನ ಸಂಗಡ ಆತನನ "ಸಿಂಹಾಸನದಲ್ಲಿ ಕೂತುಕೊಳ್ಳುವಂತೆ" ಅನುಗ್ರಹವಾಗುವುದು (ಪ್ರಕಟನೆ 3:21). ಹೇಗೂ, ವಿಮುಖರಾಗಿ ಸುಳ್ಳು ಸಿದ್ಧಾಂತ, ವಿಗ್ರಹಾರಾಧನೆ, ಅಥವಾ ಜಾರತ್ವದ ಕಡೆಗೆ ತಿರುಗಿಕೊಂಡವರಿಗೆ "ಪಶ್ಚಾತ್ತಾಪ ಪಡಿರಿ," ಇಲ್ಲವಾದರೆ ಕರ್ತನು "[ತನ್ನ] ಬಾಯಕತ್ತಿಯಿಂದ ಅವರ ಮೇಲೆ ಯುದ್ಧಮಾಡುವದಕ್ಕೆ" ಬೇಗನೆ ಬರುವನು ಎಂಬುದಾಗಿ ಕರೆ ಕೊಡಲಾಯಿತು (ಪ್ರಕಟನೆ 2:16).

ಕರ್ತನು ಈ ಮುಂಚೆ ತನ್ನ ಜನರಿಗೆ ನುಡಿದ ಸಂತೈಸುವ ಮಾತುಗಳ ಹೊರತಾಗಿಯೂ (ನೋಡಿರಿ ಪ್ರಕಟನೆ 1:5, 6), ಹಿಂಸೆಗೊಳಗಾಗಿದ್ದ ಮತ್ತು ನಿರಾಶೆಗೊಂಡಿದ್ದ ಕ್ರೈಸ್ತರಿಗೆ ನಿರೀಕ್ಷೆಯನ್ನು ಹುಟ್ಟಿಸುವದಕ್ಕೆ ಇನ್ನಷ್ಟು ಮಾತುಗಳ ಅಗತ್ಯವಿತ್ತು. ದೇವರ ಜನರು ಬಹಳ ತುಳಿತಕ್ಕೊಳಗಾಗಿದ್ದರು. ಬಾಹ್ಯ ಸೂಚನೆಗಳು ಕೆಟ್ಟದ್ದಕ್ಕೆ ಜಯವಾಗಬಹುದು, ಮತ್ತು ಯೇಸು ಕ್ರಿಸ್ತನಲ್ಲ, ಆದರೆ ಬದಲಾಗಿ ಚಕ್ರವರ್ತಿಯೇ ನಿಜವಾದ ಕರ್ತನು, ದೇವರು, ಹಾಗೂ ರಕ್ಷಕನು ಆಗಿರುತ್ತಾನೆಂಬಂತೆ ಕಾಣಿಸುತ್ತಿತ್ತು - ಆದರೆ ತಾನು ಈಗಲೂ ಸಿಂಹಾಸನದಲ್ಲಿದ್ದಾನೆ ಮತ್ತು ಲೋಕದ ಪರಿಸ್ಥಿತಿಯ ಮೇಲೆ ಹತೋಟಿ ಹೊಂದಿರುತ್ತಾನೆಂಬುದನ್ನು ಕ್ರೈಸ್ತರು ತಿಳಿದುಕೊಳ್ಳಬೇಕೆಂದು ದೇವರು ಬಯಸಿದನು.

ರೋಮನ್ ಸಾಮ್ರಾಜ್ಯದ ಮೇಲೆ ನ್ಯಾಯತೀರ್ಪು ಬರುವದಿತ್ತು. ಯುಗಾಂತ್ಯದ ವೇಳೆ, ಮೃಗಕ್ಕೆ ಮತ್ತು ಆತನ ಪ್ರತಿಮೆಗೆ ನಮಸ್ಕರಿಸಿದವರೆಲ್ಲರೂ, ನಂಬಿಕೆಯಿಲ್ಲದ ದುಷ್ಟರ ಸಮೇತವಾಗಿ ನ್ಯಾಯತೀರ್ಪಿನ ಮಹಾ ಸಿಂಹಾಸನದ ಮುಂದೆ ನಿಲ್ಲುವರು ಮತ್ತು ಅಗ್ನಿಯ ಕೆರೆಯಲ್ಲಿ ಹಾಕಲ್ಪಟ್ಟು ನಿತ್ಯವಾದ ದಂಡನೆಗೆ ಗುರಿಯಾಗುವರು (ಪ್ರಕಟನೆ 19:19, 20; 20:11-15). ಹೇಗೂ, ಈ ನ್ಯಾಯತೀರ್ಪುಗಳ ಕುರಿತು ಚರ್ಚಿಸುವದಕ್ಕೆ ಮುಂಚೆ, ದೇವರು ಮತ್ತೊಂದು ದಾರಿಯನ್ನು ಅನುಸರಿಸಿದನು. ಅವರಿಗಿದ್ದ ಅತ್ಯಧಿಕವಾದ ಹೋರಾಟಗಳ ನಡುವೆ, ಈ ಕ್ರೈಸ್ತರು, ಯೋಹಾನನ ಸಮೇತವಾಗಿ ಅದೃಶ್ಯವಾದದ್ದನ್ನು ನೋಡುವದು ಅಗತ್ಯವಿತ್ತು. ವೃದ್ಧನಾಗಿದ್ದ ಅಪೊಸ್ತಲನಾದ ಯೋಹಾನನು ವಾಸ್ತವಿಕದಲ್ಲಿ ಒಂದು ದರ್ಶನದಲ್ಲಿ ಪರಲೋಕದ ಜಯಭರಿತ ಚಿತ್ರಣಗಳನ್ನು ನೀಡುವದಕ್ಕೆ ಶಕ್ತನಾಗಿದ್ದನು; ಆತನು ಯಾವ ಸಭೆಗಳಿಗೆ ಬರೆದನೋ ಆ ಪ್ರತಿಯೊಂದು ಸಭೆಯು ಕರ್ತನು ಆತನಿಗೆ ಏನನ್ನು ಪ್ರಕಟಗೊಳಿಸಿದ್ದನು ಎಂಬುದರ ಕುರಿತಾದ ಆತನ ಸಾಕ್ಷಿಯನ್ನು ಓದುವದಾಗಿತ್ತು.

ಆಸ್ಯ ಸೀಮೆಯಲ್ಲಿದ್ದ ಏಳು ಸಭೆಗಳಿಗೆ ಪತ್ರಗಳನ್ನು ಬರೆದಾದ ತಕ್ಷಣದಲ್ಲಿಯೇ (ಪ್ರಕಟನೆ 2:1-3:22), ಯೋಹಾನನು ಪರಲೋಕದೊಳಗೆ ಮತ್ತು ಸಿಂಹಾಸನದ ಮೇಲೆ ಕೂತಿದ್ದಾತನನ್ನು ನೋಡುವಂತೆ ಅನುಮತಿಸಲ್ಪಟ್ಟನು (ಪ್ರಕಟನೆ 4:2-8), ಆತನನ್ನು ಯೆಶಾಯ 6:1-3; ಯೆಹೆಜ್ಕೇಲ 1:26-28; ಮತ್ತು ದಾನಿಯೇಲ 7:9, 10ರಲ್ಲಿನ ಸಾಂಕೇತಿಕ ಭಾಷೆಯಲ್ಲಿ ಬಣ್ಣಿಸಲಾಗಿರುತ್ತದೆ. ಅಲ್ಲದೆ ಆತನು ಸಿಂಹಾಸನದ ಮೇಲೆ ಕೂತಿದ್ದ ಯಜ್ಞದ ಕುರಿಯಾದಾತನನ್ನು, ಪರಲೋಕದ ಸಮೂಹದವರೆಲ್ಲಾ ತಂದೆಯಾದ ದೇವರನ್ನೂ

ದೇವಕುಮಾರನನ್ನೂ ಆರಾಧಿಸಿ ಸ್ತುತಿಸುವದನ್ನು ಸಹ ನೋಡಿದನು (ಪ್ರಕಟನೆ 4:9-11; 5:9-14). ಯೆಹೆಜ್ಕೇಲ 1ನೇ ಅಧ್ಯಾಯದಲ್ಲಿರುವಂತೆಯೇ, ಪರಿಸ್ಥಿತಿಗಳು ಮೇಲ್ನೋಟಕ್ಕೆ ತೋರಿದ ರೀತಿಯಲ್ಲಿಯೇ ಇರಲಿಲ್ಲ. ಆಕಾಶ ಮತ್ತು ಭೂಮಿಗಳ ನಿಜವಾದ ಅರಸನು ಹಾಗೂ ಪ್ರಭುವು, ನೆಬೂಕದ್ನೆಚ್ಚರ ಅಥವಾ ಕೈಸರನ ರೀತಿಯಲ್ಲಿ ಭೂಮಿಯಲ್ಲಿರುವ ಅಕ್ಷರಶಃ ಸಿಂಹಾಸನವೊಂದರ ಮೇಲೆ ಕೂತಿರುವ ತಾತ್ಕಾಲಿಕ ಅರಸನಂತೆ ಆಗಿರುವದಿಲ್ಲ. ಅಧಿಕಾರದಲ್ಲಿರುವವನು ಕರ್ತನಾ ದೇವರು; ಮತ್ತು ಆತನ ಮಗನಾದ ಯೇಸು ಕ್ರಿಸ್ತನು ಆತನ ಸಂಗಡ ಪರಲೋಕದಲ್ಲಿ ಸಿಂಹಾಸನಾರೂಢನಾಗಿರುತ್ತಾನೆ, ಯೋಹಾನನು ಹೀಗೆ ಬರೆದನು,

> … ನಾನು ನೋಡಿದಾಗ ಪರಲೋಕದಲ್ಲಿ ತೆರೆದಿದ್ದ ಬಾಗಿಲು ಕಾಣಿಸಿತು; ಮತ್ತು ನನ್ನ ಸಂಗಡ ತುತೂರಿಯು ಮಾತಾಡುತ್ತದೋ ಎಂಬಂತೆ ನಾನು ಮೊದಲು ಕೇಳಿದ್ದ ವಾಣಿಯು ಕೇಳಿಸಿತು. ಇಲ್ಲಿಗೆ ಏರಿ ಬಾ, ಮುಂದೆ ಆಗಬೇಕಾದವುಗಳನ್ನು ನಿನಗೆ ತೋರಿಸುವೆನು ಎಂದು ಹೇಳಿತು. ಕೂಡಲೆ ದೇವರಾತ್ಮವಶನಾದೆನು. ಆಗ ಇಗೋ, ಪರಲೋಕದಲ್ಲಿ ಒಂದು ಸಿಂಹಾಸನವಿತ್ತು; ಸಿಂಹಾಸನದ ಮೇಲೆ ಒಬ್ಬನು ಕೂತಿದ್ದನು. ಕೂತಿದ್ದವನು ಕಣ್ಣಿಗೆ ಸೂರ್ಯಕಾಂತ ಪದ್ಮರಾಗ ಮಣಿಗಳಂತೆ ಕಾಣುತ್ತಿದ್ದನು. *ಸಿಂಹಾಸನದ ಸುತ್ತಲು ಪಚ್ಚೆಯಂತೆ ತೋರುತ್ತಿದ್ದ ಮುಗಿಲುಬಿಲ್ಲು ಇತ್ತು*. ಇದಲ್ಲದೆ ಸಿಂಹಾಸನದ ಸುತ್ತಲು ಇಪ್ಪತ್ತುನಾಲ್ಕು ಸಿಂಹಾಸನಗಳಿದ್ದವು; ಆ ಸಿಂಹಾಸನಗಳ ಮೇಲೆ ಶುಭ್ರವಸ್ತ್ರ ಧರಿಸಿಕೊಂಡಿದ್ದ ಇಪ್ಪತ್ತುನಾಲ್ಕು ಮಂದಿ ಹಿರಿಯರು ಕೂತಿದ್ದರು; ಅವರ ತಲೆಗಳ ಮೇಲೆ ಚಿನ್ನದ ಕಿರೀಟಗಳಿದ್ದವು. ಸಿಂಹಾಸನದೊಳಗಿಂದ ಮಿಂಚುಗಳೂ ವಾಣಿಗಳೂ ಗುಡುಗುಗಳೂ ಹೊರಡುತ್ತವೆ. ಅದರ ಮುಂದೆ ದೇವರ ಏಳು ಆತ್ಮಗಳನ್ನು ಸೂಚಿಸುವ ಏಳು ದೀಪಗಳು ಉರಿಯುತ್ತಿದ್ದವು. ಇದಲ್ಲದೆ ಸಿಂಹಾಸನದ ಮುಂದೆ ಸ್ಫಟಿಕಕ್ಕೆ ಸಮಾನವಾದ ಗಾಜಿನ ಸಮುದ್ರವಿದ್ದ ಹಾಗೆ ತೋಚಿತು. ಸಿಂಹಾಸನದ ಮಧ್ಯದಲ್ಲಿ ಅದರ ನಾಲ್ಕು ಕಡೆಗಳಲ್ಲಿ ನಾಲ್ಕು ಜೀವಿಗಳಿದ್ದವು; ಅವುಗಳಿಗೆ ಹಿಂದೆ ಮುಂದೆ ತುಂಬಾ ಕಣ್ಣುಗಳಿದ್ದವು. ಮೊದಲನೆಯ ಜೀವಿಯು ಸಿಂಹದಂತಿತ್ತು; ಎರಡನೆಯ ಜೀವಿಯು ಹೋರಿಯಂತಿತ್ತು; ಮೂರನೆಯ ಜೀವಿಯ ಮುಖವು ಮನುಷ್ಯನ ಮುಖದಂತಿತ್ತು; ನಾಲ್ಕನೆಯ ಜೀವಿಯು ಹಾರುವ ಗರುಡ ಪಕ್ಷಿಯಂತಿತ್ತು. ಆ ನಾಲ್ಕು ಜೀವಿಗಳೊಳಗೆ ಒಂದೊಂದಕ್ಕೆ ಆರಾರು ರೆಕ್ಕೆಗಳಿದ್ದವು; ಆ ಜೀವಿಗಳಿಗೆ ಸುತ್ತಲೂ ಒಳಗೂ ತುಂಬಾ ಕಣ್ಣುಗಳಿದ್ದವು. ಆ ಜೀವಿಗಳು ಹಗಲಿರುಳು ವಿಶ್ರಮಿಸಿಕೊಳ್ಳದೆ - ದೇವರಾದ ಕರ್ತನು ಪರಿಶುದ್ಧನು ಪರಿಶುದ್ಧನು ಪರಿಶುದ್ಧನು; ಆತನು ಸರ್ವಶಕ್ತನು, ವರ್ತಮಾನ ಭೂತ ಭವಿಷ್ಯತ್ಕಾಲಗಳಲ್ಲಿರುವಂಥವನು ಎಂದು ಹೇಳುತ್ತವೆ. ಯುಗಯುಗಾಂತರಗಳಲ್ಲಿಯೂ ಜೀವಿಸುವವನಾಗಿ ಸಿಂಹಾಸನದ ಮೇಲೆ ಕೂತಿರುವಾತನಿಗೆ ಆ ನಾಲ್ಕು ಜೀವಿಗಳು ಪ್ರಭಾವಮಾನ ಕೃತಜ್ಞತಾಸ್ತುತಿಗಳನ್ನು ಸಲ್ಲಿಸುವಾಗ್ಗೆ ಆ ಇಪ್ಪತ್ತುನಾಲ್ಕು ಮಂದಿ ಹಿರಿಯರು ಸಿಂಹಾಸನದ ಮೇಲೆ ಕೂತಾತನ ಪಾದಕ್ಕೆ ಬಿದ್ದು ತಮ್ಮ ಕಿರೀಟಗಳನ್ನು ಸಿಂಹಾಸನದ ಮುಂದೆ ಹಾಕಿ - ಕರ್ತನೇ, ನಮ್ಮ ದೇವರೇ, ನೀನು ಪ್ರಭಾವ ಮಾನ ಬಲಗಳನ್ನು ಹೊಂದುವದಕ್ಕೆ ಯೋಗ್ಯನಾಗಿದ್ದೀ; ಸಮಸ್ತವನ್ನು ಸೃಷ್ಟಿಸಿದಾತನು ನೀನೇ; ಎಲ್ಲವು ನಿನ್ನ ಚಿತ್ತದಿಂದಲೇ ಇದ್ದವು, ನಿನ್ನ ಚಿತ್ತದಿಂದಲೇ ನಿರ್ಮಿತವಾದವು ಎಂದು ಹೇಳುತ್ತಾ ಯುಗಯುಗಾಂತರಗಳಲ್ಲಿಯೂ ಜೀವಿಸುವಾತನನ್ನು ಆರಾಧಿಸುತ್ತಾರೆ (ಪ್ರಕಟನೆ 4:1-11; ಒತ್ತಿ ಹೇಳಿದ್ದು ನನ್ನದು).

ಯೋಹಾನನ ಪ್ರೋತ್ಸಾಹಕರವಾದ ದರ್ಶನ ಮುಖ್ಯ ಅಂಶವು “ಸಿಂಹಾಸನದ ಸುತ್ತಲು ಪಚ್ಚೆಯಂತೆ ತೋರುತ್ತಿದ್ದ ಮುಗಿಲುಬಿಲ್ಲು ಇತ್ತು” ಎಂಬುದೆ (ಪ್ರಕಟನೆ 4:3). ಸಾಂಕೇತಿಕತೆಯು ಶಕ್ತಿಶಾಲಿಯಾಗಿತ್ತು. ನೋಹ ಮತ್ತು ಆತನ ಕುಟುಂಬದವರು ಪ್ರಳಯದಿಂದ ಧ್ವಂಸಗೊಂಡಿದ್ದ

ಲೋಕವನ್ನು ನೋಡುವದಕ್ಕೆ ನಾವೆಯಿಂದ ಹೊರಗೆ ಬಂದ ವೇಳೆ, ಅವರಿಗೆ ಒಂದು ಹೊಸ ಆರಂಭದ, ಭೂಮಿಯ ಮೇಲೆ ಜೀವವು ಮತ್ತು ದೇವರ ಆಶೀರ್ವಾದದ ಮುಂದುವರೆಯುವಿಕೆ ನಿರೀಕ್ಷೆಯನ್ನು ಅವರಿಗೆ ಒಂದು ಒಡಂಬಡಿಕೆಯ ಮುಗಿಲು ಬಿಲ್ಲು ನೀಡಿತ್ತು. ಅದೇ ರೀತಿಯಲ್ಲಿಯೇ, ಯೆರೂಸಲೇಮಿನಲ್ಲಿದ್ದ ಮಿಕ್ಕ ದೇವರ ಜನರು ಪಶ್ಚಾತ್ತಾಪ ಪಡದಿದ್ದಲ್ಲಿ ಅವರ ಮೇಲೆ ಸಂಪೂರ್ಣ ವಿನಾಶವು ಬರಲಿದೆ ಎಂಬುದಾಗಿ ಬಾಬೆಲಿನಲ್ಲಿ ಸೆರೆಯಾಳಾಗಿದ್ದ ಯೆಹೂದ್ಯರಿಗೆ ತಿಳಿಸಲ್ಪಟ್ಟ ವೇಳೆ, ದೇವರ ಸಿಂಹಾಸನದ ಸುತ್ತಲು ಮುಗಿಲು ಬಿಲ್ಲು ಇದ್ದ ದರ್ಶನವು ಯೆಹೆಜ್ಕೇಲನಿಗೆ ಆದದ್ದು ಸೆರೆವಾಸದ ನಂತರದ ಒಂದು ಹೊಸ ಆರಂಭವು ಸಿಕ್ಕುವದೆಂಬ ನಿರೀಕ್ಷೆಗೆ ಸಂಕೇತವಾಗಿತ್ತು. ದೇವರು ತನ್ನ ಜನರನ್ನು ವಾಗ್ದಾನ ದೇಶಕ್ಕೆ ಪುನಃ ಕರೆದುಕೊಂಡು ಬರುವನು ಮತ್ತು ಹಿಂದೆ ಆಶೀರ್ವದಿಸಿದ್ದ ರೀತಿಯಲ್ಲಿಯೇ ಅವರನ್ನು ಆಶೀರ್ವದಿಸುವನು ಎಂಬುದರ ಪುನರಾಶ್ವಾಸನೆಯನ್ನು ಅವರಿಗೆ ನೀಡಿತ್ತು.

ಪ್ರಥಮ ಶತಮಾನದ ಅಂತ್ಯದ ವೇಳೆಯಲ್ಲಿ, ಕೈಸರನು ತಾನೇ "ಕರ್ತನು, ದೇವರು, ಮತ್ತು ರಕ್ಷನು" ಎಂಬುದಾಗಿ ಹೇಳಿಕೊಂಡನು, ಯೋಹಾನನ ದರ್ಶನವು ಆ ವಿಧವಾದ ಕೊಚ್ಚಿಕೊಳ್ಳುವಿಕೆಯಲ್ಲಿರುವ ಸುಳ್ಳನ್ನು ಬಯಲುಗೊಳಿಸಿತು ಮತ್ತು ನಿಜವಾದ "ಕರ್ತನು, ದೇವರು, ಮತ್ತು ರಕ್ಷಕನು" ಯೇಸು ಕ್ರಿಸ್ತನೇ ಆಗಿದ್ದು ಸಿಂಹಾಸನಾರೂಢನಾಗಿರುತ್ತಾನೆ ಎಂಬುದನ್ನು ಜ್ಞಾಪಿಸುವದಾಗಿತ್ತು. ಯೋಹಾನನು ಪರಲೋಕದ ಕಡೆಗೆ ದೃಷ್ಟಿಸಿದಾಗ ಮತ್ತು ಸಿಂಹಾನದ ಸುತ್ತಲು ಮುಗಿಲು ಬಿಲ್ಲು ಇರುವದನ್ನು ಕಂಡಾಗ, ದೇವರ ಜನರಿಗೆ ನ್ಯಾಯತೀರ್ಪಿನ ನಡುವೆಯೂ ಕೃಪೆಯು ಇರುವದೆಂಬದನ್ನು ಆ ಚಿತ್ರಣವು ಸೂಚಿಸುವದಾಗಿತ್ತು. ಅದು ಅವರಿಗೆ ಭವಿಷ್ಯಕ್ಕಾಗಿ ನಿರೀಕ್ಷೆಯನ್ನು ನೀಡಿತ್ತು - ಈ ಜೀವಿತದಲ್ಲಿ ಅಲ್ಲದಿದ್ದರೂ, ನೂತನ ಆಕಾಶ ಮತ್ತು ನೂತನ ಭೂಮಿಯಲ್ಲಿನ ನಿತ್ಯಜೀವಕ್ಕಾಗಿ ಇರುವ ನಿರೀಕ್ಷೆಯಂತೂ ಆಗಿತ್ತು. ಅಲ್ಲಿ ದೇವರು ಅವರ ಕಣ್ಣೀರನ್ನೆಲ್ಲಾ ಒರಸುವನು, ಮತ್ತು ರಕ್ಷಣೆ ಹೊಂದಿರುವವರು ಇನ್ನು ಮೇಲೆ ಮರಣವನ್ನಾಗಲಿ, ದುಃಖವನ್ನಾಗಲಿ, ಅಳುವದನ್ನಾಗಲಿ, ಅಥವಾ ನೋವನ್ನಾಗಲಿ ಅನುಭವಿಸುವದಿಲ್ಲ; ಯಾಕೆಂದರೆ ಆತನು ಸಮಸ್ತವನ್ನು ನೂತನಗೊಳಿಸುವನು (ಪ್ರಕಟನೆ 21:1-5). ನಿತ್ಯತ್ವದಲ್ಲಿ, ಕ್ರಿಸ್ತನಲ್ಲಿ ನೂತನ ಸೃಷ್ಟಿಯು ತನ್ನ ಅಂತಿಮ ನೆರವೇರಿಕೆಯನ್ನು ಕಾಣುವುದು (2 ಕೊರಿಂಥ 5:17), ಮತ್ತು ಸಕಲ ಯುಗಗಳಲ್ಲಿ ವಿಮೋಚಿಸಲ್ಪಟ್ಟವರು ಮುಗಿಲು ಬಿಲ್ಲು ಸುತ್ತುವರೆಯಲ್ಪಟ್ಟಿರುವ ಸಿಂಹಾಸನದ ಮುಂದೆ ಒಟ್ಟಾಗಿ ಕೂಡಿಸಲ್ಪಡುವರು, ದೇವರನ್ನು ಮತ್ತು ಯಜ್ಞದ ಕುರಿಯಾದಾತನನ್ನು (ಯೇಸು) ಸದಾಕಾಲಕ್ಕೂ ಸ್ತುತಿಸುವರು.

### "ಶಾಶ್ವತವಾದ ಒಡಂಬಡಿಕೆ" (9:16)

ಇಬ್ರಿಯ ಪದಗುಚ್ಛ בְּרִית עוֹלָם (*ಬೆರಿಥ ಒಲಾಮ*), ಎಂಬುದು "ಶಾಶ್ವತವಾದ ಒಡಂಬಡಿಕೆ" ಅಥವಾ "ಆಜೀವ ಒಡಂಬಡಿಕೆ" ಎಂದು ಅನುವಾದಿಸಲ್ಪಟ್ಟಿದ್ದು, ಇದು ಹಳೆಯ ಒಡಂಬಡಿಕೆಯಲ್ಲಿ ಹದಿನಾರು ಸಾರಿ ಕಾಣಿಸಿಕೊಳ್ಳುತ್ತದೆ. ನಾವು ಈ ಪದಗುಚ್ಛದ ಬಳಕೆಯ ಸಮೀಕ್ಷೆಯನ್ನು ಮಾಡುವೆವು ಮತ್ತು ಬಳಿಕ *ಒಲಾಮನ* ವಿವಿಧ ಅರ್ಥಗಳನ್ನು ಆಲೋಚಿಸಲಿದ್ದೇವೆ.

ಒಡಂಬಡಿಕೆಗಳು ಎರಡು ಪಕ್ಷಗಳ ಮೇಲೆ ನಿರ್ಬಂಧಿಸಲ್ಪಟ್ಟಿರುತ್ತವಾದರೂ, ದೇವರು ಕೆಲವು ಸಾರಿ ಒಂದು ಪ್ರತಿಜ್ಞೆಯನ್ನು ನೆರವೇರಿಸುವದು ಸಂಪೂರ್ಣ ಆತನ ಮೇಲೆ ಆಧಾರವಾಗಿರುವಂತೆ ತನ್ನನ್ನು ಹೊಣೆಗಾರನನ್ನಾಗಿ ಮಾಡಿಕೊಂಡನು. ಉದಾಹರಣೆಗೆ,

ನೋಹನ ಸಂಗಡ ದೇವರು ಮಾಡಿಕೊಂಡ ಒಡಂಬಡಿಕೆಯು ಒಂದೇ ಒಂದು ಷರತ್ತು ಹೊಂದಿತ್ತು: ಏನೆಂದರೆ ದೇವರು ಇಡೀ ಭೂಮಿಯ ಮೇಲೆ ಪುನಃ ಎಂದಿಗೂ ಪ್ರಳಯವನ್ನುಂಟು ಮಾಡುವದಿಲ್ಲ.

> ಆ ಪ್ರತಿಜ್ಞೆ ಯಾವದೆಂದರೆ - ಇನ್ನು ಮೇಲೆ ಎಲ್ಲಾ ಪ್ರಾಣಿಗಳು ಪ್ರಳಯದಿಂದ ನಾಶವಾಗುವದಿಲ್ಲ; ಇನ್ನು ಮುಂದೆ ಭೂಮಿಯನ್ನು ಹಾಳು ಮಾಡುವ ಪ್ರಳಯವು ಬರುವದೇ ಇಲ್ಲ ... ಆ ಬಿಲ್ಲು ಮೇಘಗಳಲ್ಲಿ ಕಾಣಿಸುವಾಗ ನಾನು ಅದನ್ನು ನೋಡಿ ದೇವರಾದ ನನಗೂ ಭೂಮಿಯ ಮೇಲಿರುವ ಎಲ್ಲಾ ಜೀವಜಂತುಗಳಿಗೂ ಆದ *ಶಾಶ್ವತವಾದ ಒಡಂಬಡಿಕೆ*ಯನ್ನು ಜ್ಞಾಪಕಮಾಡಿಕೊಳ್ಳುವೆನು (9:11-16; ಒತ್ತಿ ಹೇಳಿದ್ದು ನನ್ನದು).

ಅನೇಕ ತಲೆಮಾರುಗಳ ತರುವಾಯ, ದೇವರು ಅಬ್ರಹಾಮನೊಂದಿಗೆ ಒಂದು ಒಡಂಬಡಿಕೆಯನ್ನು ಮಾಡಿಕೊಂಡನು. ಇದು ಅಬ್ರಹಾಮನ ಕುಟುಂಬವು ಸುನ್ನತಿಯನ್ನು ಮಾಡಿಸಿಕೊಳ್ಳುವದರ ಮೇಲೆ ನಿರ್ಬಂಧಿತವಾಗಿತ್ತು, ಇದು ಅವರು ದೇವರ ಜನರು ಎಂಬುದಕ್ಕೆ ಒಂದು ಶಾರೀರಿಕ ಗುರುತು ಆಗಿತ್ತು.

> ನಿನಗೂ ನಿನ್ನ ಸಂತತಿಗೂ ದೇವರಾಗಿರುವೆನೆಂದು ನಾನು ನಿನಗೋಸ್ಕರವೂ ನಿನ್ನ ಸಂತತಿಯ ಎಲ್ಲಾ ತಲಾಂತರಗಳಿಗೋಸ್ಕರವೂ ಮಾಡಿಕೊಂಡ ನನ್ನ *ಒಡಂಬಡಿಕೆಯನ್ನು* ಸ್ಥಿರಪಡಿಸುವೆನು ... ನಿನ್ನ ಮನೆಯಲ್ಲಿ ಹುಟ್ಟಿದವರಿಗೂ ನೀನು ಕ್ರಯಕ್ಕೆ ತೆಗೆದುಕೊಂಡವರಿಗೂ ತಪ್ಪದೆ ಸುನ್ನತಿಯಾಗಬೇಕು. ಹೀಗೆ ನಾನು ಮಾಡುವ ನಿಬಂಧನೆಯ ಗುರುತು ನಿಮ್ಮ ಶರೀರದಲ್ಲೇ ಇದ್ದು *ಶಾಶ್ವತವಾದ ಒಡಂಬಡಿಕೆಯನ್ನು* ಸೂಚಿಸುವದು (17:7-13; ಒತ್ತಿ ಹೇಳಿದ್ದು ನನ್ನದು).

ದೇವರ ಒಡಂಬಡಿಕೆಯು ವಾಗ್ದಾನದ ಮೂಲಕ ಹುಟ್ಟಿದ ಮಗನ ಮೂಲಕ ಹುಟ್ಟಿದ ಸಂತತಿಯವರಿಗೆ ವಿಸ್ತರಿಸುವುದು:

> ದೇವರು - ಹಾಗಲ್ಲ, ನಿನ್ನ ಪತ್ನಿಯಾದ ಸಾರಳಲ್ಲಿಯೇ ನಿನ್ನಿಂದ ಮಗನು ಹುಟ್ಟುವನು. ಅವನಿಗೆ ಇಸಾಕನೆಂದು ಹೆಸರಿಡಬೇಕು. ಅವನ ಸಂಗಡ ನನ್ನ *ಒಡಂಬಡಿಕೆ*ಯನ್ನು ಸ್ಥಾಪಿಸಿಕೊಳ್ಳುವೆನು; ಅದು ಅವನ ಸಂತತಿಯವರಲ್ಲಿಯೂ *ಶಾಶ್ವತವಾಗಿರಬೇಕು* (17:19; ಒತ್ತಿ ಹೇಳಿದ್ದು ನನ್ನದು).

ದೇವರು ವಾಗ್ದಾನ ದೇಶವನ್ನು ಕೊಡುವನೆಂಬ "ಕಾಯಿದೆ"ಯು ಅಬ್ರಹಾಮನ ಮಗನಾದ ಇಸಾಕ ಮತ್ತು ಆತನ ಮೊಮ್ಮಗನಾದ ಯಾಕೋಬನಿಗೆ, ಒಂದು "ಶಾಶ್ವತವಾದ ಒಡಂಬಡಿಕೆ"ಯಾಗಿ ದೃಢೀಕರಿಸಲ್ಪಟ್ಟಿತು (1 ಪೂರ್ವಕಾಲವೃತ್ತಾಂತ 16:16–18; ಕೀರ್ತನೆ 105:9–11).

ಅಬ್ರಹಾಮನ ಕುಟುಂಬವು ಒಂದು ದೇಶವಾಗಿ, ಇಸ್ರಾಯೇಲ್ ಜನಾಂಗವಾಗಿ ವಿಸ್ತಾರಗೊಂಡಿತು. ದೇವರು ಇಸ್ರಾಯೇಲ್ಯರನ್ನು ಐಗುಪ್ತದ ದಾಸತ್ವದೊಳಗಿಂದ ಬಿಡಿಸಿ ಹೊರಗೆ ನಡಿಸಿದ ವೇಳೆ, ಆತನು ಅವರನ್ನು ತನ್ನವರೆಂದು ಹೇಳಿದನು, ಮತ್ತು ಮೋಶೆಯ ಮೂಲಕವಾಗಿ ಅವರಿಗೆ ಒಂದು ವಿಶಿಷ್ಟ ಧರ್ಮಶಾಸ್ತ್ರವನ್ನೊಳಗೊಂಡ ಹೊಸ ಒಡಂಬಡಿಕೆಯೊಂದನ್ನು ಕೊಟ್ಟನು. ಆ ಧರ್ಮಶಾಸ್ತ್ರದ ಒಂದು ಭಾಗದ ನಿಯಮವೆಂದರೆ ಸಬ್ಬತ್ ದಿನದಂದು ವಿಶ್ರಾಂತಿಯನ್ನು ಪಡೆಯುವದಾಗಿತ್ತು: "ಆದದರಿಂದ ಇಸ್ರಾಯೇಲ್ಯರು ಸಬ್ಬತ್ ದಿವಸವನ್ನು ಆಚರಿಸಬೇಕು. ಈ ಆಚರಣೆಯು ಅವರಿಗೂ ಅವರ ಸಂತತಿಯವರಿಗೂ

*ಶಾಶ್ವತವಾದ ನಿಬಂಧನೆ"* (ವಿಮೋಚನಕಾಂಡ 31:16; ಒತ್ತಿ ಹೇಳಿದ್ದು ನನ್ನದು). ದೇವರು ಯಾಜಕರ ಸೇವೆ ಮತ್ತು ಧರ್ಮಶಾಸ್ತ್ರದಲ್ಲಿ ಅಡಕವಾಗಿರುವ ಯಜ್ಞಗಳನ್ನು ಸಹ ಒಂದು "ಶಾಶ್ವತವಾದ ಒಡಂಬಡಿಕೆ" ಎಂದು ಕರೆದನು:

> ಯಾಜಕನು ಯಾವಾಗಲೂ ಪ್ರತಿ ಸಬ್ಬತ್‌ದಿನದಲ್ಲಿ ರೊಟ್ಟಿಗಳನ್ನು ತಂದು ಯೆಹೋವನ ಸನ್ನಿಧಿಯಲ್ಲಿ ಕ್ರಮಪಡಿಸಬೇಕು. *ಶಾಶ್ವತವಾದ ನಿಬಂಧನೆ*ಯ ಮೇರೆಗೆ ಅವುಗಳನ್ನು ಇಸ್ರಾಯೇಲ್ಯರಿಗೋಸ್ಕರ ಯೆಹೋವನಿಗೆ ಸಮರ್ಪಿಸಬೇಕು (ಯಾಜಕಕಾಂಡ 24:8; ಒತ್ತಿ ಹೇಳಿದ್ದು ನನ್ನದು; ನೋಡಿರಿ ಅರಣ್ಯಕಾಂಡ 18:19).

ಅನಂತರದಲ್ಲಿ, ದೇವರು ದಾವೀದನ ಸಂಗಡ ಒಂದು ವಿಶೇಷವಾದ ಒಡಂಬಡಿಕೆಯನ್ನು ಮಾಡಿಕೊಂಡು, ಅವನಿಗೆ ಸಿಂಹಾಸನದ ಮೇಲೆ ಶಾಶ್ವತವಾಗಿ ಉಳಿಯುವಂಥ ಸಂತತಿಯವರ ಒಂದು ವಂಶವನ್ನು ಅನುಗ್ರಹಿಸುವನೆಂದು ವಾಗ್ದಾನ ಮಾಡಿದನು. ಆತನ ಮರಣದ ಸಂದರ್ಭದಲ್ಲಿ, ದಾವೀದನು ಹೀಗೆ ಹೇಳಿದನು, "... ಆತನು ನನ್ನೊಡನೆ *ಒಡಂಬಡಿಕೆ*ಮಾಡಿಕೊಂಡಿದ್ದಾನೆ; ಅದು *ಎಂದಿಗೂ ಬಿದ್ದು ಹೋಗುವದಿಲ್ಲ*, ... ನನ್ನ ಅಭಿಲಾಷೆಯನ್ನು ಪೂರ್ತಿಗೊಳಿಸುವವನೂ ಆತನೇ ಅಲ್ಲವೋ? (2 ಸಮುವೇಲ 23:5; ಒತ್ತಿ ಹೇಳಿದ್ದು ನನ್ನದು).

ಒಡಂಬಡಿಕೆಯಲ್ಲಿ ಇಸ್ರಾಯೇಲ್ಯರಿಗಿದ್ದ ಪಾಲು ಎಂದರೆ ದೇವರಿಗೆ ವಿಧೇಯರಾಗುವದೇ ಆಗಿತ್ತು; ಆತನು ಅವರ ದೇವರಾಗಿರಬೇಕು, ಮತ್ತು ಅವರು ಆತನ ಜನರಾಗಿ ಇರಬೇಕಾಗಿತ್ತು. ಅವರು ವಿಧೇಯರಾಗುವ ತಮ್ಮ ಜವಾಬ್ದಾರಿಯಲ್ಲಿ ಅನೇಕ ಸಾರಿ ವಿಫಲರಾದರು, ಆದ್ದರಿಂದ ಅವರು ಪ್ರವಾದಿಗಳ ಮೂಲಕವಾಗಿ ನೆನಪು ಮಾಡಲ್ಪಟ್ಟರು ಮತ್ತು ಎಚ್ಚರಿಕೆಗಳನ್ನು ಪಡೆದುಕೊಂಡರು:

> ಭೂನಿವಾಸಿಗಳು ದೈವಾಜ್ಞೆಗಳನ್ನು ಮೀರಿ ನಿಯಮವನ್ನು ಅತಿಕ್ರಮಿಸಿ *ಶಾಶ್ವತವಾದ ಒಡಂಬಡಿಕೆ*ಯನ್ನು ಭಂಗಪಡಿಸಿದ್ದರಿಂದ ಭೂಮಿಯು ಅವರ ಹೆಜ್ಜೆಯಿಂದ ಅಪವಿತ್ರವಾಯಿತು (ಯೆಶಾ 24:5; ಒತ್ತಿ ಹೇಳಿದ್ದು ನನ್ನದು).

> ಕಿವಿಯನ್ನು ಇತ್ತ ತಿರುಗಿಸಿರಿ, ನನ್ನ ಬಳಿಗೆ ಬನ್ನಿರಿ; ಆಲಿಸಿದರೆ ಬದುಕಿ ಬಾಳುವಿರಿ. ದಾವೀದನಿಗೆ ಖಂಡಿತವಾಗಿ ವಾಗ್ದಾನಮಾಡಿದ ಕೃಪಾವರಗಳನ್ನು ನಿಮಗೆ ಕೊಡುತ್ತೇನೆಂಬ *ಶಾಶ್ವತವಾದ ಒಡಂಬಡಿಕೆ*ಯನ್ನು ನಿಮ್ಮೊಂದಿಗೆ ಮಾಡಿಕೊಳ್ಳುವೆನು (ಯೆಶಾಯ 55:3; ಒತ್ತಿ ಹೇಳಿದ್ದು ನನ್ನದು).

> ಯೆಹೋವನೆಂಬ ನಾನು ನ್ಯಾಯವನ್ನು ಪ್ರೀತಿಸುತ್ತೇನೆ, ಕೊಳ್ಳೆಯನ್ನೂ ಅನ್ಯಾಯವನ್ನೂ ದ್ವೇಷಿಸುತ್ತೇನೆ; ಸತ್ಯಸಂಧತೆಯನ್ನು ಅನುಸರಿಸಿ ಇವರ ನಷ್ಟಕ್ಕೆ ಪ್ರತಿಫಲವನ್ನು ಕೊಟ್ಟು ಇವರೊಂದಿಗೆ *ನಿತ್ಯವಾದ ಒಡಂಬಡಿಕೆ*ಯನ್ನು ಮಾಡಿಕೊಳ್ಳುವೆನು (ಯೆಶಾಯ 61:8; ಒತ್ತಿ ಹೇಳಿದ್ದು ನನ್ನದು).

> ನಾನು ನಿಮಗೆ ಹಿತಮಾಡುವದನ್ನು ಬಿಟ್ಟು ವಿಮುಖನಾಗೆನು ಎಂಬುವ *ಶಾಶ್ವತವಾದ ಒಡಂಬಡಿಕೆ*ಯನ್ನು ಅವರೊಂದಿಗೆ ಮಾಡಿಕೊಳ್ಳುವೆನು; ಅವರು ನನ್ನಿಂದಗಲದಂತೆ ಅವರ ಹೃದಯದೊಳಗೆ ನನ್ನ ಮೇಲಣ ಭಯಭಕ್ತಿಯನ್ನು ನೆಲೆಗೊಳಿಸುವೆನು (ಯೆರೆಮೀಯ 32:40; ಒತ್ತಿ ಹೇಳಿದ್ದು ನನ್ನದು).

> ಚೀಯೋನಿಗೆ ಅಭಿಮುಖರಾಗಿ ಮಾರ್ಗವನ್ನು ವಿಚಾರಿಸಿ - ಬನ್ನಿರಿ, ಯೆಹೋವನನ್ನು

ಆಶ್ರಯಿಸಿ ಎಂದಿಗೂ ಮರೆಯದ *ಶಾಶ್ವತವಾದ ಒಡಂಬಡಿಕೆ*ಯನ್ನು ಆತನೊಂದಿಗೆ ಮಾಡಿಕೊಳ್ಳೋಣ ಎಂದು ಹೇಳುವರು (ಯೆರೆಮೀಯ 50:5; ಒತ್ತಿ ಹೇಳಿದ್ದು ನನ್ನದು).

ಹೀಗಾದರೂ ನಾನು ನಿನ್ನ ಯೌವನಕಾಲದಲ್ಲಿ ನಿನ್ನೊಂದಿಗೆ ಮಾಡಿಕೊಂಡ ಒಡಂಬಡಿಕೆಯನ್ನು ಜ್ಞಾಪಕಕ್ಕೆ ತಂದುಕೊಂಡು ನಿನ್ನ ಸಂಗಡ *ಎಂದಿಗೂ ತಪ್ಪದ ಒಡಂಬಡಿಕೆ*ಯನ್ನು ಮಾಡಿಕೊಂಡು ದೃಢೀಕರಿಸುವೆನು (ಯೆಹೆಜ್ಕೇಲ 16:60; ಒತ್ತಿ ಹೇಳಿದ್ದು ನನ್ನದು).

ನಾನು ಅವರೊಂದಿಗೆ ಸಮಾಧಾನದ *ಒಡಂಬಡಿಕೆ*ಯನ್ನು ಮಾಡಿಕೊಳ್ಳುವೆನು; ಅದು *ಶಾಶ್ವತವಾಗಿರುವದು*; ನಾನು ಅವರನ್ನು ನೆಲೆಗೊಳಿಸಿ ವೃದ್ಧಿಮಾಡಿ ನನ್ನ ಪವಿತ್ರಾಲಯವನ್ನು ಅವರ ನಡುವೆ ಯುಗಯುಗಾಂತರಕ್ಕೂ ನಿಲ್ಲಿಸುವೆನು (ಯೆಹೆಜ್ಕೇಲ 37:26; ಒತ್ತಿ ಹೇಳಿದ್ದು ನನ್ನದು).

*ಒಲಾಮ* ಎಂಬ ಪದಕ್ಕೆ ಸ್ವಲ್ಪ ವಿವರಣೆಯು ಅಗತ್ಯವಿರುತ್ತದೆ, ಯಾಕೆಂದರೆ ಇದು ಹಳೆಯ ಒಡಂಬಡಿಕೆಯಲ್ಲಿ ಬಹಳಷ್ಟು ಸಾರಿ ಕಾಣಿಸಿಕೊಳ್ಳುತ್ತದೆ ಮತ್ತು ವಿವಿಧ ಸನ್ನಿವೇಶಗಳೊಳಗೆ ಬೇರೆ ಬೇರೆ ಅರ್ಥಗಳನ್ನು ಹೊಂದಿರುತ್ತದೆ.[29] ಇದು ಯಾಹುವನ್ನು ಮತ್ತು ಆತನ ಗುಣಸ್ವಭಾವಗಳನ್ನು ಸೂಚಿಸುವ ವೇಳೆ "ಶಾಶ್ವತವಾದ" ಅಥವಾ "ನಿತ್ಯವಾದ" ಎಂಬುದನ್ನು ಸೂಚಿಸಬಹುದಾಗಿದೆ ಯಾಕೆಂದರೆ ಅದು ಆತನ ನಿತ್ಯವಾದ ಸ್ವಭಾವ ಮತ್ತು ಗುಣಸ್ವಭಾವಗಳನ್ನು ಕುರಿತು ಒತ್ತಿ ಹೇಳುತ್ತದೆ (21:33; ಧರ್ಮೋಪದೇಶಕಾಂಡ 32:40; ಕೀರ್ತನೆ 90:2; 145:13; ಯೆಶಾಯ 40:28; ದಾನಿಯೇಲ 12:7). ಹೇಗೂ, ಅದರ ಅರ್ಥವು ಯಾವಾಗಲೂ "ಸದಾಕಾಲ" ಎಂದಾಗಿರಲಾರದು.

ಆದಿಕಾಂಡದೊಳಗೆ ಈ ಮುಂಚೆ, ಮನುಷ್ಯನ ಆಯುಷ್ಕಾಲದ ಸನ್ನಿವೇಶದಲ್ಲಿ ಈ ಪ್ರಾಮುಖ್ಯವಾದ ಪದವು ನಮಗೆ ಪರಿಚಯಿಸಲ್ಪಡುತ್ತದೆ, ಆ ಆಯುಷ್ಕಾಲವು "ಶಾಶ್ವತವಾಗಿ" ಇರಬಾರದಾಗಿತ್ತು (3:22; 6:3). ಅನಂತರ, ಮನುಷ್ಯನ ಜೀವಿತದ ಬಗ್ಗೆ ಮಾತಾಡು ವೇಳೆ, *ಒಲಾಮ* ಎಂಬುದು "ಶಾಶ್ವತ" ಎಂಬುದಾಗಿ ಅನುವಾದಿಸಲ್ಪಟ್ಟಿದೆಯಾದರೂ, ಅದು ಒಂದು ರೂಪಕೋಕ್ತಿಯಾಗಿ ಬಳಸಲ್ಪಡುತ್ತಿದೆ. ಅದು ಒಬ್ಬ ವ್ಯಕ್ತಿಗೆ ನಮ್ರವಾದ ಮತ್ತು ಗೌರವಪೂರ್ವಕ ವಂದಿಸುವಿಕೆಯಾಗಿರಬೇಕು ಎಂದಾಗಿತ್ತು. ಬತ್ಷೆಬಳು ತನ್ನ ಗಂಡನ ಹಾಸಿಗೆಗೆ ಸಮೀಪ ಬರುತ್ತಿದ್ದಂತೆ, ಆಕೆಯು "ನನ್ನ ಒಡೆಯನೂ ಅರಸನೂ ಆದ ದಾವೀದನು ಸದಾಕಾಲ ಬಾಳಲಿ" ಅಂದಳು (1 ಅರಸು 1:31), ಅದು ಆತನಿಗೆ ದೀರ್ಘಾಯುಷ್ಯವುಂಟಾಗಿ ಆಶೀರ್ವದಿಸಲ್ಪಡಲಿ ಎಂಬ ಆಕೆಯ ಬಯಕೆಯನ್ನು ವ್ಯಕ್ತಪಡಿಸಿತು. ನೆಹಮೀಯನು ಪಾರಸಿಯ ಅರಸನಾದ ಅರ್ತಷಸ್ತನಿಗೆ ಇದೇ ವಿಧವಾದ ವಂದನೆಯನ್ನು ಹೇಳಿದನು (ನೆಹಮೀಯ 2:3).

ವಿಪರ್ಯಾಸವೆಂದರೆ, ಯೆರೂಸಲೇಮ್ ಮತ್ತು ತೂರ್ ಪಟ್ಟಣಗಳ ಮೇಲೆ ಅವುಗಳು "ಶಾಶ್ವತವಾಗಿ" ಹಾಳು ಬೀಳಲಿ, ಅಥವಾ "ಎಂದಿಗೂ" ಮರುನಿರ್ಮಾಣಗೊಳ್ಳದಿರಲಿ ಎಂಬುದಾಗಿ ದೈವಿಕ ಶಾಪವು ಉಚ್ಚರಿಸಲ್ಪಡುವಾಗ (ಯೆಶಾಯ 32:14; ಯೆಹೆಜ್ಕೇಲ 26:21; 27:36; 28:19), *ಒಲಾಮ* ಎಂಬುದು ಕೇವಲ ಒಂದು ದೀರ್ಘಕಾಲವನ್ನು ಸೂಚಿಸುವದಾಗಿತ್ತಷ್ಟೆ. ಈ ಎರಡೂ ಪಟ್ಟಣಗಳು ಕ್ರಮೇಣದಲ್ಲಿ ಮರುನಿರ್ಮಾಣಗೊಂಡವು ಮತ್ತು ಈ ದಿನದ ತಕನವೂ ಉಳಿದಿರುತ್ತವೆ.

ಕೀರ್ತನೆಗಾರನು ಹೇಳಿದ್ದೇನೆಂದರೆ ದೇವರು ಈ ಶಾರೀರಿಕ ಭೂಮಿಯು "ಯುಗಯುಗಾಂತರಕ್ಕೂ [*ಒಲಾಮ*] ಕದಲದ ['ಅಲುಗಾಡದ'; NRSV] ಹಾಗೆ ಅದನ್ನು

ದೃಢವಾದ ಅಸ್ತಿವಾರದ ಮೇಲೆ ಸ್ಥಾಪಿಸಿದ್ದಾನೆ" (ಕೀರ್ತನೆ 104:5). ಭೂಮಿಯು ಒಂದು ಅನಿರ್ದಿಷ್ಟಾವಧಿಯ ಭವಿಷ್ಯದ ವರೆಗೂ, ಅಥವಾ ದೀರ್ಘಕಾಲದ ವರೆಗೂ ಇರುವುದು; ಅದು ಯುಗಗಳಲ್ಲಿಯೂ ಇರುವಂಥದ್ದು, ಆದರೆ ಅದು ನಿತ್ಯತ್ವದುದ್ದಕ್ಕೂ ಮುಂದುವರೆಯುವದಿಲ್ಲ. ಹೊಸ ಒಡಂಬಡಿಕೆಯು ಹೇಳುವದೇನೆಂದರೆ ಕರ್ತನ ಬರೋಣದ "ವಾಗ್ದಾನ"ವು ಯುಗಾಂತ್ಯದಲ್ಲಿ ನೆರವೇರುವುದು ಎಂಬುದೆ (2 ಪೇತ್ರ 3:4). ಆಗ "ಭೂಮಿ" ಮತ್ತು ಭೌತಿಕ ವಿಶ್ವವು "ಸುಟ್ಟು ಹೋಗುವವ," "ನಾಶವಾಗುವವು"; ಅದು "ಉರಿದು ಲಯವಾಗಿ ಹೋಗುವದು" (2 ಪೇತ್ರ 3:7, 10-12). ಈ "ಭೂಮ್ಯಾಕಾಶಗಳು ಗತಿಸಿಹೋದ" ಬಳಿಕ (ಮತ್ತಾಯ 24:35), "ನೂತನ ಆಕಾಶ" ಮತ್ತು "ನೂತನ ಭೂಮಿ"ಗಳು ವಿಮೋಚಿಸಲ್ಪಟ್ಟವರೆಲ್ಲರ ನಿತ್ಯವಾದ ನಿವಾಸವಾಗಿ ಪ್ರಕಟಗೊಳ್ಳುವವು (ಪ್ರಕಟನೆ 21:1, 10; 22:19; ನೋಡಿರಿ 2 ಪೇತ್ರ 3:13). ಆದದರಿಂದ, ದೇವರು ಆದಿಕಾಂಡ 9:16ರಲ್ಲಿ ನೋಹನ ಸಂಗಡ ಮಾಡಿದ "ಶಾಶ್ವತವಾದ [*ಒಲಾಮ*] ಒಡಂಬಡಿಕೆ"ಯು ಭೂಮಿಯು ಇರುವಷ್ಟು ಕಾಲ ಮಾತ್ರವೇ ಇರುವದಾಗಿದೆ ಎಂದು ನಿರೀಕ್ಷಿಸಲು ಸಾಧ್ಯ.

*ಒಲಾಮ* ಎಂಬುದನ್ನು "ಶಾಶ್ವತ" ಅಥವಾ "ಸದಾಕಾಲ" ಎಂಬುದಾಗಿ ಅನುವಾದಿಸಿರುವುದು, ಆದಿಕಾಂಡ 13:15ನ್ನು ಆಧರಿಸಿ ಕಾನಾನ್ ದೇಶವನ್ನು ದೇವರು ಅಬ್ರಹಾಮನ ಸಂತತಿಯವರಿಗೆ (ಯೆಹೂದ್ಯರಿಗೆ) *ಶಾಶ್ವತ*ವಾಗಿ ಕೊಡುವೆನೆಂದು ವಾಗ್ದಾನ ಮಾಡಿದನು ಎಂಬುದಾಗಿ ಕೆಲವರು ತಪ್ಪಾದ ನಿರ್ಣಯಕ್ಕೆ ಬರುವಂತೆ ನಡಿಸಿರುತ್ತದೆ. ಆ ಸನ್ನಿವೇಶದಲ್ಲಿ ಅದನ್ನು "ಒಂದು ದೀರ್ಘಕಾಲದ ತನಕ" ಅಥವಾ "ಯುಗದುದ್ದಕ್ಕೂ ಇರುವ" ಎಂಬುದಾಗಿ ಅನುವಾದಿಸುವುದು ಉತ್ತಮವಾಗಿರುತ್ತದೆ, ಅದು ಕಾಲದ ಅಂಶವನ್ನು ಅನಿರ್ದಿಷ್ಟವಾಗಿರುವಂತೆ ಬಿಡುವದಾಗಿದೆ. ಹಳೆಯ ಒಡಂಬಡಿಕೆಯ ಕಾಲಾವಧಿಯಲ್ಲಿ, ಇಸ್ರಾಯೇಲ್ಯರು ವಾಗ್ದಾನ ದೇಶವನ್ನು ಸ್ವಾಧೀನಪಡಿಸಿಕೊಳ್ಳುವುದು ಯಾವಾಗಲೂ ಅವರು ಯೆಹೋವನಿಗೆ ವಿಧೇಯರಾಗುವದರ ಮೇಲೆಯೇ ನಿರ್ಬಂಧಿತವಾಗಿತ್ತು. ಒಂದಕ್ಕಿಂತಲೂ ಅಧಿಕ ಸಂದರ್ಭಗಳಲ್ಲಿ, ದೇವರು ಜನರ ಅವಿಧೇಯತೆಯ ಕಾರಣದಿಂದಾಗಿ ಅವರನ್ನು ದೇಶದಿಂದ ಹೊರಗೆ ಓಡಿಸಿದನು. ಇಂದು, ದೇವರು ಅಬ್ರಹಾಮ ಮತ್ತು ಮೋಶೆಯ ಮುಖಾಂತರವಾಗಿ ಇಸ್ರಾಯೇಲ್ಯರೊಂದಿಗೆ ಮಾಡಿಕೊಂಡ ಒಡಂಬಡಿಕೆಗಳು ಅಸಿಂಧುಗೊಂಡಿರುತ್ತವೆ. ಅವುಗಳು ಕ್ರಿಸ್ತನಲ್ಲಿ ನೆರವೇರಿರುತ್ತವೆ, ಆತನು ತನ್ನ ಹೊಸ ಒಡಂಬಡಿಕೆಯನ್ನು ಪ್ರತಿಷ್ಠಾಪಿಸಿದನು (ಗಲಾತ್ಯ 3:8-29; ಇಬ್ರಿಯ 8:13).

ಧರ್ಮಶಾಸ್ತ್ರದಲ್ಲಿ, ದೇವರು ತನ್ನ ಜನರಿಗೆ ಹೀಗೆ ಅಪ್ಪಣೆ ಕೊಟ್ಟನು, "ಅಮ್ಮೋನಿಯರಾಗಲಿ ಮೋವಾಬ್ಯರಾಗಲಿ ಯೆಹೋವನ ಸಭೆಗೆ ಎಂದೆಂದಿಗೂ [*ಒಲಾಮ*] ಸೇರಬಾರದು. ಅವರ ಸಂತತಿಯವರು ಹತ್ತನೆಯ ತಲೆಯವರಾದರೂ ಯೆಹೋವನ ಸಭೆಗೆ ಸೇರಬಾರದು" (ಧರ್ಮೋಪದೇಶಕಾಂಡ 23:3). ಸ್ಪಷ್ಟವಾಗಿರುವಂತೆ, ಇಲ್ಲಿ *ಒಲಾಮ* ಎಂಬುದು ಒಂದು ದೀರ್ಘಕಾಲವನ್ನು (ಹತ್ತು ತಲೆಮಾರುಗಳು) ಸೂಚಿಸುತ್ತದೆ - ಆದರೆ ಅಕ್ಷರಶಃ "ಶಾಶ್ವತವಾಗಿ" ಎಂದಾಗಿರುವದಿಲ್ಲ; ಆದಾಗ್ಯೂ ಅದು ಆ ವಿಧದಲ್ಲಿಯೇ ಅನುವಾದಿಸಲ್ಪಟ್ಟಿರುತ್ತದೆ. ಅದರರ್ಥವು ನಿಜಕ್ಕೂ "ಶಾಶ್ವತವಾಗಿ" ಎಂದಾಗಿದ್ದಲ್ಲಿ, ದಾವೀನು "ಯೆಹೋವನ ಸಭೆಗೆ ಸೇರಿಸಲ್ಪಡದೆ" ಇರುತ್ತಿದ್ದನು ಯಾಕೆಂದರೆ ಆತನು ರೂತ ಮತ್ತು ಬೋವಜ ನಡುವೆ ನಡೆದ ಮೋವಾಬ್ಯಳು-ಇಸ್ರಾಯೇಲ್ಯನ ಮದುವೆ ಮೂಲಕವಾಗಿ ಜನಿಸಿದ್ದನು (ರೂತಳು 4:10-22).

*ಒಲಾಮ* ಎಂಬ ಪದವು ಕೆಲವು ಸಾರಿ ವಾಕ್ಯಭಾಗದ ಸನ್ನಿವೇಶಕ್ಕನುಗುಣವಾಗಿ

ಅರ್ಥನಿರೂಪಣೆ ಮಾಡಲ್ಪಡುತ್ತದೆ, ಸಮುವೇಲ ತಾಯಿಯಾದ ಹನ್ನಳ ವಿಷಯದಲ್ಲಿ ಹಾಗೆಯೇ ಇರುತ್ತದೆ. ಆಕೆಯು ಒಂದು ಮಗುವನ್ನು ಕರುಣಿಸಬೇಕೆಂದು ಪ್ರಾರ್ಥಿಸಿದಳು ಮತ್ತು "ಅವನು ಜೀವದಿಂದಿರುವ [ಒಲಾಮ] ತನಕ ನಿನ್ನವನಾಗಿಯೇ ಇರುವ ಹಾಗೆ ನಿನಗೆ ಪ್ರತಿಷ್ಠಿಸಿಕೊಡುವೆನು" (1 ಸಮುವೇಲ 1:11). ಮಗುವು ಜನಿಸಿದ ಬಳಿಕ, ಆಕೆಯು ಮಗನು "ಯೆಹೋವನ ಸನ್ನಿಧಿಯಲ್ಲಿ ಕಾಣಿಸಿಕೊಂಡು ಯಾವಾಗಲೂ ಅಲ್ಲಿಯೇ ಇರುವ ಹಾಗೆ [*ಒಲಾಮ*]" ಅವನು ಮೊಲೆಬಿಟ್ಟ ಬಳಿಕ ಕರೆದೊಯ್ಯುವೆನು ಎಂದು ಮಾತು ಕೊಟ್ಟಳು (1 ಸಮುವೇಲ 1:22). ಸಮಯವು ಗತಿಸಿದ ಬಳಿಕ, ಆಕೆಯು ಆತನನ್ನು ಯಾಜಕನಾದ ಏಲಿಯ ಬಳಿಗೆ ಕರೆದುಕೊಂಡು ಬಂದು ಹೀಗೆ ಹೇಳಿದಳು, "ನಾನು ಇವನನ್ನು ಯೆಹೋವನಿಗೇ ಒಪ್ಪಿಸಿಬಿಟ್ಟಿದ್ದೇನೆ. ಇವನು ಜೀವದಿಂದಿರುವ ತನಕ ಆತನಿಗೇ ಪ್ರತಿಷ್ಠಿತನಾಗಿರುವನು" (1 ಸಮುವೇಲ 1:28). ಈ ವಾಕ್ಯಭಾಗವು *ಒಲಾಮ*ನ್ನು "ಇವನು ಜೀವದಿಂದಿರುವ ತನಕ" ಎಂದು ಅಥವಾ ಒಂದು ಜೀವಿತಕಾಲವೆಲ್ಲಾ ಎಂಬುದಾಗಿ ಅನುವಾದಿಸುತ್ತದೆ.

ಸನ್ನಿವೇಶಕ್ಕನುಸಾರವಾದ ಮತ್ತೊಂದು ಅರ್ಥನಿರೂಪಣೆಯು ಯೋನನ ಕಥೆಯಲ್ಲಿ ಕಾಣಿಸಿಕೊಳ್ಳುತ್ತದೆ, ಆತನು ದುಷ್ಟ ಅನ್ಯಧರ್ಮಿಯರಿಗೆ ಬೋಧಿಸುವದಕ್ಕೋಸ್ಕರ ನಿನವೆ ಪಟ್ಟಣಕ್ಕೆ ಹೋಗಲು ನಿರಾಕರಿಸಿದನು ಮತ್ತು ಅಲ್ಲಿಗೆ ಹೋಗುವ ಬದಲಾಗಿ ವಿರುದ್ಧ ದಿಕ್ಕಿಗೆ ಸಾಗುತ್ತಿದ್ದ ದೋಣಿಯನ್ನು ಹತ್ತಿದನು. ಒಂದು ಘೋರವಾದ ಬಿರುಗಾಳಿಯು ಹೆಚ್ಚುಕಡಿಮೆ ಅವರ ದೋಣಿಯನ್ನು ಮುಳುಗಿಸಿಯೇ ಬಿಡಬಹುದಾದ ಸಂದರ್ಭದಲ್ಲಿ, ಯೋನನನ್ನು ಸಮುದ್ರದೊಳಗೆ ಎಸೆಯಲಾಯಿತು ಮತ್ತು ಆತನನ್ನು ಒಂದು ಬೃಹತ್ ಮೀನು ನುಂಗಿತ್ತು. ಆತನು ಅನಂತರದಲ್ಲಿ ಒಂದು ಕಡಲಕಳೆಯು ಆತನ್ನು ಹೇಗೆ ಸುತ್ತಿಕೊಂಡಿತ್ತೆಂಬುದನ್ನು ನೆನಪಿಸಿಕೊಳ್ಳುವವನಾಗಿ, ಯೋನನು ಹೀಗೆ ಹೇಳಿದನು, "ಭೂಲೋಕದ ಅಗುಳಿಗಳು ಎಂದಿಗೂ [*ಒಲಾಮ*] ತೆಗೆಯದ ಹಾಗೆ ನನ್ನ ಹಿಂದೆ ಹಾಕಲ್ಪಟ್ಟವು; ನನ್ನ ದೇವರಾದ ಯೆಹೋವನೇ, ನೀನು ನನ್ನ ಪ್ರಾಣವನ್ನು ಅಧೋಲೋಕದೊಳಗಿಂದ ಉದ್ಧರಿಸಿದಿ" (ಯೋನ 2:5, 6). ಯೋನನು ಬೃಹತ್ ಮೀನಿನ ಹೊಟ್ಟೆಯೊಳಗೆ ತಾನು ಕಳೆದ ಸಮಯವನ್ನು "ಎಂದಿಗೂ" ಇರುವಂತದ್ದೋ ಎಂಬಂತಿತ್ತು ಎಂಬುದಾಗಿ ಬಣ್ಣಿಸಿದ್ದಾನಾದರೂ, ವಾಕ್ಯದ ಲೇಖಕನು ಅದು ಕೇವಲ "ಮೂರು ದಿನ ಹಗಲಿರುಳು" ಎಂಬುದಾಗಿ ಪ್ರಕಟಗೊಳಿಸುತ್ತಾನೆ (ಯೋನ 1:17; ನೋಡಿರಿ ಮತ್ತಾಯ 12:39-41).

"ಶಾಶ್ವತ" ಅಥವಾ "ಎಂದಿಗೂ" (*ಒಲಾಮ*) ಎಂಬ ಪದದ ಅರ್ಥವನ್ನು ಸನ್ನಿವೇಶಕ್ಕನುಗುಣವಾಗಿ ತೆಗೆದುಕೊಳ್ಳತಕ್ಕದ್ದು ಎಂಬುದನ್ನು ತೋರಿಸಿ ಕೊಡುತ್ತದೆ. ಅದರ ಜೊತೆಗೆ, ದೇವರ ಒಡಂಬಡಿಕೆಗಳು ಅನೇಕ ಸಾರಿ ಮನುಷ್ಯನ ವಿಧೇಯತೆಗೆ ಅನುಗುಣವಾಗಿ ನಿರ್ಬಂಧಿಸಲ್ಪಟ್ಟಿರುತ್ತವೆ ಎಂಬುದನ್ನು ಸೂಚಿಸುತ್ತವೆ.

## ಮದ್ಯಪಾನ ಮತ್ತು ಮತ್ತರಾಗುವಿಕೆ (9:20, 21)

ದ್ರಾಕ್ಷಾರಸವನ್ನು ಕುಡಿಯುವದರ ಕುರಿತು ಬೈಬಲ್ ಯಾವದೇ ಸಂಪೂರ್ಣ ನಿಷೇಧಾಜ್ಞೆಯನ್ನು ನೀಡುವದಿಲ್ಲ. ದ್ರಾಕ್ಷಾರಸವು ಒಂದು ರೀತಿಯಲ್ಲಿ ಪ್ರಾಚೀನ ಜಗತ್ತಿನೊಳಗೆ ಇದ್ದ ಒಂದು ಸಾಮಾನ್ಯ ಪಾನಿಯ ಎಂಬುದಾಗಿ ತೋರುತ್ತದೆ. ಕೀರ್ತನೆಗಾರನು ಸಸ್ಯರಾಶಿಯನ್ನು, ಆಹಾರ (ರೊಟ್ಟಿ), ಮತ್ತು ದ್ರಾಕ್ಷಾರಸಗಳನ್ನು ದೇವರಿಂದ ಮನುಷ್ಯನಿಗೆ ಕೊಡಲ್ಪಟ್ಟಿರುವ ವರಗಳೆಂಬುದಾಗಿ ಕಾಣುತ್ತಾನೆ, ಮತ್ತು ಕೊನೆಯಲ್ಲಿರುವ ದ್ರಾಕ್ಷಾರಸವು "ಹೃದಯಾನಂದಕರವಾದ" ರಸವೆಂದು ಹೇಳಲಾಗಿರುತ್ತದೆ (ಕೀರ್ತನೆ 104:14, 15; ನೋಡಿರಿ

ಪ್ರಸಂಗಿ 9:7; ಜೆಕರ್ಯ 10:7). ಯಾವನ ಜೀವಿತವು ಕಹಿಯಿಂದ ಕೂಡಿದೆ ಮತ್ತು ಆತನ ಕಷ್ಟಗಳನ್ನು ಮರೆಯುವದಕ್ಕೆ ಆಗುತ್ತಿಲ್ಲವೋ ಅವನಿಗೆ ದ್ರಾಕ್ಷಾರಸವನ್ನು ಕೊಡಬೇಕು ಎಂಬುದಾಗಿ ಜ್ಞಾನಿಯು ಹೇಳಿದನು (ಜ್ಞಾನೋಕ್ತಿ 31:6, 7). ಮೋಶೆಯ ಧರ್ಮಶಾಸ್ತ್ರದಡಿಯಲ್ಲಿ, ಸಕಲ ಸರ್ವಾಂಗಹೋಮ ಮತ್ತು ಸಮಾಧಾನ ಯಜ್ಞಗಳ ಜೊತೆಗೆ ದ್ರಾಕ್ಷಾರಸದ ಎರೆತವನ್ನು ಮಾಡಬೇಕಾಗಿತ್ತು (ಅರಣ್ಯಕಾಂಡ 15:5-10), ಮತ್ತು ದೇವರು ತನ್ನ ಹೆಸರನ್ನು ಸ್ಥಾಪಿಸಿದ್ದ ಆರಾಧನಾ ಸ್ಥಳದಲ್ಲಿ ಅದನ್ನು ಜನರು ಖರೀದಿಸಬೇಕೆಂದು ಪ್ರೋತ್ಸಾಹಿಸಲಾಗುತ್ತಿತ್ತು (ಧರ್ಮೋಪದೇಶಕಾಂಡ 14:24-26).

ಕುಡಿದು ಮತ್ತೇರಿಸಿಕೊಳ್ಳುವಿಕೆಯ ಅಪಾಯದ ಕಾರಣದಿಂದಾಗಿ, ಬೈಬಲಿನ ಅನೇಕ ಲೇಖಕರು ಅತಿಯಾಗಿ ಕುಡಿಯಬಾರದೆಂದು ಎಚ್ಚರಿಸಿದರು (ಜ್ಞಾನೋಕ್ತಿ 20:1; 21:17; 23:29-35; 31:4, 5; ಯೆಶಾಯ 5:11, 12; ಹಬಕ್ಕೂಕ 2:5). ಮತ್ತೇರಿಸುವ ಮದ್ಯದ ಸೇವನೆಯನ್ನು ಕೆಲವು ವಾಕ್ಯಭಾಗಗಳಲ್ಲಿ ದುಂದೌತನ ಮತ್ತು ಜಾರತ್ವಗಳೊಂದಿಗೆ ಸಂಬಂಧಗೊಳಿಸಲ್ಪಟ್ಟಿದೆ (ಆದಿಕಾಂಡ 19:30-38; ಹೋಶೇಯ 4:11, 12). ಹೊಸ ಒಡಂಬಡಿಕೆಯ ಕಾಲಗಳಲ್ಲಿ, ಪೌಲನಿಗೆ ಕುಡಿದು ಮತ್ತರಾಗುವಿಕೆಯ ಅಪಾಯಗಳು ಗೊತ್ತಿದ್ದವು. ಒಂದು ಗ್ರೀಕ್-ರೋಮನ್ ಜಗತ್ತಿನಲ್ಲಿ, ಕುಡಿದು ಮತ್ತವಾಗಿ ಸಡಿಸುತ್ತಿದ್ದ ಸ್ವಚ್ಛಂದ ಕಾಮಕೇಳಿಗಳು ಕೆಲವು ಸಾರಿ ಅನ್ಯಧರ್ಮಿಯ ದೇವಸ್ಥಾನದ ಆರಾಧನೆಗಳಲ್ಲಿನ ಒಂದು ಭಾಗವಾಗಿರುತ್ತಿದ್ದವು, ಮತ್ತು ಪೌಲನು ಅದನ್ನು ಕುರಿತು ಅದೊಂದು ಶರೀರಭಾವದ ಕರ್ಮವಾಗಿದ್ದು ಅದು ದೇವರ ರಾಜ್ಯದಲ್ಲಿ ಒಬ್ಬನಿಗೆ ಇರುವ ಬಾಧ್ಯತೆಗೆ ಕುತ್ತು ತರುವಂಥದ್ದಾಗಿದೆ ಎಂಬುದಾಗಿ ಹೇಳಿದನು (1 ಕೊರಿಂಥ 6:9, 10; ಗಲಾತ್ಯ 5:19-21).

ಹಾಗಿದ್ದಾಗ್ಯೂ, ಪೌಲನು ದ್ರಾಕ್ಷಾರಸದ ಸೇವನೆಯ ವಿಷಯದಲ್ಲಿ ಅದನ್ನು ಸಂಪೂರ್ಣ ತ್ಯಜಿಸಿ ಬಿಡುವಿಕೆ ಮತ್ತು ಸಂಪೂರ್ಣ ಸ್ವಾತಂತ್ರ್ಯತೆಯ ನಡುವಿನ ಒಂದು ನಿಲುವು ಹೊಂದಿದ್ದನು. ಆತನು ಮಾಂಸವನ್ನು ತಿಂದು ದ್ರಾಕ್ಷಾರಸವನ್ನು ಸೇವನೆ ಮಾಡುತ್ತಿದ್ದಂಥ ಸಹೋದರರು ತಪ್ಪಿತಸ್ಥರು ಎಂಬುದಾಗಿ ಹೇಳುತ್ತಾ, ಅವರ ವಿರುದ್ಧ ತೀರ್ಪು ಮಾಡುವ ಕ್ರೈಸ್ತರ ಪರವಾಗಿ ಮಾತಾಡಲಿಲ್ಲ, ಆದರೆ "ತಿನ್ನುವದೂ ಕುಡಿಯುವದೂ ದೇವರ ರಾಜ್ಯವಲ್ಲ; ನೀತಿಯೂ ಸಮಾಧಾನವೂ ಪವಿತ್ರಾತ್ಮನಿಂದಾಗುವ ಆನಂದವೂ ಆಗಿದೆ" ಎಂದು ಹೇಳಿದನು (ರೋಮಾ 14:17) ಅದೇ ವೇಳೆಯಲ್ಲಿ, ದೇವರ ಜನರು ತಮ್ಮ ಸಹೋದರರ ಮನಸ್ಸಾಕ್ಷಿಯ ಕಡೆಗೆ ಸಂವೇದನೆಯುಳ್ಳವರಾಗಿದ್ದು ಪ್ರೀತಿಯಿಂದ ನಡೆದುಕೊಳ್ಳಬೇಕು ಎಂದು ಎಚ್ಚರಿಸಿದನು (ರೋಮಾ 14:14, 15, 22), ಅವರಿಗೆ ಒಂದು ವಿಘ್ನವಾಗಬಹುದಾದ ಪರಿಸ್ಥಿತಿಗಳಲ್ಲಿ ಮಾಂಸ ಸೇವಿಸಿ ಅಥವಾ ದ್ರಾಕ್ಷಾರಸವನ್ನು ಸೇವಿಸಿ ತಮ್ಮ ಸ್ವಾತಂತ್ರ್ಯವನ್ನು ತೋರಿಸಿಕೊಳ್ಳದಿರಬೇಕೆಂದು ಹೇಳಿದನು. ಆತನು ಸಮಾಧಾನಕ್ಕೆ ಕೊಡುಗೆಯನ್ನು ನೀಡುವಂಥ ಸಂಗತಿಗಳನ್ನು ಅನುಸರಿಸಿ ಹೋಗುವವರಾಗಿರಿ ಮತ್ತು "ದೇವರು ಕಟ್ಟಿದ್ದನ್ನು ನೀನು ಆಹಾರದ ನಿಮಿತ್ತವಾಗಿ ಕೆಡವಬೇಡ" ಎಂದು ಕ್ರೈಸ್ತರನ್ನು ಬೇಡಿಕೊಂಡನು (ರೋಮಾ 14:19, 20). ಆತನು "ಎಲ್ಲಾ ಪದಾರ್ಥಗಳೂ ಶುದ್ಧವೇ" ಎಂದು ವಾದಿಸಿದನಾದರೂ, ಅವುಗಳಿಗೆ ಯಾವ ವ್ಯಕ್ತಿಗೆ ಬೇಸರವಾಗುತ್ತದೋ ಅವನಿಗೆ ಅವುಗಳು "ಕೆಟ್ಟ"ವುಗಳೇ ಆಗುತ್ತವೆ ಎಂದು ಸೇರಿಸಿ ಹೇಳಿದನು (ರೋಮಾ 14:20).[30] ಅಪೊಸ್ತಲನು "ಮಾಂಸ ತಿನ್ನುವದನ್ನಾಗಲಿ ದ್ರಾಕ್ಷಾರಸ ಕುಡಿಯುವದನ್ನಾಗಲಿ ನಿನ್ನ ಸಹೋದರನಿಗೆ ಅಡ್ಡಿಯನ್ನುಂಟುಮಾಡುವ ಬೇರೆ ಯಾವದನ್ನಾಗಲಿ ಬಿಟ್ಟುಬಿಡುವದೇ ಒಳ್ಳೇದು" ಎಂಬುದಾಗಿ ಮುಕ್ತಾಯಗೊಳಿಸುತ್ತಾನೆ (ರೋಮಾ 14:21).[41]

## ಆದಿಕಾಂಡದ ಹೊರಗಡೆಯಲ್ಲಿ ನೋಹನು

ಪ್ರವಾದಿಗಳ ಪುಸ್ತಕಗಳು ಮತ್ತು ಹೊಸ ಒಡಂಬಡಿಕೆಯಲ್ಲಿ ನೋಹನ ಕುರಿತ ಬೈಬಲಿನ ಉಲ್ಲೇಖಗಳು ಮಹಾ ಪ್ರಳಯದ ಸಂದರ್ಭದಲ್ಲಿ ಜೀವಿಸಿದ್ದ ನಿಜವಾದ ವ್ಯಕ್ತಿ ಆತನಾಗಿದ್ದನು ಎಂಬುದಕ್ಕೆ ಬಲವಾದ ಆಂತರೀಕ ಪುರಾವೆಯನ್ನು ಒದಗಿಸುತ್ತವೆ. ದೇವರು ಯೆಶಾಯನ ಮೂಲಕವಾಗಿ ನೋಹನ ಕುರಿತು, ಆತನೊಬ್ಬ ಐತಿಹಾಸಿಕ ವ್ಯಕ್ತಿಯೆಂಬುದಾಗಿ ಮಾತಾಡುತ್ತಾನೆ:

> ನಿನ್ನನ್ನು ತ್ಯಜಿಸಿದ್ದು ನನಗೆ ನೋಹನ ಕಾಲದ ಜಲಪ್ರಲಯದಂತಿದೆ; ಇಂಥಾ ಜಲಪ್ರಲಯವು ಭೂಮಿಯನ್ನು ತಿರಿಗಿ ಆವರಿಸುವದಿಲ್ಲವೆಂದು ನಾನು ಹೇಗೆ ಪ್ರಮಾಣಮಾಡಿದೆನೋ ಹಾಗೆಯೇ ನಾನು ನಿನ್ನ ಮೇಲೆ ಇನ್ನು ಕೋಪಮಾಡುವದಿಲ್ಲ, ಗದರಿಸುವದಿಲ್ಲ ಎಂದು ಈಗ ಪ್ರಮಾಣಮಾಡಿದ್ದೇನೆ (ಯೆಶಾಯ 54:9).

ಯೆಹೆಜ್ಕೇಲನು ಹಳೆಯ ಒಡಂಬಡಿಕೆಯ ಇತರ ನೀತಿವಂತರ ಕುರಿತಾದ ಒಂದು ಸನ್ನಿವೇಶದಲ್ಲಿ ನೋಹನನ ಹೆಸರನ್ನು ಪ್ರಸ್ತಾಪಿಸುತ್ತಾನೆ: "ನೋಹ ದಾನಿಯೇಲ ಯೋಬ ಎಂಬೀ ಮೂವರು ಪುರುಷರು ಅದರಲ್ಲಿದ್ದರೂ ತಮ್ಮ ಸದಾಚಾರದಿಂದ ಸ್ವಂತಪ್ರಾಣಗಳನ್ನು ಮಾತ್ರ ಉಳಿಸಿಕೊಳ್ಳುತ್ತಿದ್ದರು; ಇದು ಕರ್ತನಾದ ಯೆಹೋವನ ನುಡಿ" (ಯೆಹೆಜ್ಕೇಲ 14:14).

"ಇವನು ಆದಾಮನ ಮಗನು; ಇವನು ದೇವರ ಮಗನು" (ಲೂಕ 3:23-38) ಎಂಬಷ್ಟು ಹಿಂದಕ್ಕೆ ಸಾಗುವ ಯೇಸು ಕ್ರಿಸ್ತನ ವಂಶಾವಳಿಯಲ್ಲಿ ನೋಹನು ಕಾಣಿಸಿಕೊಳ್ಳುವಿಕೆಯು ಖಂಡಿತವಾಗಿಯೂ ಆತನು ಇದ್ದನು ಎಂಬುದಕ್ಕೆ ವಿಶ್ವಾಸಾರ್ಹತೆಯನ್ನು ಒದಗಿಸುತ್ತದೆ. ಯೇಸುವು ತನ್ನ ಎರಡನೆಯ ಬರೋಣದ ಪರಿಸ್ಥಿತಿಗಳನ್ನು ಬಣ್ಣಿಸುವ ವೇಳೆ ಯೇಸುವು ನೋಹನ ಅನುಭವಗಳನ್ನು ಬಳಕೆ ಮಾಡುತ್ತಾನೆ:

> ನೋಹನ ದಿವಸಗಳು ಹೇಗಿದ್ದವೋ ಹಾಗೆಯೇ ಮನುಷ್ಯಕುಮಾರನ ಪ್ರತ್ಯಕ್ಷತೆಯೂ ಇರುವದು. ಹೇಗಂದರೆ ಜಲಪ್ರಳಯಕ್ಕೆ ಮುಂಚಿನ ದಿನಗಳಲ್ಲಿ ನೋಹನು ನಾವೆಯಲ್ಲಿ ಸೇರಿದ ದಿನದ ತನಕ ಜನರು ಉಣ್ಣುತ್ತಾ ಕುಡಿಯುತ್ತಾ ಮದುವೆಮಾಡಿಕೊಳ್ಳುತ್ತಾ ಮಾಡಿಕೊಡುತ್ತಾ ಇದ್ದರು (ಮತ್ತಾಯ 24:37, 38; ಲೂಕ 17:26, 27).

ಇಬ್ರಿಯರಿಗೆ ಪತ್ರಿಕೆಯ ಲೇಖಕನು ಮತ್ತು ಅಪೊಸ್ತಲನಾದ ಪೇತ್ರನು ಇವರು ನೋಹನು ದೇವರ ಕಡೆಗೆ ಹೊಂದಿದ್ದ ನಂಬಿಗಸ್ತಿಕೆಯಿಂದ ಪಾಠಗಳನ್ನು ಪಡೆದುಕೊಳ್ಳುತ್ತಾರೆ:

> ನಂಬಿಕೆಯಿಂದಲೇ ನೋಹನು ಅದುವರೆಗೆ ಕಾಣದಿದ್ದ ಸಂಗತಿಗಳ ವಿಷಯವಾಗಿ ದೈವೋಕ್ತಿಯನ್ನು ಹೊಂದಿ ಭಯಭಕ್ತಿಯುಳ್ಳವನಾಗಿ ತನ್ನ ಮನೆಯವರ ಸಂರಕ್ಷಣೆಗೋಸ್ಕರ ನಾವೆಯನ್ನು ಕಟ್ಟಿ ಸಿದ್ಧಮಾಡಿದನು. ಅದರಿಂದ ಅವನು ಲೋಕದವರನ್ನು ದಂಡನೆಗೆ ಪಾತ್ರರೆಂದು ನಿರ್ಣಯಿಸಿಕೊಂಡು ನಂಬಿಕೆಯ ಫಲವಾದ ನೀತಿಗೆ ಬಾಧ್ಯನಾದನು (ಇಬ್ರಿಯ 11:7).

> ... ಅಂದರೆ ಪೂರ್ವಕಾಲದಲ್ಲಿ ನೋಹನು ನಾವೆಯನ್ನು ಕಟ್ಟಿಸುತ್ತಿರಲು ದೇವರು ದೀರ್ಘಶಾಂತಿಯಿಂದ ಕಾದಿದ್ದಾಗ ... ಆ ನಾವೆಯೊಳಗೆ ಕೆಲವರು ಅಂದರೆ ಎಂಟೇ ಜನರು ಸೇರಿ ನೀರಿನ ಮೂಲಕ ರಕ್ಷಣೆಹೊಂದಿದರು (1 ಪೇತ್ರ 3:18-20).

> ... ಆತನು ಭಕ್ತಿಹೀನರಾದ ಪುರಾತನರ ಲೋಕವನ್ನು ಸುಮ್ಮನೆ ಬಿಡದೆ ಅವರ ಮೇಲೆ

ಜಲಪ್ರಲಯವನ್ನು ಬರಮಾಡಿದನು; ಆದರೆ ಸುನೀತಿಯನ್ನು ಸಾರುವವನಾಗಿದ್ದ ನೋಹನನ್ನೂ ಅವನೊಂದಿಗೆ ಬೇರೆ ಏಳು ಮಂದಿಯನ್ನೂ ಉಳಿಸಿದನು ... ಕರ್ತನು ಭಕ್ತರನ್ನು ಕಷ್ಟಗಳೊಳಗಿಂದ ತಪ್ಪಿಸುವದಕ್ಕೂ ದುರ್ಮಾರ್ಗಿಗಳನ್ನು ನ್ಯಾಯತೀರ್ಪಿನ ದಿನದ ತನಕ ಶಿಕ್ಷಾನುಭವದಲ್ಲಿ ಇಡುವದಕ್ಕೂ ಬಲ್ಲವನಾಗಿದ್ದಾನೆ (2 ಪೇತ್ರ 2:4-9).

---

## ಅಡಿಟಿಪ್ಪಣಿಗಳು

[1]Jacob Milgrom, "Blood," in *Encyclopaedia Judaica*, 2d ed., ed. Fred Skolnik (Detroit: Macmillan Reference USA, 2007), 3:771. [2]ನೋಡಿರಿ S. David Sperling, "Blood," in *The Anchor Bible Dictionary*, ed. David Noel Freedman (New York: Doubleday, 1992), 1:762. [3]Leonard J. Coppes, "דָּרַשׁ," in *TWOT*, 1:199. [4]Kenneth A. Mathews, *Genesis 1—11:26*, The New American Commentary, vol. 1A (Nashville: Broadman & Holman Publishers, 1996), 404. [5]ಇದು ಇಬ್ರಿಯ ಪದದ ಇನ್ನೊಂದು ಸಂಭಾವ್ಯ ಅರ್ಥವಾಗಿರಬಹುದು. (Coppes, "קוּם," in *TWOT*, 2:793.) [6]Victor P. Hamilton, *The Book of Genesis: Chapters 1—17*, The New International Commentary on the Old Testament (Grand Rapids, Mich.: Wm. B. Eerdmans Publishing Co., 1990), 316. [7]Coppes, "קֶשֶׁת," in *TWOT*, 2:819. [8]ನೋಹನ ಕಾಲದ ನಂತರದಲ್ಲಿ, ಪ್ರಾಚೀನ ಪೌರಾಣಿಕತೆಯಲ್ಲಿ ಸಹ ತನ್ನ ವೈರಿಗಳ ವಿರುದ್ಧವಾಗಿ ಆಕಾಶದಲ್ಲಿ ಬಿಲ್ಲು ಮತ್ತು ಬಾಣಗಳನ್ನು ಬಳಕೆ ಮಾಡಿದ ದೇವರೊಂದರ ಚಿತ್ರಣವು ಇತ್ತು. [9]W. Schottroff, "זכר," in *Theological Lexicon of the Old Testament*, trans. Mark E. Biddle, ed. Ernst Jenni and Claus Westermann (Peabody, Mass.: Hendrickson Publishers, 1997), 1:383. [10]F. J. Helfmeyer, "אוֹת," in *Theological Dictionary of the Old Testament*, trans. John T. Willis, ed. G. Johannes Botterweck and Helmer Ringgren (Grand Rapids, Mich.: Wm. B. Eerdmans Publishing Co., 1974), 1:177.

[11]ಸಿರಿಯದ ಯುದ್ಧವೀರರ ಬಣ್ಣನೆಯು ಕ್ರಿ.ಪೂ. ಮೂರನೆಯ ಶತಮಾನದ ಆರಂಭದಷ್ಟು ಹಿಂದೆ ಆಗಿತ್ತು. (Jack M. Sasson, "Circumcision in the Ancient Near East," *Journal of Biblical Literature* 85, no. 4 [December 1966]: 475–76.) A description of Egyptian circumcision dates to about 2300 B.C. (John A. Wilson, trans., "Circumcision in Egypt," in *Ancient Near Eastern Texts Relating to the Old Testament*, 3d ed., ed. James B. Pritchard [Princeton, N.J.: Princeton University Press, 1969], 326.) [12]John T. Willis, *Genesis*, The Living Word Commentary (Austin, Tex.: Sweet Publishing Co., 1979), 181. "ಪ್ರಾರಂಭಿಸಿದನು" ಎಂಬ ಕ್ರಿಯಾಪದವು חָלַל (*ಛಲಾಲ*) ಎಂಬುದರಿಂದ ಬರುತ್ತದೆ; ಈ ಪದದ ಕೆಲವು ರೂಪಗಳನ್ನು 4:26; 6:1; 11:6ರಲ್ಲಿ "ಆರಂಭಿಸಿದನು" ಎಂದು ಅನುವಾದಿಸಲಾಗಿದೆ. NIVಯು 9:20ನ್ನು ಇದೇ ವಿಧದಲ್ಲಿ ಅನುವಾದಿಸುತ್ತದೆ: "ಮಣ್ಣಿನ ಮಗನಾದ ನೋಹನು ಒಂದು ದ್ರಾಕ್ಷಾತೋಟವನ್ನು ನೇಡುವದಕ್ಕೆ *ಮುನ್ನಡೆದನು"* (ಒತ್ತಿ ಹೇಳಿದ್ದು ನನ್ನದು). [13]Jon D. Levenson, "Genesis," in *The Jewish Study Bible*, ed. Adele Berlin and Marc Zvi Brettler (New York: Oxford University Press, 2004), 25. [14]ಹಾಗಿದ್ದಾಗ್ಯೂ, ಉತ್ಖನನ ತಜ್ಞರು ಕಂಡು ಹಿಡಿದ ಅತಿ ಪ್ರಾಚೀನ ದ್ರಾಕ್ಷಾತೋಟವು ಅರ್ಮೇನಿಯದಲ್ಲಿನ ಒಂದು ಗುಹೆಯಲ್ಲಿ ಇತ್ತು, ಅದು ನೋಹನ ನಾವೆಯು ಬಂದು ನಿಂತುಕೊಂಡಂಹ ಪ್ರಾಂತ್ಯದೊಳಗೆ ಇರುವ ಸ್ಥಳವಾಗಿದೆ (http://news.nationalgeographic.com/news/2011/01/110111-oldest-wine-press-making-winery-armenia-science-ucla/; Internet; accessed 20 December, 2013.) In Babylonian tradition, the production of wine preceded the great flood. (*The Epic of Gilgamesh* 11.72–73.) [15]H. C. Leupold, *Exposition of Genesis*, vol. 1 (N.p.: Wartburg Press, 1942; reprint, Grand Rapids, Mich.: Baker Book House, 1953), 345. [16]F. Brent Knutson, "Naked," in *The International Standard Bible Encyclopedia*, rev. ed., ed. Geoffrey W. Bromiley (Grand Rapids, Mich.: Wm. B. Eerdmans Publishing Co., 1986), 3:480. ಪ್ರಕಟನೆ 16:15ರ ಮೇಲೆ ವ್ಯಾಖ್ಯಾನಿಸುವ ವೇಳೆ, Knutsonನು ಹೇಳಿದ್ದೇನೆಂದರೆ "ಎಚ್ಚರಗೊಂಡು ಬಟ್ಟೆಯನ್ನು ಧರಿಸಿರುವದು ಎಂಬುದನ್ನು ನಿದ್ದೆಯಲ್ಲಿದ್ದನು ಮತ್ತು ಬೆತ್ತಲೆಯಾಗಿದ್ದನು ಎಂಬುದಕ್ಕೆ ವಿರುದ್ಧ ಹೋಲಿಕೆಯನ್ನು ಮಾಡಲಾಗಿದೆ." [17]Leupold, 346. [18]*The Tale of Aqhat* A.1.32–33. [19]Willis, 183. ನೋಹನ ಶಾಪವು ಕಾನಾನನ ಏಳು ಸಂತತಿಯವರಾಗಿದ್ದ ಏಳು ಜನಾಂಗಗಳಿಗೆ ಸಂಬಂಧಿಸಿತ್ತು; ಯೆಹೋಶುವ ಮತ್ತು ಇಸ್ರಾಯೇಲ್ಯರು ಕಾನಾನ್ ದೇಶದ ಮೇಲೆ ಆಕ್ರಮಣ ಮಾಡಿದ ಸಂದರ್ಭದಲ್ಲಿ ಈ ದುಷ್ಟ ಜನರು

ಆ ದೇಶವನ್ನು ಆಕ್ರಮಿಸಿಕೊಂಡಿದ್ದರು (ಧರ್ಮೋಪದೇಶಕಾಂಡ 7:1-11). ಶಾಪವು ಹಾಮನ ಇತರ ಸಂತತಿಯರ ಮೇಲೆ ಪರಿಣಾಮವನ್ನು ಹೊಂದಿರಲಿಲ್ಲ, ಉದಾಹರಣೆಗೆ ಆಫ್ರಿಕಾದಲ್ಲಿ ನೆಲೆಗೊಂಡಿರುವಂಥ ಜನರು (ನೋಡಿರಿ ಕೀರ್ತನೆ 105:23; 106:21, 22). ಐತಿಹಾಸಿಕವಾಗಿ, ಕೆಲವರು ಆದಿಕಾಂಡ 9:25ನ್ನು ದುರ್ಬಳಕೆ ಮಾಡಿಕೊಂಡು ತಾವು ಆಫ್ರಿಕಾದ ವಂಶಸ್ಥರಿಂದ ಬಂದವರನ್ನು ದಾಸ್ಯಕ್ಕೆ ಗುರಿಮಾಡಿ ಅವರೊಂದಿಗೆ ಕೆಟ್ಟದ್ದಾಗಿ ನಡೆದುಕೊಳ್ಳುವದಕ್ಕೆ ಒಂದು ಪುರಾವೆಯ ವಾಕ್ಯವಾಗಿ ಬಳಸಿಕೊಳ್ಳುತ್ತಾರೆ. [20]15:16ರಲ್ಲಿ, ಕಾನಾನಿನ ನಿವಾಸಿಗಳನ್ನು ಅಮ್ಮೋನಿಯರು ಎಂದು ಕರೆಯಲಾಗಿದ್ದು, ಇದು ಇಸ್ರಾಯೇಲ್ಯರು ವಾಗ್ದಾನ ದೇಶದಿಂದ ತೊಲಗಿಸಿದ ಜನರನ್ನು ಸೂಚಿಸುವದಕ್ಕೆ ಬಳಸುವ ಮತ್ತೊಂದು ಪದವಾಗಿದೆ (ನ್ಯಾಯಸ್ಥಾಪಕರು 6:10; 1 ಸಮುವೇಲ 7:14; 1 ಅರಸು 21:26; 2 ಅರಸು 21:11).

[21]Theophilus Goldridge Pinches and Roland K. Harrison, "Japheth," in *The International Standard Bible Encyclopedia*, rev. ed., ed. Geoffrey W. Bromiley (Grand Rapids, Mich.: Wm. B. Eerdmans Publishing Co., 1982), 2:967. [22]"Targum of Onkelos," in *The Targums*, trans. J. W. Etheridge (New York: KTAV Publishing House, 1968), 54. Book of Jubilees ಮತ್ತು Babylonian Talmud ಎಂಬವುಗಳಲ್ಲಿ ಇದೇ ರೀತಿಯ ಅಭಿಪ್ರಾಯಗಳು ಕಂಡು ಬರುತ್ತವೆ. "ಶೆಕಿನಾ" ಎಂಬುದು ಯೆಹೋವನ ಮಹಿಮೆಯನ್ನು ಸೂಚಿಸುತ್ತದೆ. [23]Philip S. Alexander, "Targum, Targumim," in *The Anchor Bible Dictionary*, 6:321. [24]Clayton G. Libolt, "Canaan," in *The International Standard Bible Encyclopedia*, rev. ed., ed. Geoffrey W. Bromiley (Grand Rapids, Mich.: Wm. B. Eerdmans Publishing Co., 1979), 1:590. [25]*The Epic of Gilgamesh* 11.193–94. [26]6:4ರಲ್ಲಿ, NASBಯು ಹೇಳುವದೇನೆಂದರೆ ಅವರು "ಹೆಸರುಗೊಂಡವರು" (ಅಕ್ಷರಶಃ, "ಪ್ರಖ್ಯಾತ ವ್ಯಕ್ತಿಗಳು"). ಸರಳವಾಗಿ ಹೇಳುವದಾದರೆ, ಅವರು ಸಮಾಜದ ವಿಭಾಗಗಳಲ್ಲಿ ದೊಡ್ಡ ಹೆಸರನ್ನು ಮಾಡಿಕೊಂಡಿದ್ದರು, ಅವರ ದುಷ್ಕೃತ್ಯಗಳಲ್ಲಿ ಅವರನ್ನು ಅನುಸರಿಸುವವರಿಗೆ ಅವರು ವೀರರಂತೆ ಆಗಿದ್ದರು. [27]ಪೌಲನು "ಕತ್ತಿ" ಎಂಬುದಕ್ಕೆ ಬಳಸಿದ ಗ್ರೀಕ್ ಪದವು μάχαιρα (*ಮಚೈರಾ*), ಮತ್ತು ಇದು ಮರಣದಂಡನೆ ವಿಧಿಸುವವನ ಕತ್ತಿಯನ್ನು ಸೂಚಿಸುತ್ತದೆ (ಅಪೊಸ್ತಲರ ಕೃತ್ಯಗಳು 12:2ರಲ್ಲಿ ಇರುವಂತೆ), ಅದು "ದುಷ್ಕಾರ್ಯಗಳನ್ನು ಮಾಡುವವರನ್ನು ದಂಡಿಸುವದಕ್ಕೆ ಇರುವ ಅಧಿಕಾರ" ದ ಸಂಕೇತವಾಗಿತ್ತು. (Walter Bauer, *A Greek-English Lexicon of the New Testament and Other Early Christian Literature*, 3d ed., rev. and ed. Frederick William Danker [Chicago: University of Chicago Press, 2000], 622.) [28]ಪ್ರಕಟನೆ 13:1-10ರಲ್ಲಿನ "ಮೃಗ"ವು ರೋಮನ್ ಸರ್ಕಾರವನ್ನು ಪ್ರತಿನಿಧಿಸುತ್ತದೆ, ಮತ್ತು ಪ್ರಕಟನೆ 13:11-18ರಲ್ಲಿ ಬಣ್ಣಿಸಲಾಗಿರುವ ಸುಳ್ಳು ಪ್ರವಾದಿಯು ಚಕ್ರವರ್ತಿಯನ್ನು ಆರಾಧಿಸುವಿಕೆಯ ಪಾಷಂಡಮತದ ಸೂಚ್ಯಾರ್ಥವಾಗಿರುತ್ತಾನೆ. [29]Francis Brown, S. R. Driver, and Charles A. Briggs, *A Hebrew and English Lexicon of the Old Testament* (Oxford: Clarendon Press, 1962), 761–63. [30]ಕ್ರೈಸ್ತರಾದವರು ತಮ್ಮ ಸಹೋದರರಿಗೆ ಇಷ್ಟವಾದ ಯಾವದೇ ಆಗಲಿ ಅಥವಾ ಎಲ್ಲವನ್ನು ತ್ಯಜಿಸಬೇಕೆಂಬುದು ಪೌಲನ ತಾತ್ಪರ್ಯವಾಗಿರಲಿಲ್ಲ. ಆತನು ಅವರ ನಂಬಿಕೆ ಮತ್ತು ಆತ್ಮೀಕ ಜೀವಿತಕ್ಕೆ ಒಂದು "ವಿಘ್ನ" ಆಗಬಹುದಾದ ಸಂಗತಿಯನ್ನು ಕುರಿತು ಮಾತಾಡುತ್ತಿದ್ದಾನೆ (ರೋಮಾ 14:13, 21). ಆತನು ಅಧ್ಯಾಯದಲ್ಲಿ ಈ ಮುಂಚೆ ಹೇಳಿದ ಪ್ರಕಾರ, "ಯಾವನಿಗೋಸ್ಕರ ಕ್ರಿಸ್ತನು ಪ್ರಾಣಕೊಟ್ಟನೋ ಅವನನ್ನು ನಿನಗೆ ಇಷ್ಟವಾದ ಆಹಾರದ ನಿಮಿತ್ತ ಕೆಡಿಸಬಾರದು" (ರೋಮಾ 14:15). [31]ಒಂದು ವೇಳೆ ಪೌಲನು ಇಪ್ಪತ್ತೊಂದನೆಯ ಶತಮಾನದಲ್ಲಿ ಜೀವಿಸಿದ್ದರೆ, ಆತನು ಖಂಡಿತವಾಗಿಯೂ ಮೇಲಿನ ಹೇಳಿಕೆಗೆ ಈ ಮಾತುಗಳನ್ನು ಸಹ ಸೇರ್ಪಡೆಗೊಳಿಸಿರುತ್ತಿದ್ದನು: "ನೀವು ಕಾರನ್ನು ಚಲಾಯಿಸುವ ವೇಳೆ ವಿವೇಚನೆಯನ್ನು ಕೆಡಿಸುವಂತಹ ಯಾವದೇ ಪದಾರ್ಥವನ್ನು ಸೇವಿಸಬೇಡಿರಿ." ಪ್ರತಿ ವರ್ಷವೂ ಕುಡಿತದ ಮತ್ತಿನಲ್ಲಿರುವಂಥ ಚಾಲಕರಿಂದಾಗಿ ಸಾವಿರಾರು ಅಪಘಾತಗಳು ಸಂಭವಿಸುತ್ತವೆ. ಇದು ಮದ್ಯದಿಂದ ಕೂಡಿರುವ ಪಾನಿಯಗಳನ್ನು ಸೇವಿಸುವದರಿಂದಾಗುವ ಪರಿಣಾಮಗಳ ಬಗ್ಗೆ ಕ್ರೈಸ್ತರು ಒಂದು ಕ್ಷಣ ನಿಂತು ಗಂಭೀರವಾಗಿ ಯೋಚಿಸುವಂತೆ ಮಾಡತಕ್ಕದ್ದು.